ಶ್ರೀ ಡಿ.ಆರ್. ಪಾಟೀಲ್ :— ಮಾನ್ಯ ಅಧ್ಯಕ್ಷರೆ, ಮೊನ್ನೆ ದಿವಸ ಜರುಗಿದ ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಗೆ ಆಗಮಿಸಿದ್ದ ಮಾನ್ಯ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಯವರು ಮಾತನಾಡಿ, ಸದರಿ ಯೋಜನೆಗೆ ಸರ್ಕಾರದಿಂದ ಕೂಡಲೇ ಮಂಜೂರಾತಿ ಕೊಡಿಸಿ ಮುಂದಿನ ಬೇಸಿಗೆಯೊಳಗೆ ಯೋಜನೆ ಕಾರ್ಯಗತಗೊಳ್ಳುವಂತೆ ಕ್ರಮ ಕೈಗೊಳ್ಳುವುದಾಗಿ ಭರವಸೆ ಕೊಟ್ಟಿದ್ದಾರೆ. ಆದುದರಿಂದ, ಆ ಭರವಸೆಯನ್ನು ಈಡೇರಿಸುವುದಕ್ಕೆ ಈ ಸದನದಲ್ಲಿ ತಾವು ಭರವಸೆ ಕೊಡಬೇಕು. ಏಕೆಂದರೆ, ಮಂತ್ರಿಮಂಡಲದ ಮುಂದಿನ ಸಭೆಯಲ್ಲಿ ಇದಕ್ಕೆ ಕ್ಲಿಯರೆನ್ಸ್ ಕೊಟ್ಟು ಹಣಕಾಸನ್ನು ಹೊಂದಿಸಿಕೊಂಡು ಬರುವ ಮಾರ್ಚ್ ತಿಂಗಳೊಳಗೆ, ಏಕೆಂದರೆ, ತಮಗೆ ಗೊತ್ತಿರುವಂತೆ ಬೇಸಿಗೆಯಲ್ಲಿ ಒಮ್ಮೊಮ್ಮೆ 10-15 ದಿವಸಗಳಿಗೊಮ್ಮೆ ಕುಡಿಯುವ ನೀರಿನ ಸರಬರಾಜಾಗುತ್ತದಾದ್ದರಿಂದ ಬೇಸಿಗೆ ಕಾಲದಲ್ಲಿ ಈ ತಾಪತ್ರಯ ಬಾರದಂತೆ ಕ್ರಮ ಕೈಗೊಳ್ಳುತ್ತೇವೆನ್ನುವ ಭರವಸೆಯನ್ನು ನಿಮ್ಮಿಂದ ಬಯಸುತ್ತೇನೆ.

ಶ್ರೀ ಎಂ.ಎಸ್. ಪಾಟೀಲ್ :— ಮುಂದಿನ ಸಚಿವ ಸಂಪುಟದ ಸಬೆಯಲ್ಲಿ ಈ ಕುರಿತು ತೀರ್ಮಾನ ಕೈಗೊಳ್ಳುವುದಕ್ಕಾಗುವುದಿಲ್ಲ. ಆದರೆ, ಆದಷ್ಟು ಬೇಗನೆ ನಾನು ತೀರ್ಮಾನ ತೆಗೆದುಕೊಳ್ಳುತ್ತೇನೆನ್ನುವ ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ಹಾಗೂ ಮುಂದಿನ ಬೇಸಿಗೆಯೊಳಗೆ ಸದರಿ ಯೋಜನೆಯನ್ನು ಕಾರ್ಯಗತಗೊಳಿಸುವ ವ್ಯವಸ್ಥೆ ಮಾಡಬೇಕೆಂದು ಏನು ಕೇಳುತಿದ್ದಾರೆ, ಆ ಕುರಿತು ಕಾಮಗಾರಿಯನ್ನು ಕೈಗೊಳ್ಳುವುದಾಗಿ ಭರವಸೆ ಕೊಡುತ್ತಿದ್ದೇನೆ.

5) ಶಾಸನ ರಚನಾ ಕಾರ್ಯಕಲಾಪಗಳು

(ಅ) ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗಿಕರಿಸುವುದು.

ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕ, 1998 (ಮುಂದುವರೆದ ಚರ್ಚೆ)

ಅಧ್ಯಕ್ಷರು :— ಮಾನ್ಯ ಕಾಗೋಡು ತಿಮ್ಮಪ್ಪನವರೆ, ನಿನ್ನೆ ದಿವಸ ನಿಮ್ಮ ಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರು ಎಲ್ಲಾ ಬೇಡಿಕೆಗಳನ್ನು ಒಟ್ಟಿಗೆ ಮೂವ್ ಮಾಡಿಸಿದರೆ ಮಾತನಾಡಬಯಸುವ ಮಾನ್ಯ ಸದಸ್ಯರುಗಳಿಗೆ ವೈಡ್ ರೇಂಜ್ ಇರುತ್ತದೆ, ಅಧಿವೇಶನದ ಅವಧಿ ಕಡಿಮೆಯಿದ್ದು ವಿಸ್ತರಣೆಯಾಗುವುದಿದಲ್ಲವಾದ್ದರಿಂದ ಯಾವ್ಯಾವ ಮಾನ್ಯ ಸದಸ್ಯರಿಗೆ ತಮಗೆ ಅನುಕೂಲವಾಗುವ ಬೇಡಿಕೆಗಳ ಮೇಲೆ ಮಾತನಾಡಬಹುದು ಎಂಬ ಒಂದು ಸಲಹೆಯನ್ನು ಕೊಟ್ಟರು. ನಾನು ಅವರ ಸಲಹೆಯನ್ನು ಸ್ವೀಕರಿಸಿ ಇವೊತ್ತು ಈ ತೀರ್ಮಾನಕ್ಕೆ ಬಂದಿದ್ದೇನೆ. ನಿನ್ನೆ ತಾವು ಸದನದಲ್ಲಿರಲಿಲ್ಲ, ದಯಮಾಡಿ ಸಹಕರಿಸಬೇಕು.

11.20 ಪಿ.ಎಂ.

ಶ್ರೀ ಕಾಗೋಡು ತಿಮ್ಮಪ್ಪ :— ಇದು ಯಾವ ರೀತಿ?

ಅಧ್ಯಕ್ಷರು :— ನಾವು ನೀವು ಯಾವ ರೀತಿ ಇದ್ದೆವೋ ಆ ರೀತಿ.

ಶ್ರೀ ಕಾಗೋಡು ತಿಮ್ಮಪ್ಪ :— ಕೊನೆಯ ಅಧಿವೇಶನದಲ್ಲಿ ನಾವು ಇದ್ದೇವೆ. ಕೊನೆಯ ಪಕ್ಷ ನಾಲ್ಕೈದು ಗುಂಪುಗಳನ್ನಾಗಿ ಮಾಡಿ ಮಾತನಾಡಲು ಅವಕಾಶ ಕೊಟ್ಟಿದ್ದರೆ ಚೆನ್ನಾಗಿತ್ತು.

ಅಧ್ಯಕ್ಷರು :— ಅದು ನನ್ನ ಆಲೋಚನೆ ಅಲ್ಲ. I will go by the consensus of the House. It was suggested by the Leader of Opposition.

ಕಾಗೋಡು ತಿಮ್ಮಪ್ಪ :— ಯಾರ ಆಲೋಚನೆ ಏನಾದರೂ ಇರಬಹುದು. ಆದರೆ ತಮ್ಮ ಆಲೋಚನೆ ಈ ಸದನಕ್ಕೆ ಮಾರ್ಗದರ್ಶನವಾಗಬೇಕಲ್ಲಾ?

ಅಧ್ಯಕ್ಷರು :— ಮಾನ್ಯ ವಿರೋಧ ಪಕ್ಷದ ನಾಯಕರು ಆ ರೀತಿ ಮಾಡಲು ಹೇಳಿದರು, ಅವರೂ ಸಮ್ಮತಿಸಿದರು, ನನಗೂ ಸರಿ ಎಂದು ಅನ್ನಿಸಿತು. ಎಲ್ಲರೂ ಚರ್ಚೆ ಮಾಡಲು ಮುಕ್ತ ಅವಕಾಶ ದೊರೆಯುತ್ತದೆ ಎಂದು ಅದಕ್ಕೆ ಆಗಲಿ ಎಂದು ಹೇಳಿದೆ.

ಶ್ರೀ ಕಾಗೋಡು ತಿಮ್ಮಪ್ಪ :— ಕೆಲವು ಸದಸ್ಯರು ಮೊದಲು ಮಂಡಿಸಿದ್ದಂಥ ಬೇಡಿಕೆಯ ಮೇಲೆ ಮಾತನಾಡಿದ್ದಾರೆ. ಬೇರೆ ಬೇಡಿಕೆಗಳ ಬಗ್ಗೆ ಅನಂತರ ಮಾತನಾಡಬಹುದು ಎಂದು ಅವರ ತಿಳುವಳಿಕೆಯಲ್ಲಿ ಇತ್ತು.

ಅಧ್ಯಕ್ಷರು :— ಇದರಲ್ಲಿ ಯಾರಿಗೂ ಅನಾನುಕೂಲ ಇಲ್ಲ. ಬೇರೆ ಮಾನ್ಯ ಸದಸ್ಯರಿಗೆ ಬೇರೆ ಬೇಡಿಕೆಯ ಮೇಲೆ ಮಾತನಾಡಬೇಕು ಎಂದರೆ ಅವಕಾಶ ಸಿಗುತ್ತದೆ. ಓಟಿಂಗ್‌ಗೆ ಎಲ್ಲವನ್ನೂ ಒಟ್ಟಿಗೆ ಹಾಕುತ್ತೇವೆ ಅಷ್ಟೆ. ಇದರಲ್ಲಿ ತೊಂದರೆ ಏನಿದೆ?

ಶ್ರೀ ಕಾಗೋಡು ತಿಮ್ಮಪ್ಪ :— ಬೇಡಿಕೆಯ ಚರ್ಚೆಗೆ ಇರಬೇಕಾಗಿದ್ದ ಪ್ರಾಮುಖ್ಯತೆಯನ್ನೆಲ್ಲಾ ಹೊಳೆಯಲ್ಲಿ ಹುಣಸೆ ಹಣ್ಣನ್ನು ತೊಳೆದಂತೆ ಆಗುತ್ತದೆ.

ಅಧ್ಯಕ್ಷರು :— ಹುಣಸೆ ಮರವೇ ಹೋಗಿ ಕೆರೆಗೆ ಬಿದ್ದುಬಿಟ್ಟಿದೆ.

ಶ್ರೀ ಜಿ.ಸಿ. ಮಾಧುಸ್ವಾಮಿ :— ಇದು ವಿಧಾನಪರಿಷತ್‌ನಲ್ಲಿ ಮೊದಲೇ ಚರ್ಚೆಯಾಗಿ ಇಲ್ಲಿಗೆ ಅನಂತರ ಬರುತ್ತಿರುವುದು ಒಳ್ಳೆಯ ಸಂಪ್ರದಾಯವೇ?

ಅಧ್ಯಕ್ಷರು :— ಹೋದ ಸಲ ಇದು ನಮ್ಮ ಅಜೆಂಡಾದಲ್ಲಿ ಇತ್ತು. ನಮ್ಮ ಅಜೆಂಡಾವನ್ನು ನೋಡಿಕೊಂಡು ವಿಧಾನ ಪರಿಷತ್‌ನವರು ಅಜೆಂಡಾವನ್ನು ನಿಗದಿ ಮಾಡಿಕೊಳ್ಳುತ್ತಾರೆ. ಬಿ.ಎಸ್.ಸಿ.ನಲ್ಲಿ ಅಗ್ರಿಯಾಗಿ ಬಂದು ನಾವು ಚರ್ಚೆ ಮಾಡಲು

ಆಗಲಿಲ್ಲ. In the meanwhile, they went ahead with their agenda. ಕಳೆದ ಅಧಿವೇಶನದಲ್ಲಿ ಈ ಬಿಲ್ಲು ಒಂದು ಮತ್ತು ಬೆಂಗಳೂರು ನಗರದಲ್ಲಿ ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸುವ ಬಿಲ್ಲು. ಈ ಎರಡೂ ಬಿಲ್ಲುಗಳು ಒಟ್ಟಿಗೆ ಬಂದವು ಅದರ ಬಗ್ಗೆ ಬಿ.ಎಸ್.ಸಿ.ಯಲ್ಲಿ ಚರ್ಚೆ ಮಾಡಿದೆವು. ಅಜೆಂಡಾದಲ್ಲಿ ಇದ್ದ ಅದನ್ನು ಬಿ.ಎಸ್.ಸಿ.ಯಲ್ಲಿ ಚರ್ಚೆ ಮಾಡಿ ಒಪ್ಪಿಕೊಂಡು ಬಂದು ಇಲ್ಲಿ ನಾವು ಅದನ್ನು ತೆಗೆದುಕೊಳ್ಳಲು ಆಗಲಿಲ್ಲ. ನಾವು ಇಬ್ಬರೂ ಒಟ್ಟಿಗೆ ಮಾತನಾಡಿಕೊಂಡಿದ್ದೆವು. ಅವರ ಅಜೆಂಡಾದಲ್ಲಿ ಇದು ಬಂದುಬಿಟ್ಟಿತು. They went ahead with their agenda.

ಶ್ರೀ ಜೆ.ಸಿ. ಮಾಧುಸ್ವಾಮಿ :— ನಾನು ಇದೊಂದು ಬಿಲ್ಲಿನ ಬಗ್ಗೆ ಪ್ರಸ್ತಾಪ ಮಾಡುತ್ತಿಲ್ಲ. Is it a fair development on the part of the Assembly?

MR. SPEAKER :— If we don't stick to opur schedule, can we direct the Upper House not to go by their schedule?

SRI J.C. MADHUSWAMY :— You need not direct them, Sir. ನಾವು ಬಿಲ್ಲುಗಳ ಬಗ್ಗೆ ಮೊದಲು ಚರ್ಚೆ ಮಾಡದೆಯೇ ಮೇಲ್ಮನೆಯವರೇ ಮೊದಲು ಚರ್ಚೆ ಮಾಡಿ ಮುಗಿಸಿ ಇಲ್ಲಿಗೆ ಬರುವುದಾದರೆ ಅದು ಒಳ್ಳೆಯದೆ?

ಅಧ್ಯಕ್ಷರು :— ತಾವು ಹೇಳುವುದು ಸರಿ. ನಾವು ಅಜೆಂಡಾವನ್ನು ನಿಗಧಿಮಾಡಿಕೊಂಡಿದ್ದೇವೆ. ಅದರ ಪ್ರಕಾರ ನಾವು ಹೋಗದಿದ್ದರೆ ಅದಕ್ಕೆ ಅವರು ಕಾರಣಕರ್ತರು?

ಶ್ರೀ ಬಿ.ಎಸ್. ಯಡಿಯೂರಪ್ಪ :— ಮಾನ್ಯ ಅಧ್ಯಕ್ಷರೆ, ಬಿಲ್ ಪಾಸ್ ಮಾಡತಕ್ಕ ಸಾರ್ವಭೌಮ ಅಧಿಕಾರ ಈಗ ಮನೆಗೆ ಇದೆ. ಆ ಬಿಲ್ಲು ಇಲ್ಲಿ ಇಂಟ್ರಡ್ಯೂಸ್ ಆದಮೇಲೆ ಇಲ್ಲಿ ಚರ್ಚೆಯಾಗಬೇಕು. ಯಾವುದಾದರೂ ಕಾರಣಕ್ಕಾಗಿ ಇಲ್ಲಿ ಚರ್ಚೆಯಾಗುವ ಮೊದಲೇ ಅಲ್ಲಿ ತೆಗೆದುಕೊಂಡು ಬಿಟ್ಟರೆ ಅದರ ಮಹತ್ವವೇ ಹೊರಟು ಹೋಗುತ್ತದೆ.

ಅಧ್ಯಕ್ಷರು :— ಮಾನ್ಯ ಯಡಿಯೂರಪ್ಪನವರೆ, ಅಂದು ತಾವು ಇರಲಿಲ್ಲವೆಂದು ಕಾಣುತ್ತದೆ. ನಾವು ಇಲ್ಲಿ ತೀರ್ಮಾನ ಮಾಡಿದ ಮೇಲೆ ನಮ್ಮ ಕಾರ್ಯಕ್ರಮವನ್ನು ನೋಡಿಕೊಂಡು ಮೇಲ್ಮನೆಯವರು ಅಜೆಂಡಾ ನಿಗದಿ ಮಾಡಿಕೊಳ್ಳುತ್ತಾರೆ. ನಾವು ಈ ಬಿಲ್ಲಿನ ಬಗ್ಗೆ ಒಪ್ಪಿಕೊಂಡು ಚರ್ಚೆ ಮಾಡಬೇಕೆಂದು ಬಿ.ಎಸ್.ಸಿಯಲ್ಲಿ ಅಂಗೀಕಾರವಾಗಿ ಅನಂತರ ಏನೋ ಗದ್ದಲವಾಗಿ ಅದನ್ನು ಕೈಬಿಟ್ಟೆವು. ಆದರೆ ಮೇಲ್ಮನೆಯವರು ಚರ್ಚೆಯನ್ನು ಮುಂದುವರೆಸಿದರು. ನಾವು ನಮ್ಮದೇ ಆದ ಕಾರಣಕ್ಕಾಗಿ ತೆಗೆದುಕೊಂಡಿಲ್ಲ, ನೀವೂ ನಿಲ್ಲಿಸಿ ಎಂದು ಹೇಳಲು ಸಾಧ್ಯವಾಗುತ್ತದೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ :— ಯಾವುದೆಲ್ಲಾ ಬಿಲ್‌ಗಳು ಬರುತ್ತದೆ ಎಂಬ ಬಗ್ಗೆ ತಮಗೆ ಮೊದಲೇ ಮಾಹಿತಿ ಬಂದರೆ ಇಲ್ಲಿನ ಬೇರೆ ಕಾರ್ಯಕಲಾಪಗಳನ್ನು ಬದಿಗಿಟ್ಟು ಆದರ ಬಗ್ಗೆ ಚರ್ಚೆಯಾಗಿ ಆನಂತರ ಮೇಲ್ಮನೆಯಲ್ಲಿ ಪ್ರಾರಂಭವಾದರೆ ಇದಕ್ಕೆ ಮಹತ್ವ ಇರುತ್ತದೆ.

ಅಧ್ಯಕ್ಷರು :— ನಮ್ಮ ನಿಗಧಿತ ಕರ್ತವ್ಯವನ್ನು ನಿರ್ವಹಣೆ ಮಾಡುವುದರಲ್ಲಿ ಆ ದಿವಸ ನಾವು ವಿಫಲರಾದೆವು. ಮೇಲ್ಮನೆಯವರು ಅವರ ಕಾರ್ಯಕ್ರಮ ಪಟ್ಟಿಯಂತೆ ಹೋಗಿದ್ದಾರೆ. ಆದ್ದರಿಂದ ಈ ಕೆಲಸವಾಗಿದೆ. ಬಿ.ಎಸ್.ಸಿ.ಯಲ್ಲಿ ಅಂಗೀಕಾರವಾಗಿ ಬಂದಮೇಲೆ ನಾವು ಅದರಂತೆ ಹೋಗಬೇಕಲ್ಲಾ.

ಜೆ.ಸಿ. ಮಾಧುಸ್ವಾಮಿ :— ಬಿಲ್ಲುಗಳ ಬಗ್ಗೆ ನಮಗೆ ಯಾರಿಗೂ ಆಸಕ್ತಿಯೇ ಇಲ್ಲ ಎಂಬ ಭಾವನೆ ಹೊರಗಡೆ ಬಂದಿದೆ.

ಅಧ್ಯಕ್ಷರು :— ಅದು ಸತ್ಯ ಅಲ್ಲವೆ?

ಶ್ರೀ ಜೆ.ಸಿ. ಮಾಧುಸ್ವಾಮಿ :— ಹೇಗೆ ಸತ್ಯ ಆಗುತ್ತದೆ?

MR SPEAKER :— Touch your heart and tell me

SRI J.C. MADHUSWAMY :— We are interested in discussing and passing the bills.

MR. SPEAKER :— I am not talking about Mr. Madhuswamy. Search your soul and tell me whether has that taken the priority in this House? I want you to answer sincerely. I have expressed this agency on several occassions.

ಶ್ರೀ ಜೆ.ಸಿ. ಮಾಧುಸ್ವಾಮಿ :— ತಾವೇ ಇದಕ್ಕೆ ಏನಾದರೂ ಒಂದು ಔಷಧಿಯನ್ನು ಕಂಡುಹಿಡಿಯಬೇಕು.

MR SPEAKER :— That is right. I agree with you.

ಟಿ.ಬಿ. ಜಯಚಂದ್ರ :— ಮಾನ್ಯ ಅಧ್ಯಕ್ಷರೆ, ತಿದ್ದುಪಡಿ ವಿಧೇಯಕಗಳು ಮೊದಲು ಇಲ್ಲಿ ಬಂದು ಚರ್ಚೆಯಾಗಬೇಕು. ಇವತ್ತು ಬಂದಿರುವ ವಿಧೇಯಕ ಮೇಲ್ಮನೆಯಲ್ಲಿ ಈಗಾಗಲೇ ಅಂಗೀಕಾರವಾಗಿ ಇಲ್ಲಿಗೆ ಬಂದಿರುವ ಸಂದರ್ಭದಲ್ಲಿ ಹೊಸದಾಗಿ ತಿದ್ದುಪಡಿಯನ್ನು ಪ್ರಪೋಸ್ ಮಾಡಿದ್ದಾರೆ. ಅದನ್ನು ಈಗ ಸರ್ಕ್ಯುಲೇಟ್ ಮಾಡುತ್ತಿದ್ದಾರೆ. ಅಂಥ ಸಂದರ್ಭದಲ್ಲಿ

ಇದು ಮತ್ತೆ ಮೇಲ್ಮನೆಗೆ ಹೋಗಬೇಕಾಗುತ್ತದೆ. ಅದನ್ನು ತಪ್ಪಿಸುವುದಕ್ಕಾಗಿ ಮೊದಲು ಇಲ್ಲಿ ಇಂಟ್ರಡ್ಯೂಸ್ ಆಗಿ ಅನಂತರ ಅಲ್ಲಿಗೆ ಹೋದರೆ ಒಳ್ಳೆಯದು.

ಅಧ್ಯಕ್ಷರು :— ಈ ಬಿಲ್ ಇಂಟ್ರಡ್ರಕ್ಷನ್ ಎರಡೂ ಕಡೆ ಒಂದೇ ಸಲ ಆಯಿತು. It was a gentlemenly agreement that we will take up this Bill for discussion. ನಾವು ನಮ್ಮದೇ ಆದ ಕಾರಣಕ್ಕಾಗಿ ಇಲ್ಲಿ ಚರ್ಚೆಗೆ ತೆಗೆದುಕೊಳ್ಳಲು ಆಗಲಿಲ್ಲ. ಆದರೆ ಅವರು ಅವರ ಅಜೆಂಡಾದಲ್ಲಿ ಸೇರಿಸಿದ್ದರು; ಅದರ ಪ್ರಕಾರ ನಡೆದುಕೊಂಡರು. They went ahead with their schedule and whatever point you have raised now, about certain amemdments introduced, they have to get the ratification of the Council and again it has to go before the Council. ಮಾಧುಸ್ವಾಮಿಯವರು ಎತ್ತಿರುವ ವಿಚಾರ ಬಹಳ ಗಹನವಾದುದು. ಮಾನ್ಯ ಯಡಿಯೂರಪ್ಪನವರು ಹೇಳಿರತಕ್ಕದ್ದನ್ನು ನಾನು ಒಪ್ಪುತ್ತೇನೆ. ಕಡೆಯ ಹಂತದಲ್ಲಾದರೂ ಇದರ ಬಗ್ಗೆ ನಮ್ಮಗಳ ಗಮನ ಹೋಯಿತಲ್ಲಾ ಎಂದು ನನಗೆ ಸಂತೋಷವಾಗಿದೆ. ನಿಜವಾಗಿಯೂ ಇದರ ಕಡೆಗೆ ನಾವು ಗಮನ ಕೊಡಬೇಕಾಗುತ್ತದೆ. ಈ ಪದ್ಧತಿ ಒಳ್ಳೆಯದಲ್ಲ ಎಂಬುದನ್ನು ನಾನು ಅಕ್ಷರಶಃ ಒಪ್ಪಿಕೊಳ್ಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ :— ಇಲ್ಲಿ ಬಿಲ್ ಮೇಲೆ ಚರ್ಚೆ ಆದ ಮೇಲೆಯೇ ಅಲ್ಲಿ ಆಗುತ್ತಿದ್ದದ್ದು. ಹಿಂದೆ ಯಾವಾಗಲೂ ಈ ರೀತಿ ಆಗಿರಲಿಲ್ಲ. ಇದು ಯಾವುದೋ ಎಕ್ಸೆಪ್ಷನ್ ಇರಬಹುದು.

ಅಧ್ಯಕ್ಷರು :— ಹಿಂದೆ ಈ ರೀತಿಯಾಗಿದ್ದಕ್ಕೆ ನಾವು ಅವಕಾಶವನ್ನೂ ಕೊಟ್ಟಿಲ್ಲ. ಮೇಲ್ಮನೆಯವರೂ ಸಹ ಆ ರೀತಿ ಮಾಡುವುದಿಲ್ಲ.

+ ಶ್ರೀ ಎಸ್. ಸುರೇಶ್‌ಕುಮಾರ್ (ರಾಜಾಜಿನಗರ) :— ಮಾನ್ಯ ಅಧ್ಯಕ್ಷರೆ, ಇವತ್ತು ಏನು ನಮ್ಮ ಮುಂದೆ ಈ ತಿದ್ದುಪಡಿ ವಿಧೇಯಕವನ್ನು ತಂದಿದ್ದಾರೆ ಅದರಲ್ಲಿ ಒಂದೆರಡು ಅಂಶಗಳು ಸ್ವಾಗತಾರ್ಹವಾದ ಅಂಶವಾದರೂ ಒಟ್ಟಾರೆ ಜನರಿಗೆ ನೇರವಾಗಿ ಸಂಬಂಧ ಇಲ್ಲ, ಜನರ ಪ್ರಗತಿಪರ ಅಲ್ಲ ಎಂಬ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಮೊದಲನೆಯದಾಗಿ, 14 ಬಿ-ಯಲ್ಲಿ ಸಬ್ ಸೆಕ್ಷನ್ ಒಂದು ಏನಿದೆ, ಯಾರು ರಸ್ತೆ ಮಾಡಲು ಜಮೀನನ್ನು ಬಿಟ್ಟು ಕೊಡುತ್ತಾನೆ ಅವನಿಗೆ ಅಡಿಷನಲ್ ಫ್ಲೋರ್ ಮಾಡಲು ಅವಕಾಶ ಕೊಟ್ಟಿದ್ದೀರಿ ಇದನ್ನು ಪ್ರಾಯಶಃ ಎಲ್ಲರೂ ಸ್ವಾಗತಿಸುತ್ತಾರೆ. ಇದೊಂದು ಬಹಳ ಉತ್ತೇಜನಕಾರಿಯಾದ ಕೆಲಸವನ್ನು ತಾವು ಮಾಡುತ್ತಿದ್ದೀರಿ. ಆದರೆ ಸಬ್ ಸೆಕ್ಷನ್ 2ರಲ್ಲಿ ನೀವು ಮಾಡಲು ಹೊರಟಿರುವುದು, ಈ ತಿದ್ದುಪಡಿ ವಿಶೇಷವಾಗಿ ಬೆಂಗಳೂರು ನಗರದಲ್ಲಿ ಕೆಲವು ಕಟ್ಟಡಗಳನ್ನು, ಕೆಲವು ವ್ಯಕ್ತಿಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು ತಂದಿದ್ದೀರಿ. ತಾವು ತಿದ್ದುಪಡಿಯಲ್ಲಿ ಏನು ಹೇಳುತ್ತೀರೆಂದರೆ, ``The Planning

Authority may permit an additional Floor Area Ratio upto one hundred percent of the permissible Floor Area Ratio specified in the development plan in case of starred category of residential hotels ಈಗ ಜೊತೆಗೆ ಸೇರಿಸಿದ್ದೀರಿ Educational Institutions, High-tech Hospitals and Banking Institutions. subject to payment of such amount and such other terms and conditions as it may specify." ನಾನು ಆಗಲೇ ಹೇಳಿದಂತೆ ಕೆಲವು ನಿರ್ದಿಷ್ಟ ವ್ಯಕ್ತಿಗಳು, ಕಟ್ಟಡಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಈ ತಿದ್ದುಪಡಿಯನ್ನು ತರಲಾಗಿದೆ. ಉದಾಹರಣೆಗೆ ಮಲ್ಯ ಆಸ್ಪತ್ರೆ ಇದೆ, ಅದಕ್ಕೆ ಅಡಿಷನಲ್ ಫ್ಲೋರ್ ಕೊಡಬೇಕು ಎಂಬ ಒಂದು ಉದ್ದೇಶ, ಸೈಂಟ್ ಮಾರ್ಕ್ಸ್ ರಸ್ತೆಯಲ್ಲಿರುವ ವೈಶ್ಯಾ ಬ್ಯಾಂಕ್ ಇದೆ ಅದಕ್ಕೆ ತಾವು ಬ್ಯಾಂಕಿಂಗ್ ಇನ್ಸ್‌ಟಿಟ್ಯೂಷನ್ ಎಂಬ ಪದವನ್ನು ಸೇರಿಸಿರುವುದು, ಅದಕ್ಕೆ ಒಂದು ಫ್ಲೋರ್ ಕೊಡುವ ಉದ್ದೇಶ. ಈ ರಸ್ತೆಯಲ್ಲಿ ನಾವು ಈಗಾಗಲೇ ಓಡಾಡಲು ಆಗುತ್ತಿಲ್ಲ. ಈಗಲೆ ಈ ಕಟ್ಟಡಗಳವರು ಯಾರೂ ಸಹ ಪಾರ್ಕಿಂಗ್‌ಗೆ ಜಾಗವನ್ನು ಬಿಟ್ಟಿಲ್ಲ. ಪಾರ್ಕಿಂಗ್‌ಗೆ ಜಾಗವನ್ನು ಬಿಡುವುದು ಕಾನೂನಿನ ಪ್ರಕಾರ ಅಪರಾಧ ಎಂದು ತಿಳಿದುಕೊಂಡು ಬಿಟ್ಟಿದ್ದಾರೆ. ತಮ್ಮ ಕಟ್ಟಡಗಳಲ್ಲಿ ಪಾರ್ಕಿಂಗ್‌ಗೆ ಜಾಗವನ್ನು ಬಿಡುವುದಿಲ್ಲ. ಅದು ಕಾರು ಇರಲಿ, ದ್ವಿಚಕ್ರ ವಾಹನಗಳು ಇರಲಿ. ಅವೆಲ್ಲಾ ರಸ್ತೆಯಲ್ಲೆ ಇರಬೇಕು. ಇಲ್ಲದಿದ್ದರೆ ನಾವೇನು ಉದಾರತೆಯಿಂದ ಮಲ್ಯ ಆಸ್ಪತ್ರೆಯವರಿಗೆ ಕಂಠೀರವ ಸ್ಟೇಡಿಯಂನಲ್ಲಿ ಜಾಗಕೊಟ್ಟಿದ್ದೇವಲ್ಲಾ ಆ ರೀತಿ ಕೊಡಬೇಕು. ಈ ಕಟ್ಟಡಗಳಿಗೆ ಯಾವ ರೀತಿಯಿಂದ ಆಡಿಷನಲ್ ಫ್ಲೋರ್‌ಗೆ ಅವಕಾಶ ಕೊಡುವ ಅಗತ್ಯತೆ ಇದೆ? ಇದರ ಮೂಲಕ ತಾವು ಯಾವ ರೀತಿಯಲ್ಲಿ ಪ್ರಗತಿಪರವನ್ನು ಅವಕಾಶ ಕೊಡುವ ಅಗತ್ಯತೆ ಇದೆ? ಇದರ ಮೂಲಕ ತಾವು ಯಾವ ರೀತಿಯಲ್ಲಿ ಪ್ರಗತಿಪರವನ್ನು ರುಜುವಾತು ಮಾಡುತ್ತಿದ್ದೀರಾ? ಯಾವುದೇ ಕಾರಣದಿಂದ ಸಬ್ ಸೆಕ್ಷನ್ (2) ಏನಿದೆ ಇದನ್ನು ನಾಗರೀಕರ ಪರವಾಗಿ ನಾವು ಒಪ್ಪಿಕೊಳ್ಳಲು ಆಗುವುದಿಲ್ಲ. additionalಕೊಡುತ್ತಿದ್ದೀರಿ ಇದರಿಂದ ಯಾವುದೇ ಸಾಧಕವಾಗುವುದಿಲ್ಲ. ಇದನ್ನು ನಾವು ವಿರೋಧಿಸುತ್ತೇವೆ. ಇಷ್ಟು ತುರ್ತಾಗಿ ಈ ಬಿಲ್ಲನ್ನು ತರುವ ಅಗತ್ಯ ಏನಿದೆ? ಎಲ್ಲಾ ಮಾನ್ಯ ಸಚಿವರು ಉತ್ತರ ಕೊಡುವಾಗ ತಿಪ್ಪಗೊಂಡನಹಳ್ಳಿ ಜಲಾಶಯದ ದಂಡೆಯ ಮೇಲೆ ಡಿ.ಎಲ್.ಎಫ್.ಗೆ ಏನು ಅನುಮತಿ ಕೊಟ್ಟಿದ್ದವು ಅದನ್ನು ವಾಪಸ್ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಿದ್ದಾರೆ. ಆ ರೀತಿ ವಾಪಸ್ ತೆಗೆದುಕೊಳ್ಳುವ ಬಗ್ಗೆ ಸದನದಲ್ಲಿ ಪ್ರಕಟಣೆ ಮಾಡುವುದಿಲ್ಲ ಬದಲಾಗಿ ಕೆಲವೇ ಜನರ, ಕೆಲವೇ ಕಟ್ಟಡಗಳಿಗೆ ಉಪಯೋಗ ಆಗತಕ್ಕ ತಿದ್ದುಪಡಿ ತರುವ ಅಗತ್ಯತೆ ಏನಿದೆ, ಇದರ ಬಗ್ಗೆ ತಾವು ಉತ್ತರ ಕೊಡಬೇಕು. ಇನ್ನು "Where permission for change of land use or development of land or building is granted under Section 14A or section 15 or section 17 and such change of land use of development is capable of yielding a better income to the owner, the Planning

Authority may levy a prescribed fee not exceeding one-thind of the estimated increase in the value of the land." ಇವರು ಎಸ್ಟಿಮೇಟ್ ಮಾಡಬೇಕು. "estimated increase in the value of the land or building in the prescribed manner for permitting such change..." ಪ್ರಶ್ನೆ ಇರುವುದು ಎಂದರೆ, which is the authority to fix the estimated increase in the value of the building or the site? ಅದನ್ನೂ ಕೂಡ ಇತ್ಯರ್ಥ ಮಾಡಬೇಕಾಗುತ್ತದೆ. ಒಂದು ಏನೋ ಬ್ಲಾಂಕ್ ಆಗಿ ಹಾಕಿಬಿಟ್ಟು ಎಸ್ಟಿಮೇಟೆಡ್ ಇನ್‌ಕ್ರೀಸ್‌ನಲ್ಲಿ ಒನ್ ಥರ್ಡ್ ಹಾಕುತ್ತೇವೆಂದು ಹೇಳಿದರೆ ಯಾರು ಅದನ್ನು ಫಿಕ್ಸ್ ಮಾಡುವುದು? you are leaving scope for arbitrariness and arbitrari act. ಇದನ್ನೂ ಕೂಡ ತಾವು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇನ್ನು ಮೂರನೆಯದು- "18-A: Levy and collection of cess and sucharge in certain areas:

"Notwithstanding anything contained in this Act, the Planning Authority, may, while granting permission for development of land or buildings, levy and collect from the owner of such land or building...." ಇಷ್ಟೆಲ್ಲಾ ಸೆಸ್‌ಗಳನ್ನು ಸರ್ಕಾರದಿಂದ ಹಾಕಿಕೊಂಡು ಹೋಗುತ್ತೇವೆಂದು ಹೇಳಿದ್ದೀರಿ. ಈ ಸೆಸ್ ಹಾಕುವ ನಿಯಮವನ್ನು ಏತಕ್ಕೆ ಇವತ್ತು ತಂದಿದ್ದೀರಿ? Just to overcome the High Court judgement passed in 1995. ಸೆಸ್‌ನ್ನು ಲೆವಿ ಮಾಡುವುದಕ್ಕೆ ಬಿ.ಡಿ.ಎ.ಗೆ ಅಥಾರಿಟಿ ಇಲ್ಲ. ಈಗಾಗಲೇ ಒಂದು ಎಕರೆಗೆ 2 ಲಕ್ಷ ರೂಪಾಯಿಗಳಂತೆ ರಿಂಗ್ ರೋಡ್‌ಗೆ ಬಿ.ಡಿ. ಎ.ಯವರು ಸೆಸ್ ಹಾಕುತ್ತಿದ್ದಾರೆ. 2 ಲಕ್ಷ ರೂಪಾಯಿಗಳನ್ನು ಕಾವೇರಿ ನಾಲ್ಕನೇ ಹಂತಕ್ಕೆ ಸೆಸ್ ಹಾಕುತ್ತಿದ್ದಾರೆ, ಇದರ ಜೊತೆಗೆ ಹತ್ತನೇ ಒಂದು ಭಾಗ ಮಾರ್ಕೆಟ್ ವೇಲ್ಯೂ ಹಾಕಿದರೆ ಯಾರು ಉಳಿಯುತ್ತಾರೆ? ಯಾವಾಗ ಡೆವಲಪ್‌ಮೆಂಟ್ ಆಗುತ್ತದೆ? Just to overcome the High Court judgement, you have brought this amendment, that too with retrospective effect from 19th October, 1992. ಇದು ಬರೀ retrospective effect ಅಷ್ಟೇ ಅಲ್ಲ, ಇದು retrogressive ಅಮೆಂಡ್‌ಮೆಂಟ್ ಎಂದು ನಾನು ಕರೆಯುವುದಕ್ಕೆ ಇಷ್ಟಪಡುತ್ತೇನೆ. 1992 ನೇ ಇಸವಿಯಿಂದ One-tenth of the matket value of the land or the building for mass-rapid transit system- ಇಷ್ಟು ಹಿಂದಿನಿಂದ ಏತಕ್ಕೆ ಹಾಕಬೇಕು? ಯಾರ ಮೇಲೆ ಈ ಭಾರವನ್ನು ಹಾಕುವುದಕ್ಕೆ ಹೋಗುತ್ತಿದ್ದೀರಿ? ಇದರ ಬಗ್ಗೆ ಕೂಡ ಸರ್ಕಾರ ಕಡೆಯಿಂದ ಉತ್ತರ ಕೊಡುವಾಗ ಹೇಳಬೇಕಾಗುತ್ತದೆ. ಇನ್ನು ಸೆಕ್ಷನ್ 24(7) ನಲ್ಲಿ ಇನ್ನು ಮೇಲೆ ಸಿ.ಡಿ.ಪಿ. ಎಲ್ಲಾ ಕಡೆ ನಾವು ಇಂಪ್ಲಿಮೆಂಟ್ ಮಾಡುತ್ತೇವೆ. ಎಂದು ಹೇಳಿದ್ದಾರೆ. ಸಿ.ಡಿ.ಪಿ.ಗೆ ಕಸ್ಟೋಡಿಯನ್ ಬಿ.ಡಿ.ಎ. ಆಗಿರುತ್ತದೆ. ಬಿ.ಡಿ.ಎ. ತಮ್ಮ ಸ್ಕೀಂನಲ್ಲಿ ಸಿ.ಡಿ.ಪಿ.ಯನ್ನು ಇಂಪ್ಲಿಮೆಂಟ್ ಮಾಡುತ್ತಿದೆಯೇ? ಬಿ.ಡಿ.ಎ. ತನ್ನ ಅನೇಕ ಕೆಲಸಗಳಲ್ಲಿ ಸಿ.ಡಿ.ಪಿ.ಯನ್ನು

ಫಾಲೋ ಮಾಡುತ್ತಿದೆಯೇ? ಬಿ.ಡಿ.ಎಅದನ್ನು ಓವರ್‌ಕಮ್ ಮಾಡಬಹುದು, ಡಿಫೈ ಮಾಡಬಹುದು, ಸಿ.ಡಿ.ಪಿ.ಯ ವಿರುದ್ಧ ಕೆಲಸ ಮಾಡಬಹುದು, ಆದರೆ ನಾಗರೀಕರು ಮಾತ್ರ ಸಿ.ಡಿ.ಪಿ. ಯನ್ನೇ ಫಾಲೋ ಮಾಡಬೇಕು. 'ನಾನು ಹೇಳಿದ ಹಾಗೆ ಕೇಳು, ನಾನು ಮಾಡಿದ ಹಾಗೆ ಮಾಡಬೇಡ' ಎಂದು ಮೊದಲು ಬಿ.ಡಿ.ಎ.ಯಂಥ ಸಂಸ್ಥೆಗೆ ಸಿ.ಡಿ.ಪಿ.ಯನ್ನು ಫಾಲೋ ಮಾಡುವುದಕ್ಕೆ ಹೇಳಿ. ಆಮೇಲೆ ನಾಗರೀಕರಿಗೂ ಕೂಡ ಸಿ.ಡಿ.ಪಿ.ಯನ್ನು ಫಾಲೋ ಮಾಡುವುದಕ್ಕೆ ಹೇಳಿ. ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ ಎನ್ನುವ ಹಾಗೆ ಬಿ.ಡಿ.ಎ. ಏನೂ ಮಾಡದಿದ್ದರೆ ನಾಗರೀಕ ಹೇಗೆ ಮಾಡುತ್ತಾನೆ? ಈ ಸೆಕ್ಷನ್‌ನ್ನೂ ಕೂಡ ನಾವು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಇನ್ನು ಸೆಕ್ಷನ್ 76 (ಎಫ್ ಎಫ್) ಮತ್ತು (ಎಫ್ಎಫ್ಎಫ್) - ಇವತ್ತು ಏನು ಅನಧಿಕೃತ ಕಟ್ಟಡಗಳ ನಿರ್ಮಾಣ ಮಾಡಿದ್ದಾರೆ, ಅವರಿಗೆಲ್ಲಾ ಪೆನಾಲ್ಟಿ ಹಾಕಿಬಿಟ್ಟು ಅಧಿಕೃತ ಕಟ್ಟಡ ಮಾಡಲಿಕ್ಕೆ ಹೊರಟಿದ್ದೀರಿ. ಇದಕ್ಕೆ ಸಂಬಂಧಪಟ್ಟ ಹಾಗೆ ಭಕ್ತಾರಾಂ ಕಾಂಪ್ಲೆಕ್ಸ್, ಸದಾಶಿವನಗರ. ಈ ಕೇಸ್ ಸುಪ್ರೀಂ ಕೋರ್ಟಿನಲ್ಲಿ ಇದೆ. ಈ ಕೇಸ್‌ನಲ್ಲಿ ಮಾನ್ಯ ಕಾನೂನು ಸಚಿವರ ಗಮನ ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಅಕಸ್ಮಾತ್ ಕೋರ್ಟ್ ತೀರ್ಮಾನ ಏನಾದರೂ ನನ್ನ ವಿರುದ್ಧ ಆದರೆ ಆ ಅಡಿಷನಲ್ ಫ್ಲೋರ್ಸ್‌ನ್ನು ಒಡೆದುಹಾಕುತ್ತೇನೆ ಎಂದು ಆ ಬಿಲ್ಡರ್ ಹೈಕೋರ್ಟಿಗೆ ಪ್ರತೀ ಹಂತದಲ್ಲೂ ಕೂಡ ಬರೆದುಕೊಡುತ್ತಾ ಹೋದ. ಈಗ ಅವನು ಆ ಕಟ್ಟಡವನ್ನು ಬೇರೆ ಯಾರಿಗೋ ಮಾರಾಟ ಮಾಡಿ ಓಡಿ ಹೋಗಿದ್ದಾನೆ. ಆ ಕಟ್ಟಡದಲ್ಲಿ ಈಗ ನಿವಾಸಿಗಳು ಇದ್ದಾರೆ. ಆ ಅಂಡರ್ ಟೇಕಿಂಗ್‌ಗೆ ಏನು ಬೆಲೆ ಬಂತು? ಸರ್ಕಾರದವರು ಅಥವಾ ಕಾರ್ಪೋರೇಷನ್‌ನವರು ಆ ಅಂಡರ್ ಟೇಕಿಂಗ್‌ಗೆ ಯಾವ ರೀತಿಯಾಗಿ ಒಪ್ಪಿಕೊಂಡಿದ್ದಾರೆ ಎನ್ನುವುದು ನನ್ನ ಪ್ರಶ್ನೆ. ಈವತ್ತು ಕಟ್ಟಡ ಕಟ್ಟುವುದಕ್ಕೆ ಬಿಟ್ಟು, ಕಾನೂನಿನ ವಿರುದ್ಧ, ನಿಬಂಧನೆಗಳ ವಿರುದ್ಧ, ಬೈಲಾಗಳ ವಿರುದ್ಧ ಕಟ್ಟಡ ಕಟ್ಟುವುದಕ್ಕೆ ಬಿಡುತ್ತೀರಿ. What is the accountability of this Government or the Municipal authorities or the local bodies? ಅಂದರೆ ಕಾನೂನನ್ನು ಅನುಸರಿಸುವವರಿಗೆ ಈ ಸಮಾಜದಲ್ಲಿ, ಸರ್ಕಾರದಲ್ಲಿ ಬೆಲೆ ಇಲ್ಲ. ಯಾರು 4-5 ಫ್ಲೋರ್ ಕಟ್ಟಿ ಕಾನೂನಿನ ನಿಯಮವನ್ನು ಮುರಿಯುತ್ತಾರೋ ಅವರಿಗೆ ಸ್ವಲ್ಪ ಫೈನ್ ಹಾಕುತ್ತಾರೆ ಮತ್ತು ಹೆಚ್ಚು ಮರ್ಯಾದೆ ಕೊಡುತ್ತಾರೆ, ಇದು ಯಾವ ನ್ಯಾಯ? ಆ ಕಟ್ಟಡವನ್ನು ಕಟ್ಟುವುದಕ್ಕೆ ಬಿಟ್ಟಂಥ ಅಧಿಕಾರಿಗಳಿಗೆ ಏನು ಮಾಡುತ್ತೀರಿ? ಅವರು ಏನು ಮಾಡಿದರು ಎಂದರೆ "ಮೊಸರನ್ನ ತಿಂದು ಇವರ ಮುಖಕ್ಕೆ ಒರಸಿದರು" ಇವರಿಗೆ ಈಗ ನೀವು ಫೈನ್ ಹಾಕುತ್ತೀರಿ, ಆ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಇನ್ನು ಮುಂದೆ ಇಂಥವು ಆಗುವುದಿಲ್ಲವೆಂದು ಏನು ಗ್ಯಾರೆಂಟಿ ಇದೆ? ಕರ್ನಾಟಕ ರಾಜ್ಯದಲ್ಲಿ ಯಾವುದೇ ಬಿಲ್ಡಿಂಗ್ ಬೈಲಾ ಜಾರಿಯಲ್ಲಿಲ್ಲ, ಯಾರಿಗೆ ಹೇಗೆ ಬೇಕಾದರೂ ಕಟ್ಟಬಹುದು ಎನ್ನುವಂಥ ಸೂಚನೆಯನ್ನು ಕೊಟ್ಟುಬಿಡಿ. ಜನ ಸಮಾಧಾನವಾಗಿ ಅಕ್ಕಪಕ್ಕದ ಮನೆಗಳ ಜೊತೆ ಅಂಡರ್‌ಸ್ಟ್ಯಾಂಡಿಂಗ್‌ನಲ್ಲಿ ಕಟ್ಟುತ್ತಾರೆ. ನಿಮ್ಮ ಬೈಲಾಕ್ಕೆ ಯಾರೂ ಬೆಲೆ ಕೊಡುವುದಿಲ್ಲ. ನಗರಪಾಲಿಕೆ ಅಥವಾ ಅಧಿಕಾರಿಗಳು

ಬೆಲೆ ಕೊಡುವುದಿಲ್ಲ. ಈ ರೀತಿ ಒಂದು ತಿದ್ದುಪಡಿ ಮಸೂದೆಯನ್ನು ತಂದು ಅವರಿಗೆಲ್ಲಾ ಬ್ಲಾಂಕೆಟ್ ಶೆಲ್ಟರ್ ಕೊಡುವುದಕ್ಕೆ ಹೊರಟಿದ್ದೀರಿ. ಕಾನೂನನ್ನು ಅನುಸರಿಸಬೇಕೆಂದು ಯಾರಿಗೆ ಆಸೆ ಇದೆಯೋ ಅವನಿಗೆ ಬಗೆಯುತ್ತಿರುವ ದ್ರೋಹ ಎಂದು ಹೇಳಿದರೆ ತಪ್ಪಾಗಲಾರದು. ಬೆಂಗಳೂರಿನಲ್ಲಿ ಈ ರೀತಿಯ ಅನ್‌ಅಥರೈಸ್ಡ್ ಅಥವಾ ಯದ್ವಾತದ್ವಾ ಡೀವಿಯೇಷನ್ ಆಗಿರುವಂಥ ಸುಮಾರು 55 ಸಾವಿರ ಕಟ್ಟಡಗಳು ಇವೆ. ಇಂಥ ಕಟ್ಟಡಗಳನ್ನು ನೀವು ಶೀಲ್ಡ್ ಮಾಡುತ್ತಾ ಅವರಿಂದ ಯಾವುದೋ ಲಾಭ ಪಡೆಯುವುದಕ್ಕೋಸ್ಕರ ಈ ತಿದ್ದುಪಡಿಯನ್ನು ತಂದಿದ್ದೀರಿ. ಈ ತಿದ್ದುಪಡಿಯಿಂದ ನಾಗರೀಕರಾಗಲೀ, ರಾಜ್ಯಕ್ಕಾಗಲೀ, ರಾಜ್ಯದ ಪ್ರಗತಿಗಾಗಲೀ, ಯಾವುದೇ ರೀತಿಯ ಉಪಯೋಗವಿಲ್ಲ. ಮೊದಲು ಒಂದೇ ಒಂದು ತಿದ್ದುಪಡಿಯನ್ನು ನಾವು ಒಪ್ಪಿಕೊಳ್ಳಬಹುದು, ಅದು ಯಾವುದೆಂದರೆ, ಜಮೀನನ್ನು ರಸ್ತೆಗೆ ಯಾವುದೋ ಇನ್ ಫ್ರಾಸ್ಟ್ರಕ್ಚರ್‌ಗೆ ಕೊಟ್ಟು ಅದರ ಬದಲು ಏನು ಫ್ಲೋರ್ ರೇಷಿಯೋ ಕೊಟ್ಟಿದ್ದೀರಿ, ಅದು ಒಂದೇ ಇದರಲ್ಲಿ ಪ್ಲಸ್ ಪಾಯಿಂಟ್ ಎಂದು ಹೇಳುತ್ತಾ ಈ ತಿದ್ದುಪಡಿಯನ್ನು ಸಾರಾಸಗಟಾಗಿ ನಾನು ವಿರೋಧಿಸುತ್ತೇನೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

+ ಶ್ರೀಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) :— . ಮಾನ್ಯ ಅಧ್ಯಕ್ಷರೆ, ಸರ್ಕಾರ ತಂದಿರತಕ್ಕಂಥ ಈ ತಿದ್ದುಪಡಿ ವಿಧೇಯಕವನ್ನು ನಾವು ಭಾಗಶಃ ಸ್ವಾಗತ ಮಾಡಬಹುದು. ಈ ತಿದ್ದುಪಡಿ ವಿಧೇಯಕವನ್ನು ತರಬೇಕಾದರೆ ಇಲ್ಲಿ ಒಂದು ದ್ವಂದ್ವವನ್ನು ಕಾಣಬಹುದು. ಏನೆಂದರೆ, ನ್ಯೂ ಸೆಕ್ಷನ್ 14(B) ಯಲ್ಲಿ ಯಾವ ಸಂದರ್ಭದಲ್ಲಿ ಫ್ಲೋರ್‌ನ್ನು ರೈಸ್ ಮಾಡಬಹುದೆಂದು ಹೇಳಿದರೆ ``if the owner of such site surrenders the land for road widening or construction of new road without claiming any compensation in lieu thereof and hands over the same to the Palnning Authority or the local authority free of all encumbrances" ಅಂಥ ಸಂದರ್ಭದಲ್ಲಿ ಫ್ಲೋರ್ ಏರಿಯಾವನ್ನು 100 ಪರ್ಸೆಂಟ್ ರೈಸ್ ಮಾಡತಕ್ಕಂಥ ವಿಧೇಯಕವನ್ನು ತಂದಿರುವುದನ್ನು ನಾವು ಒಪ್ಪುತ್ತೇವೆ. ಏಕೆಂದರೆ ಇದರಲ್ಲಿ ಅವರು ಕಾಂಟ್ರಿಬ್ಯೂಷನ್ ಕೂಡ ಇರುತ್ತದೆ, ಅವರು ಎಲ್ಲಿ ಸ್ಯಾಕ್ರಿಫೈಸ್ ಮಾಡಿರುತ್ತಾರೆ ಅಲ್ಲಿ ಮಾಡಿ. ಆದರೆ ಸೆಕ್ಷನ್ 2 ರಲ್ಲಿ "The Planning Authority may permit an additional Floor Area Ratio uo to one hundred percent of the permissible Floor Area Ratio specified in the development plan in case of starred category of residential hotels, educational institutions." What is their contribution to give this excmption? What is the norm fixed for them? Why alone the banking institutions? ಇದರಲ್ಲಿ ನಿಮ್ಮ ಗೂಢಾರ್ಥ ಏನಿದೆ? ಎಜ್ಯುಕೇಷನ್ ಇನ್ಸ್ಟಿಟ್ಯೂಷನ್ಸ್ ಅಂದರೆ ಯಾವುದು? ಯಾರಿಗಾದರೂ ಮಠಾಧಿಪತಿಗಳಿಗೆ ಸಹಾಯ ಮಾಡಬೇಕೆಂತಲೋ, ಅಥವಾ ಎಜ್ಯುಕೇಷನ್ ಇನ್ಸ್ಟಿಟ್ಯೂಷನ್ಸ್‌ಗೆ ಸಹಾಯ ಮಾಡಬೇಕೆಂತಲೋ,

ಅದೇನಾದರೂ ಡಿಸ್ಕ್ರಿಷನ್ಸ್ ಬೇಕಲ್ಲವೇ? ಒಂದು ವಿಧೇಯಕದಲ್ಲಿ ನಿರ್ದಿಷ್ಟವಾಗಿ ಇಂಥಿಂಥವರಿಗೆ ಕೊಡುತ್ತೇವೆಂದು ಹೇಳುವಂಥ ಸಂದರ್ಭದಲ್ಲಿ, ಯಾವ ಸಂದರ್ಭದಲ್ಲಿ ಯಾರಿಗೆ ಕೊಡುವುದಕ್ಕೆ ಸಾಧ್ಯ ಅದನ್ನು ನಿರ್ದಿಷ್ಟವಾಗಿ ಈ ವಿಧೇಯಕದಲ್ಲಿ ತರಬೇಕಾಗುತ್ತದೆ. ಅದನ್ನು ತರತಕ್ಕಂಥದ್ದನ್ನು ನೀವು ಮಾಡಲಿಲ್ಲ. ಇದನ್ನು ನೋಡಿದಾಗ ಎಜ್ಯುಕೇಷನ್ ಇನ್ಸ್ಟಿಟ್ಯೂಷನ್‌ಗೆ ಅಂದರೆ ನಿಮಗೆ ಯಾರಿಗೆ ಬೇಕಾದರೂ ಯಾವ ನಿಯಮ ಇಲ್ಲದೆಯೇ ಏನು ಬೇಕಾದರೂ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಂಥದ್ದನ್ನು ಬ್ಲಾಂಕೆಟ್ ಆಗಿ ಕಾನೂನಿಗೆ ತರತಕ್ಕಂಥದ್ದು ಸಾಧುವಲ್ಲ. ಇದು ಯಾವುದೇ ಸಂದರ್ಭದಲ್ಲಿಯಾದರೂ ದುರುಪಯೋಗವಾಗುವುದಕ್ಕೆ ಅವಕಾಶಗಳು ಇರುತ್ತದೆ. ಆದ್ದರಿಂದ ದಯಮಾಡಿ ತಾವು ಇದಕ್ಕೆ ವಿವರಣೆ ಕೊಡಬೇಕಾಗುತ್ತದೆ. Why alone the educational institutions, Hi-tech hospitals? ಬ್ಯಾಂಕಿಂಗ್ ಇನ್ಸ್ಟಿಟ್ಯೂಷನ್ಸ್ ಎಂದರೆ ನನಗೆ ಅರ್ಥವಾಗುತ್ತಿಲ್ಲ. ಬ್ಯಾಂಕಿಂಗ್ ಇನ್ಸ್ಟಿಟ್ಯೂಷನ್ಸ್ ಎಂದು ಪರ್ಟಿಕ್ಯುಲರ್ ಆಗಿ ಸೇರಿಸಬೇಕಾದರೆ ನಿರ್ದಿಷ್ಟವಾಗಿ ಯಾವುದೋ ಒತ್ತಡಕ್ಕೆ ಮಣಿದು ಇದನ್ನು ಮಾಡುವುದಕ್ಕೋಸ್ಕರ ನೀವು ತಂದಿದ್ದು ಎನ್ನತಕ್ಕಂಥ ಭಾವನೆ ಬರುತ್ತದೆ. ಈ ವಿಧೇಯಕವನ್ನು ತರಬೇಕಾದರೆ ಅದರ ಹಿನ್ನೆಲೆ ಏನು ಎನ್ನತಕ್ಕಂಥದ್ದನ್ನು ವಿವರಿಸದೇ ಇದ್ದಾಗ ಇವೆಲ್ಲಾ ಕಷ್ಟಕ್ಕೆ ಬರುತ್ತದೆ ಆದ್ದರಿಂದ ಇದಕ್ಕೆ ನಾವು ಒಪ್ಪಿಗೆ ಕೊಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಬೇಕಾಗುತ್ತದೆ. ಹಾಗೆಯೇ ಒಂದು ಕಡೆ ``Levy and collection of cess and surcharge" ಎಂದು ಹೇಳಿದ್ದೀರಿ. ನಿಮಗೆ ಹಣ ಇಲ್ಲ, ನಿಮಗೆ ಕಷ್ಟ ಇದೆ ಅನ್ನುವ ಸಂದರ್ಭದಲ್ಲಿ ಈ ಸೆಸ್‌ನ್ನು ಹಾಕುವುದಕ್ಕೋಸ್ಕರ ಒಂದು ಕಡೆ ಆ ಅಧಿಕಾರವನ್ನು ಪಡೆಯುತ್ತೀರಿ. ಇನ್ನೊಂದು ಕಡೆ ಏನು ಎಕ್ಸಂಪ್ಷನ್ ಕೇಳುತ್ತಿದ್ದೀರಿ ಎಂದರೆ ``The State Government may exempt Board, Authority or body constituted by or under any law and owned and controlled by the State Government or Central Government from the Payment of fee specified under sub-section (1)". ಇದರಲ್ಲಿ any Board ಎಂದು ಸೇರಿಸತಕ್ಕಂಥ ಅವಶ್ಯಕತೆ ಏನಿತ್ತು? ಬೋರ್ಡ್ ಎಂದು ಇದ್ದಿದ್ದರೆ ಬಹುಶಃ ಸಾಕಾಗುತ್ತಿತ್ತು. ಅದರ ಜೊತೆಗೆ ಇನ್ನೊಂದು ಅಮೆಂಡ್‌ಮೆಂಟ್ ತಂದು 'ಟುಬಿ ಇಂಪ್ಲಿಮೆಂಟೆಡ್' ಅನ್ನತಕ್ಕಂಥ ಮಾತನ್ನು ಹೇಳಿದ್ದೀರಿ, ಅದೊಂದು ಆಸ್ಪೆಕ್ಟ್‌ನ್ನು ನಾವು ವೆಲ್‌ಕಂ ಮಾಡಬಹುದು. ನೀವು ಆಪ್ಷನ್ ಇಟ್ಟಿರತಕ್ಕಂಥದ್ದು, it is very dangerous and there is all possibility of this provision being utilised as per whimes and fancies of the Ministers. ದಯಮಾಡಿ ಇದರ ಹಿನ್ನೆಲೆ ಏನು ಎಂದು ನೀವು ಹೇಳಬೇಕಾಗುತ್ತದೆ. ಒಂದು ಕಡೆ ಇನ್‌ಕಂ ಬೇಕು ಎನ್ನುವ ಕಾರಣಕ್ಕಾಗಿ ನೀವು ಲೆವಿ ಮಾಡಬೇಕೆಂದು ಹೇಳುತ್ತೀರಿ, ಇನ್ನೊಂದು ಕಡೆ ಎಕ್ಸೆಂಪ್ಷನ್ ಕೊಡಬೇಕೆಂದು ಹೇಳುತ್ತೀರಿ. ಯಾವ ಕಾರಣಕ್ಕಾಗಿ ಎಕ್ಸೆಂಪ್ಷನ್ ಕೊಡಬೇಕೆಂದು ನೀವು ಸ್ಪಷ್ಟವಾಗಿ ಹೇಳುವುದಿಲ್ಲ. ಅದರ ಗೂಢಾರ್ಥವನ್ನು ದಯಮಾಡಿ ಹೇಳಬೇಕು. ಈಗಾಗಲೇ ಮಾನ್ಯ ಸುರೇಶ್ ಕುಮಾರ್‌ರವರು

ಹೇಳಿದ ರೀತಿಯಲ್ಲಿ ಬೆಂಗಳೂರಿನಲ್ಲಿರತಕ್ಕಂತಹ ಎಲ್ಲಾ ಕಟ್ಟಡಗಳನ್ನು ಅಂದರೆ, ಇವತ್ತು ಅನ್‌ಅಥರೈಸ್ಡ್ಆಗಿ ಕಟ್ಟಿರತಕ್ಕಂತಹ ಎಲ್ಲಾ ಕಟ್ಟಡಗಳನ್ನು ರೆಗ್ಯುಲರೈಸ್ ಮಾಡುವುದಕ್ಕೆ ಹೊರಟಿದ್ದೀರಿ, on payment of penalty. ಆದರೆ ಇವತ್ತು ಅನೇಕ ಕಡೆ ಕೋರ್ಟುಗಳಿಗೆ ಹೋಗಿ ಇತ್ಯರ್ಥ ಆಗಿ ಡೆಮಾಲಿಷನ್ ಆರ್ಡರ್ ಆಗಿ ಬಂದಿರತಕ್ಕಂಥದ್ದಕ್ಕೂ ಕೂಡ ಇದು ಅಪ್ಲೈ ಆಗುತ್ತದೆಯೇ ಎನ್ನತಕ್ಕಂಥಾದ್ದು ಒಂದು ಪ್ರಶ್ನೆ. ಮತ್ತೊಂದು, ಬಹಳ ಮುಖ್ಯವಾಗಿ ಇಂತಹ ಕೇಸ್‌ಗಳು ಇವತ್ತು ಕೋರ್ಟಿಗೆ ಹೋಗಿರತಕ್ಕಂಥದ್ದು. ಯಾರು ಕೋರ್ಟಿಗೆ ಹೋಗಿರುತ್ತಾರೆಂದರೆ, ಯಾರೋ ಪಕ್ಕದ ಮನೆಯಲ್ಲಿ ಕಟ್ಟಿರತಕ್ಕಂತಹವರು easement right ಎಫೆಕ್ಟ್ ಆದಂತಹ ಸಂದರ್ಭದಲ್ಲಿ ಕೋರ್ಟುಗಳಿಗೆ ಹೋಗಿ ಕೋರ್ಟಿನಲ್ಲಿ ಅವಾರ್ಡ್ ಆದ ಸಂದರ್ಭದಲ್ಲಿ ಇವು ನಿಮ್ಮ ರೈಟಿಗೆ ಏನೂ ಧಕ್ಕೆ ಬರುವುದಿಲ್ಲವೇ? ಅಂತಹ ಸಂದರ್ಭದಲ್ಲಿ ನೀವು ಏನು ಮಾಡುತ್ತೀರಿ? ಅಂತಹ ಅನ್‌ಅಥರೈಸ್ಡ್ ಕನ್‌ಸ್ಟ್ರಕ್ಷನ್‌ಗೆ ಎಲ್ಲವನ್ನೂ ನೀವು ರೈಗ್ಯುಲರೈಸ್ ಮಾಡುವುದಾದರೆ ಪಕ್ಕದಲ್ಲಿ ವಾಸ ಮಾಡತಕ್ಕಂತಹವರಿಗೆ ಆಗತಕ್ಕಂತಹ ತೊಂದರೆ ನಿವಾರಿಸುವುದಕ್ಕೆ, ಅದನ್ನು ಸರಿಪಡಿಸುವುದಕ್ಕೆ ಹೇಗೆ ಸಾಧ್ಯ? ಪಕ್ಕದಲ್ಲಿ ಯಾರೋ ಅಬ್ಜೆಕ್ಟ್ ಮಾಡುತ್ತಿದ್ದಾರೆ ಎಂದು ಈ ಕ್ಲಾಸ್ ಇಟ್ಟುಕೊಂಡು ಅವರಿಗೇ ರೆಗ್ಯುಲರೈಸ್ ಮಾಡುತ್ತಾ ಹೋದರೆ, ಪಕ್ಕದಲ್ಲಿ ಗಾಳಿ ಬೆಳಕು ಬಾರದೆ ಇರುವಂತಹ ಸಂದರ್ಭದಲ್ಲಿ ಅವರಿಗೆ ಕಷ್ಟವಾಗುತ್ತದೆ. ನೀವು ಕೊನೆಯಪಕ್ಷ ಅದರಲ್ಲಿ ಏನಾದರೂ ಒಂದು ಕ್ಲಾಸನ್ನಾದರೂ ಹಾಕಬೇಕು. IF there is objection from the outsiders'. ಏನಾದರೂ ತೊಂದರೆಯಾಗುವಂತಹ ಸಂದರ್ಭ ಬಂದರೆ ರೆಗ್ಯುಲರೈಸ್ ಮಾಡುವುದಿಲ್ಲವೆಂದು ಸೇರಿಸಬೇಕಾಗುತ್ತದೆ. ಇದನ್ನು ಬಿಟ್ಟು ಎಲ್ಲವನ್ನೂ ರೆಗ್ಯುಲರೈಸ್ ಮಾಡುತ್ತೇವೆಂದು ಹೊರಟರೆ ಹೇಗೆ ಸಾಧ್ಯವಾಗುತ್ತದೆ? ಒಂದು ಪಕ್ಷ ಅವರು ದುಡ್ಡು ಕೊಡದೇ ಇರುವ ಸಂದರ್ಭದಲ್ಲಿ ಅದನ್ನು ನಾವು ಒಡೆಯುವುದಕ್ಕೆ ಆಗದೇ ಇದ್ದ ಸಂದರ್ಭದಲ್ಲಿ ನೀವೇ ಆ ಕಟ್ಟಡವನ್ನು ತೆಗೆದುಕೊಳ್ಳಬಹುದು ಎಂದು ಹೇಳಿದ್ದೀರಿ. ಈಗ ತಂದಿರತಕ್ಕಂತಹ ಈ ಒಂದು ಪ್ರಾವಿಷನ್ ಏನಿದೆ ಇದರ ಬಗ್ಗೆ ಕೋರ್ಟಿಗೆ ಯಾರಿಗಾದರೂ ಹೋಗಿ ಛಾರ್ಜ್ ಮಾಡಿದರೆ ಅದು ಉಳಿಯುವುದಿಲ್ಲ. Without depositing adequate compensation, you cannot acquire it also. ಈ ಪ್ರಾವಿಷನ್‌ನಲ್ಲಿ ನಿಮಗೆ ಸರಿಯಾದ ಮಾಹಿತಿ ಕೊಟ್ಟಿಲ್ಲ. ಈ ಪ್ರಾವಿಷನ್ ತಂದಿರುವುದರಲ್ಲಿ ಅವರಿಗೆ ಭಯ ತರುವುದಕ್ಕೋಸ್ಕರ ಅಥವಾ ವಿನಾಕಾರಣ ಕಟ್ಟಡವನ್ನು ಹೊಡೆಯುವ ಕಾನೂನು ನೀವು ಮಾಡಿಕೊಂಡಿದ್ದೀರಿ. ಆದರೆ ಇದು ಉಳಿಯುವುದಿಲ್ಲ. ಇದಕ್ಕೆ ಕಾಂಪೆನ್‌ಸೇಷನ್ ಏನು ಕೊಡುತ್ತೀರಿ, ಆ ಕಾಂಪೆನ್‌ಸೇಷನ್ ಕೊಡುವುದಕ್ಕೆ ನಿಮ್ಮ ಹತ್ತಿರ ಹಣ ಎಲ್ಲಿದೆ ದಿನನಿತ್ಯದ ಕಾರ್ಯಕ್ರಮಗಳಿಗೆ ಕೊಡುವುದಕ್ಕೆ ನಿಮ್ಮ ಹತ್ತಿರ ದುಡ್ಡು ಇಲ್ಲ. ಬಿಲ್ಡಿಂಗ್ ಅಕ್ವೈರ್ ಮಾಡಿ ಅದಕ್ಕೆ ಕಾಂಪೆನ್‌ಸೇಷನ್ ಫಿಕ್ಸ್ ಮಾಡುವುದಕ್ಕೆ ಸಾಧ್ಯವೇ? ಇದನ್ನು ಕಾರ್ಯಗತ ಮಾಡುವುದಕ್ಕೆ ಸಾಧ್ಯವಿಲ್ಲ. ಇದರಲ್ಲಿ ನಿಮ್ಮ ದ್ವಂದ್ವ ನೀತಿ ಏನಿದೆ, ಒಂದು ಕಡೆ ಲೆವಿ ಹಾಕುತ್ತೀರಿ, ಇನ್ನೊಂದು ಕಡೆ ಎಕ್ಸೆಂಪ್ಷನ್ ಕೊಡುವುದಕ್ಕೆ ಅಧಿಕಾರ ಪಡೆಯುತ್ತೀರಿ. ಈ ದ್ವಂದ್ವ

ನೀತಿಯ ಬಗ್ಗೆ ನೀವು ಕ್ಲೀಯರಾಗಿ ಹೇಳದೇ ಇದ್ದರೆ, ಇದನ್ನು ನಾವು ಒಪ್ಪುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :— ಮಾನ್ಯ ಅಧ್ಯಕ್ಷರೆ, ಸರ್ಕಾರದವರು ಶಾಸನ ಮಾಡುವುದು, ನೀತಿ ಮಾಡುವುದಕ್ಕೆ, ನಿಯಮ ಮಾಡುವುದಕ್ಕೆ, ರಾಜಿ ಮಾಡಲಿಕ್ಕೆ ಈ ಬಗ್ಗೆ ರಾಜ್ಯ ಸರ್ಕಾರ ಬೇಕಾದಷ್ಟು ಬಿಲ್‌ಗಳನ್ನು ಇಲ್ಲಿ ಇಂಟ್ರಡ್ಯೂಸ್ ಮಾಡುವುದನ್ನು ನೋಡಿದರೆ, ನಾವು ಈ ನೀತಿಯನ್ನು ಯಾವಾಗ ಮಾಡುತ್ತೀರೆಂದು ಕೇಳಬೇಕಾಗುತ್ತದೆ. ಪ್ಲ್ಯಾನಿಂಗ್ ಅಥಾರಿಟಿ ಮಾಡುತ್ತೀರಿ, ಪ್ಲ್ಯಾನಿಂಗ್ ಅಥಾರಿಟಿಯನ್ನು ವಯಲೇಟ್ ಮಾಡಿ ಕನ್‌ಸ್ಟ್ರಕ್ಷನ್ ಮಾಡುವವರನ್ನು ರೆಗ್ಯುಲರೈಸ್ ಮಾಡುತ್ತೇವೆಂದು ಹೇಳುತ್ತೀರಿ. ಈ ಬಿಲ್‌ಗಳನ್ನು ತರುವುದು ಯಾರಿಗಾಗಿ? ಈ ರಾಜ್ಯದ ಸಾರ್ವಜನಿಕರಿಗೆ ಅದರಲ್ಲೂ ಜನ ಸಾಮಾನ್ಯರಿಗೆ, ಬಡವರಿಗೆ ಸಹಾಯ ಮಾಡುವ ಒಂದು ಬಿಲ್ ಇಲ್ಲಿ ಇಂಟ್ರಡ್ಯೂಸ್ ಆಗುತ್ತಿಲ್ಲ. ತಮಗೆ ಒಂದು ನೀತಿ ಬೇಕು. ಬೆಂಗಳೂರಿನಲ್ಲಿ ಮಲ್ಟಿ-ಸ್ಟೋರೀಡ್ ಬಿಲ್ಡಿಂಗ್ ಆಗಬಾರದು ಎಂದು ಐದಾರು ವರ್ಷಗಳ ಹಿಂದೆ ಚರ್ಚೆಯಾಗಿದೆ. ಬೆಂಗಳೂರಿನಲ್ಲಿ ಬಹುಮಹಡಿ ಕಟ್ಟಡಗಳು ಬರಬಾರದೆಂದು ಚರ್ಚೆ ಮಾಡಿದರೂ, ಕಟ್ಟುವವರನ್ನು ನಾವು ರೆಗ್ಯುಲರೈಸ್ ಮಾಡುತ್ತೇವೆಂದು ಹೇಳುತ್ತೀರಿ. ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಯವರು ಎಲ್ಲೆಲ್ಲಿ ನಿಮಗೆ ಪರ್ಮಿಷನ್ ಕೊಟ್ಟಿಲ್ಲ, ಲೈಸನ್ಸ್ ಕೊಟ್ಟಿಲ್ಲ, ಅಲ್ಲಿ ಕಟ್ಟುವವರಿಗೆ ರೆಗ್ಯುಲರೈಸ್ ಮಾಡಬೇಕೆಂದು ಹೇಳುತ್ತೀರಿ. ಇಂತಹ ಬಿಲ್‌ಗಳನ್ನು ನಾವು ಪಾಸ್ ಮಾಡುತ್ತಾ ಹೋದರೆ ಮುಂಬರುವ ವರ್ಷಗಳಲ್ಲಿ ಯಾರೂ ಯಾವ ಕಾಯಿದೆಯನ್ನು ಕೇಳುವುದಿಲ್ಲ. ಕಟ್ಟಿಕೊಳ್ಳುತ್ತಾರೆ. ಯಾರಿಗಾದರೂ ಬೇಕಾದಾಗ ಅವರಿಗೆ ಬೇಕಾದ ಮಂತ್ರಿಗಳು ಬಂದಾಗ ತೆಗೆದುಕೊಳ್ಳುತ್ತಾರೆ. ಒಂದು ಬಿಲ್ ಇಂಟ್ರಡ್ಯೂಸ್ ಮಾಡಿಸುತ್ತಾರೆ, ರೆಗ್ಯುಲರೈಸ್ ಮಾಡಿಸಿಕೊಳ್ಳುತ್ತಾರೆ. ಈ ರಾಜ್ಯಕ್ಕೆ ಇದೇ ಆಗಬೇಕೇ? ನೀವು ಬೆಂಗಳೂರಿಗೆ ಪ್ಲ್ಯಾನಿಂಗ್ ಅಥಾರಿಟಿ ಏಕೆ ಮಾಡಿದಿರಿ? ಅದನ್ನು ವಯಲೇಟ್ ಮಾಡಿದವರಿಗೆ ಶಿಕ್ಷೆ ಏಕೆ ಕೊಡಲಿಲ್ಲ? ಈ ಅಥಾರಿಟಿಯನ್ನಾದರೂ ಡಿಸಾಲ್ವ್ ಮಾಡಿ. ಇಲ್ಲದಿದ್ದರೆ ಇದಕ್ಕೆ ಅರ್ಥ ಉಳಿಯುವುದಿಲ್ಲ. ಒಂದು ಕಡೆ ಪ್ಲ್ಯಾನಿಂಗ್ ಅಥಾರಿಟಿಯವರು ಪರ್ಮಿಷನ್ ಕೊಡಿ ಎಂದು ಹೇಳುವುದು ಇನ್ನೊಂದು ಕಡೆ ನಾವು ಸ್ವಲ್ಪ ದಂಡ ಹಾಕಿಕೊಂಡು ರಸ್ತೆಗೆ ಮತ್ತು ಫುಟ್ ಪಾತ್‌ಗೆ ಸ್ವಲ್ಪ ಜಾಗ ಬಿಟ್ಟುಕೊಂಡು ರೆಗ್ಯುಲರೈಸ್ ಮಾಡುತ್ತೇವೆಂದು ಶಾಸನಗಳನ್ನು ಮಾಡುತ್ತಾ ಹೋದರೆ ಇದಕ್ಕೆ ಮುಕ್ತಾಯ ಯಾವತ್ತು ಎಂದು ಅವರು ಹೇಳಬೇಕಾಗುತ್ತದೆ. ಗಂಗಾರಾಂ ಬಿಲ್ಡಿಂಗ್ ಬಿದ್ದಾಗಿನಿಂದ ಹಿಡಿದು ಅನೇಕ ಬಹು ಮಹಡಿ ಕಟ್ಟಡಗಳನ್ನು ಬೆಂಗಳೂರಿನಲ್ಲಿ ಕಟ್ಟಿದಾಗ, ಬೆಂಗಳೂರಿಗೆ ಬಹು ಮಹಡಿ ಕಟ್ಟಡ ಬೇಕೇ? Does Bangalore require multi-storied buildings? ಆ ಕಡೆ ಈ ಕಡೆ ಹೋಗಲಿಕ್ಕೆ ಜಾಗ ಇಲ್ಲವೇ? ಇಲ್ಲಿ ಉಸಿರು ಕಟ್ಟುತ್ತಿರುವ ವಾತಾವರಣದಲ್ಲಿ ಇನ್ನೂ ಅಷ್ಟು ಕಟ್ಟಿದ ಮೇಲೆ ನೀವು ರೆಗ್ಯುಲರೈಸ್ ಮಾಡುತ್ತೀರಿ? ಯಾರಿಗೆ ಮಾಡುತ್ತೀರಿ? ಯಾರೋ ಸ್ಲಂನಲ್ಲಿರುವವರಿಗೆ ರೆಗ್ಯುಲರೈಸ್ ಮಾಡುವುದಕ್ಕೆ ನೀವು ಬಿಲ್ ತರಲಿಲ್ಲ. ಯಾರೋ ಬಡವ ಮನೆ ಕಟ್ಟಿದ್ದನ್ನು

ರೆಗ್ಯುಲರೈಸ್ ಮಾಡುವುದಕ್ಕೆ ನೀವು ಬಿಲ್ ತರುವುದಿಲ್ಲ ಹೈಟೆಕ್ ಆಸ್ಪತ್ರೆಯವರಿಗೆ, ಸ್ಟಾರ್ ಹೋಟೆಲ್ ಗಳಿಗೆ ದೊಡ್ಡ ದೊಡ್ಡ ಎಡ್ಯುಕೇಷನ್ ಇನ್‌ಸ್ಟಿಟ್ಯೂಷನ್‌ಗಳಿಗೆ who can cheat the Government better ಅಂಥವರಿಗೆ ಅನುಕೂಲವಾಗುವ ಶಾಸನವನ್ನು ತರುತ್ತೀರಾ. ಇಂತಹ ಒಂದು ಶಾಸನವನ್ನು ಸನ್ಮಾನ್ಯ ಎಂ.ಎಸ್. ಪಾಟೀಲರು ತರಬಾರದಾಗಿತ್ತು. ಹೈಟೆಕ್ ಆಸ್ಪತ್ರೆ ಮತ್ತಿತರೆ ಯಾರ್‍ಯಾರಿಗೋ ಅನುಕೂಲ ಮಾಡಬೇಕೆನ್ನುವ ದೃಷ್ಟಿಯಿಂದ ಈ ಶಾಸನಸಭೆಯಲ್ಲಿ ಇಂತಹ ಬಿಲ್ ಇಂಟ್ರಡ್ಯೂಸ್ ಮಾಡುವ ಸ್ಥಿತಿ ನಿರ್ಮಾಣವಾಗಿದೆ. ಇಂತಹ ಸ್ಥಿತಿ ಈ ಶಾಸನ ಸಭೆಗೆ ಬರಬಾರದಾಗಿತ್ತು ಎಂದು ಈ ಬಿಲ್ಲನ್ನು ನಾನು ಕಟುವಾಗಿ ವಿರೋಧ ಮಾಡುತ್ತೇನೆ.

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) :— ಮಾನ್ಯ ಅಧ್ಯಕ್ಷರೆ, ಶ್ರೀ ಸುರೇಶ್ ಕುಮಾರ್‌ರವರು ಕೆಲವು ಸಂಗತಿಗಳನ್ನು ಬಹಳ ಸ್ಪಷ್ಟವಾಗಿ ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಈ ಬಿಲ್ಲನ್ನು ಜಂಟಿ ಸದನ ಸಮಿತಿಗೆ ರೆಫರ್ ಮಾಡಿ. ಎರಡು-ಮೂರು ತಿಂಗಳುಗಳಲ್ಲಿ ಚುನಾವಣೆ ಎದುರಿಸುವಂತಹ ಸಂದರ್ಭದಲ್ಲಿ ಈ ರೀತಿ ಏನು ಅಮೆಂಡ್‌ಮೆಂಟ್ ತಂದಿದ್ದೀರಿ, ಅದರಲ್ಲಿ ಸ್ಟಾರ್ ಹೋಟೆಲ್, ಎಜ್ಯುಕೇಷನ್ ಇನ್‌ಸ್ಟಿಟ್ಯೂಷನ್ಸ್ ಹೈಟೆಕ್ ಆಸ್ಪತ್ರೆಗಳು ಮತ್ತು ಬ್ಯಾಂಕಿಂಗ್ ಇನ್‌ಸ್ಟಿಟ್ಯೂಷನ್ಸ್‌ಗಳು ಎಷ್ಟು ಫ್ಲೋರ್ ಬೇಕಾದರೂ ಕಟ್ಟಿಕೊಳ್ಳಬಹುದು. ಕಟ್ಟಿರುವುದನ್ನು ಕನ್‌ಫರ್ಮ್ ಮಾಡುವುದು, ಹೊಸದಾಗಿ ಕಟ್ಟಿಕೊಳ್ಳುವುದಕ್ಕೆ ಅವಕಾಶ ಕೊಡುವುದು, ಈ ಅವಕಾಶ ಕೊಡುವುದಕ್ಕೆ ಹೊರಟಿದ್ದೀರಿ. ಕೆಲವರನ್ನು ತಮ್ಮ ಕಣ್ಣು ಮುಂದೆ ಇಟ್ಟುಕೊಂಡು ಒಂದು ರೀತಿಯಲ್ಲಿ ತಮಗೆ ಲಾಭ ಮಾಡಿಕೊಳ್ಳುವುದಕ್ಕೋಸ್ಕರ ಜನತೆಗೆ ಅನ್ಯಾಯವಾದರೂ ಪರವಾಗಿಲ್ಲ, ಈ ಅಮೆಂಡ್ ಮೆಂಟ್ ತರುವುದರ ಮೂಲಕ ಇಲ್ಲಿ ತಂದಿದ್ದೀರಿ. ಬಹುಶಃ ಕಟುವಾದ ಭಾಷೆಯಲ್ಲಿ ಹೇಳಿದರೆ ಮಾನ್ಯ ನಾಣಯ್ಯನವರು ತಪ್ಪಾಗಿ ತಿಳಿದುಕೊಳ್ಳುವುದಿಲ್ಲವೆಂದು ಕಾಣುತ್ತದೆ. ಕಳೆದ ನಾಲ್ಕೂವರೆ ವರ್ಷಗಳಿಂದ ನಿಮಗೆ ಗೊತ್ತಿದ್ದೂ, ಈಗ ಏಕೆ ತರಾತುರಿಯಿಂದ ತರುತ್ತಿದ್ದೀರಿ? ಇನ್ನೊಂದು ಆಶ್ಚರ್ಯಕರ ಸಂಗತಿಯೇನೆಂದರೆ, ಇಲ್ಲಿ ಇಂಟ್ರಡ್ಯೂಸ್ ಮಾಡಿದ ಮೂರು-ನಾಲ್ಕು ದಿವಸದಲ್ಲೇ ಅಮೆಂಡ್‌ಮೆಂಟ್ ತರುತ್ತಾರೆ. ಇದರ ಅರ್ಥವೇನು? ಯಾರು ಅನಧಿಕೃತ ಕಟ್ಟಡಗಳ ಬಗ್ಗೆ ಅಕ್ಕಪಕ್ಕದವರು ಕಂಪ್ಲೇಂಟ್ ಕೊಡುತ್ತಾರೆ, ಯಾರು ಅಕ್ಕಪಕ್ಕದಲ್ಲಿ ಕಟ್ಟಿರುತ್ತಾರೆ, ಗಾಳಿ ಬರುವುದಿಲ್ಲ, ಬೆಳಕು ಬರುವುದಿಲ್ಲ, ಓಡಾಡುವುದಕ್ಕೆ ಆಗುವುದಿಲ್ಲ, ನಿವೇಶನ ಇದ್ದವರು ದುರುಪಯೋಗ ಮಾಡಿಕೊಂಡಿದ್ದಾರೆಂದು ಕಂಪ್ಲೇಂಟ್ ಮಾಡಿರುತ್ತಾರೆ ನೀವು ಅದನ್ನು ಕನ್‌ಫರ್ಮ್ ಮಾಡುವುದಾದರೆ ಏನರ್ಥ? ಅವರು ಅದನ್ನು ನಿಮ್ಮ ಗಮನಕ್ಕೆ ತರುವುದು ಅಪರಾಧವೇ? ಒಬ್ಬ ಕಾನೂನಿನ ಚೌಕಟ್ಟಿನಲ್ಲಿ ಮನೆ ಕಟ್ಟಿಕೊಂಡಿದ್ದರೆ ಅವನನ್ನು ಬಿಟ್ಟು, ಪಕ್ಕದಲ್ಲಿರುವವನು ಅಧಿಕಾರಿಗಳ ಜೊತೆ ಶಾಮೀಲಾಗಿ ದುಡ್ಡು ಕೊಟ್ಟು ತನ್ನ ಮನ ಬಂದಂತೆ ಮನೆಗಳನ್ನು ಕಟ್ಟಿಕೊಂಡಿದ್ದರೆ ಅವನಿಗೆ ಕನ್‌ಫರ್ಮ್ ಮಾಡುವುದಕ್ಕೆ ಹೋಗುತ್ತೀರಿ. ಇದಕ್ಕಿಂತ ದೊಡ್ಡ ಅಪರಾಧ ಇದೆಯೇ? ದಯಮಾಡಿ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ, ನಿಮ್ಮ ಸರ್ಕಾರಕ್ಕೂ ಇದು

ಗೌರವ ಬರುವುದಿಲ್ಲ, ಎಲಕ್ಷನ್ ಕಣ್ಣು ಮುಂದೆ ಇಟ್ಟುಕೊಂಡು ಮಾಡಿದ್ದೇವೆ ಎನ್ನುವುದಾದರೆ ಜನ ಏನು ಬೇಕಾದರೂ ತೀರ್ಮಾನ ಮಾಡಲಿ. ನನ್ನ ಒತ್ತಾಯವೇನೆಂದರೆ, ನಾನು ಯಾವುದೇ ಕಾರಣಕ್ಕೂ ಇದಕ್ಕೆ ಬೆಂಬಲ ಕೊಡುವುದಿಲ್ಲ. ಇದನ್ನು ಜೆಎಸ್‌ಸಿಗೆ ರೆಫರ್ ಮಾಡಿ.

MR. SPEAKER :— Your suggestion is there. ರಿಪ್ಲೇ ಕೊಡುವಾಗ ಅವರು ಒಪ್ಪಿಕೊಂಡರೆ ನನ್ನದು ಏನೂ ಅಭ್ಯಂತರವಿಲ್ಲ. I must allow Hon'ble Members to speak.

ಶ್ರೀ ಬಿ.ಎಸ್. ಯಡಿಯೂರಪ್ಪ :— ಈ ಸರ್ಕಾರ ಜನತೆಗೆ ಮಾಡುತ್ತಿರುವಂತಹ ದ್ರೋಹ ಇದು. ಇದಕ್ಕೆ ನನ್ನ ವಿರೋಧ ಇದೆ. ಯಾರ ಉದ್ಧಾರಕ್ಕಾಗಿ ಇದನ್ನು ಮಾಡುತ್ತಿದ್ದೀರಿ? ಇದಕ್ಕೆ ನನ್ನ ವಿರೋಧ ಇದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :— ಸನ್ಮಾನ್ಯ ಅಧ್ಯಕ್ಷರೆ, ಈ ಬಿಲ್ಲನ್ನು ತರತಕ್ಕಂತಹ ಉದ್ದೇಶ ಹೇಗಿದೆ ಎಂದರೆ, ಒಬ್ಬ ಕಳ್ಳ ಹೋಗಿ ಒಂದು ಮನೆಯಲ್ಲಿ ಸೇರಿಕೊಂಡು ಬಿಟ್ಟ ಅವನಿಗೆ ರಕ್ಷಣೆ ಕೊಡಬೇಕು. ಆ ಕಳ್ಳನಿಗೆ ರಕ್ಷಣೆ ಕೊಡುವುದಕ್ಕಾಗಿ ಈ ಬಿಲ್ಲನ್ನು ತರುತ್ತಿದ್ದಾರೆ. ಎರಡನೆಯದು, ಬಹಳ ಮುಖ್ಯವಾಗಿ ಇದು ದೀರ್ಘಕಾಲಿಕವಾದ ಪರಿಣಾಮ ಬೀರುತ್ತದೆ. ಅದು ನಗರ ಪ್ರದೇಶಗಳಲ್ಲಾಗಬಹುದು, ಪಟ್ಟಣ ಪ್ರದೇಶದಲ್ಲಾಗಬಹುದು, ನಾಳೆ ಎಲ್ಲರೂ ಆ ಅಕ್ರಮ ಕಟ್ಟಡಗಳನ್ನು ಕಟ್ಟಿ ನಮ್ಮದ್ದನ್ನು ಸಕ್ರಮ ಮಾಡಿ ಎಂದು ಒಂದು ಅರ್ಜಿಹಾಕಿ ಮಾರ್ಕೆಟ್ ವ್ಯಾಲ್ಯೂ ಹಣ ಕೊಡುತ್ತೇವೆಂದರೆ, ಯಾರಿಗೆ ಬೇಕಾದರೂ ಅದನ್ನು ಮಂಜೂರು ಮಾಡಬಹುದೆಂದು ಹೇಳಿದರೆ, ಅದಕ್ಕಿಂತ ದೊಡ್ಡ ಅಪರಾಧ ಇನ್ನೊಂದಾಗುವುದಿಲ್ಲ. ಇದರಲ್ಲಿ ಮಂಡಲ ಪಂಚಾಯಿತಿ ಎಂಬ ಪದ ಸೇರಿಸಬೇಕೆಂದು ಹೇಳಿದರೂ ಕೂಡ ಸಣ್ಣ ಸಣ್ಣ ಊರುಗಳಲ್ಲಿ ಸಹ ಈ ಕೆಲಸ ಆಗಬಹುದು. ಕಟ್ಟಡ ಕಟ್ಟಬಹುದು. ಅಲ್ಲಿ ಈಗಾಗಲೇ ರಸ್ತೆಗಳು ಇಲ್ಲ. ಎಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರೆ, ಗ್ರಾಮ ಪಂಚಾಯಿತಿ ಹೋಗಿ ಮಂಡಲ ಪಂಚಾಯಿತಿ ಬರುತ್ತಿದೆ. ಹಾಗಾಗಿ ಬೆಂಗಳೂರಿನಲ್ಲಿ ಎಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ ಎಂಬುದನ್ನು ನಾವು ನೀವೂ

11.50 ಪಿ.ಎಂ.

ನೋಡುತ್ತಿದ್ದೇವೆ. ವಾಹನಗಳೂ ಓಡಾಡುವುದಿಲ್ಲ. ಈ ಪಟ್ಟಣ ಪ್ರದೇಶಗಳಲ್ಲಿ ಹಾಗೂ ಮಂಡಲ ಪಂಚಾಯತ್ ವ್ಯಾಪ್ತಿಯಲ್ಲಿ ಅಕ್ರಮವಾಗಿ ಕಟ್ಟಡಗಳನ್ನು ಕಟ್ಟಿಕೊಳ್ಳುವ ಜನಗಳ ಸಲುವಾಗಿ ಈ ಸದನದಲ್ಲಿ ಒಂದು ಬಿಲ್ ಪಾಸ್ ಮಾಡಿ ಇದರ ಮೂಲಕ ಅಂಥ ಜನಗಳಿಗೆ ರಕ್ಷಣೆ ಕೊಡುವ ಪರಿಸ್ಥಿತಿ ನಿರ್ಮಾಣವಾಗಬಾರದು. ನಿಮ್ಮ ಸರ್ಕಾರ ಅಧಿಕಾರದ ಕಡೆಯ ದಿನಗಳಲ್ಲಿ ಇದೆ. ಹೀಗಿರುವಾಗ ನೀವು ಈಗ ಇಂಥ ಒಂದು ಬಿಲ್ಲನ್ನು ಪಾಸ್ ಮಾಡಿಸುವ ಬಗ್ಗೆ ತರಾತುರಿಯಲ್ಲಿರುವ ಉದ್ದೇಶವಾದರೂ ಏನು? ಮಾನ್ಯ

ಯಡಿಯೂರಪ್ಪನವರು ಹೇಳಿದ ಹಾಗೆ ಇದು ಹಲವಾರು ಗುಮಾನಿಗಳಿಗೆ ಎಡೆಮಾಡಿಕೊಡುತ್ತದೆ. ಆ ಗುಮಾನಿಗಳಿಂದ ನೀವು ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಈ ಬಿಲ್‌ನ್ನು ಇಲ್ಲಿ ತರಬೇಕಾದರೆ ಅಧಿಕಾರದ ಕಡೆಯ ಹಂತದಲ್ಲಿರುವ ನಿಮಗೆ ನೈತಿಕವಾದ ಅರ್ಹತೆ ಬೇಕು. ಕಾನೂನು ಪ್ರಕಾರ ಅಧಿಕಾರದ ಕಡೆಯ ದಿನದಲ್ಲೂ ಕೂಡ ಈ ಒಂದು ಕಾನೂನನ್ನು ನೀವು ತರಬಹುದು, ಆದರೆ ಇಲ್ಲಿ ನೈತಿಕತೆಯ ಪ್ರಶ್ನೆ ಬರುತ್ತದೆ. ಈ ನೈತಿಕವಾದ ಪ್ರಶ್ನೆಯ ಹಿನ್ನೆಲೆಯಲ್ಲಿ ಹೇಳುತ್ತೇನೆ, ದಯವಿಟ್ಟು ನೀವು ಈ ಬಿಲ್ಲ್ ಇಲ್ಲಿ ತರಬೇಡಿ. ಇದೇ ಸದನದಲ್ಲಿ ಕಂಠೀರವ ಸ್ಟೇಡಿಯಂ ಪಕ್ಕದಲ್ಲಿ ಮಲ್ಯ ಆಸ್ಪತ್ರೆಯವರಿಗೆ ಸರ್ಕಾರ ಜಾಗಕೊಟ್ಟಿರುವ ಬಗ್ಗೆ ನಾವು ಗಲಾಟೆಯನ್ನು ಮಾಡಿದಾಗ ಅಲ್ಲಿ ಜಾಗವನ್ನು ಕೊಟ್ಟಿಲ್ಲವೆಂದು ಸರ್ಕಾರ ಹೇಳಿತು. ಅದನ್ನು ಹೇಳಿದ ಮಾರನೇ ದಿನವೇ ಅಲ್ಲಿ ಪಾರ್ಕಿಂಗ್‌ಗಾಗಿ ಅವರಿಗೆ ಜಾಗದ ವ್ಯವಸ್ಥೆಯನ್ನು ಮಾಡಿಕೊಟ್ಟು ಸದನವನ್ನೂ ಕೂಡ ತಪ್ಪು ದಾರಿಗೆ ಎಳೆದಿರಿ. ಮತ್ತು ನಮಗೂ ಕೂಡ ಅಲ್ಲಿ ಜಾಗ ಕೊಟ್ಟಿಲ್ಲವೆಂದು ಹೇಳಿ ತಪ್ಪು ದಾರಿಗೆ ಎಳೆದಿರಿ. ಅತಿ ಬೆಲೆ ಬಾಳತಕ್ಕಂಥ ಜಾಗದಲ್ಲಿ ನೀವು ಮಲ್ಯ ಆಸ್ಪತ್ರೆಗೆ ಜಾಗವನ್ನು ಕೊಟ್ಟಿದ್ದೀರಿ. ಆದುದರಿಂದ ನಾವು ಈ ಬಿಲ್‌ನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ನೀವು ಇದನ್ನು ವಾಪಸ್ಸು ಹಿಂದಕ್ಕೆ ತೆಗೆದುಕೊಳ್ಳಿ ಅಥವಾ ಇದನ್ನು ಜಂಟೀ ಸದನ ಸಮಿತಿಗೆ ರೆಫರ್ ಮಾಡಿ.

ಶ್ರೀ ಎಸ್. ಪಿ. ಮುದ್ದಹನುಮೇಗೌಡ (ಕುಣಿಗಲ್) :— ಮಾನ್ಯ ಅಧ್ಯಕ್ಷರೆ, ಇದರಲ್ಲಿ 76 ಎಫ್.ಎಫ್.ನಲ್ಲಿ ಕ್ಲಾಸ್ 8ರ ಬಗ್ಗೆ ಇವರು ಹೇಳಿದ್ದಾರೆ.

MR. SPEAKER :— Since this is a discussion on the Bill, I will allow every Member whoever wants. Please be brief and do not repeat. Now, I have a communication from the Hon'ble Law Minister. I think they will not be moving it. Clause 8,76FF and 76FFF. They are not insisting. They are withdrawing.

SRI S.P. MUDDAHANUMEGOWDA :— I congratulate the Hon' Minister for law for withdrawing this.

ಶ್ರೀ ಟಿ.ಬಿ. ಜಯಚಂದ್ರ :— ಮಾನ್ಯ ಅಧ್ಯಕ್ಷರೆ, ಇವೊತ್ತು ಬಿಲ್ ಇಂಟ್ರಡ್ಯೂಸ್ ಮಾಡುವುದು ಮತ್ತೆ ಅದನ್ನು ನಾಳೆ ಬೆಳಿಗ್ಗೆ ವಾಪಸ್ಸು ತೆಗೆದುಕೊಳ್ಳುವುದು; ಈ ರೀತಿ ಆಗುವ ಬದಲು ಇದನ್ನು ಜಂಟೀ ಸದನ ಸಮಿತಿಗೆ ರೆಫರ್ ಮಾಡುವುದು ಒಳ್ಳೆಯದಲ್ಲವೆ?

ಅಧ್ಯಕ್ಷರು :— ಈ ಬಗ್ಗೆ ಇಲ್ಲಿ ಚರ್ಚೆಯಾದ ಮೇಲೆ ನೋಡೋಣ. ಮಾನ್ಯ ಮುದ್ದಹನುಮೇಗೌಡರೆ, ನೀವು ಮಾತನಾಡಿ. Let other members have their say.

SRI. S.P. MUDDAHANUMEGOWDA :— If the Government is not going to move Sec. 76FF and 76FFF, the very purpose of this

amendment is defeated. There is no question of bringing this amendment. Regularisation of unauthorised construction is the criteria. That is the question on hand. How regularisation, by levying fine? If you are removing that portion, then there is no question of moving this amendment. Better this amendment be withdrawn.

ಶ್ರೀ ಎಂ.ಎಸ್. ಪಾಟೀಲ್ (ಮಾನ್ಯ ನಗರಾಭಿವೃದ್ಧಿ ಸಚಿವರು) :— ಕಟ್ ಆಫ್ ಡೇಟ್ ಬಗ್ಗೆ ಮಾತ್ರ ಈಗ ಬಿಲ್ ತಂದಿರುವುದು. ಉಳಿದವುಗಳು ಒರಿಜಿನಲ್‌ನಲ್ಲಿ ಏನಿತ್ತೋ ಅವು ಹಾಗೆಯೇ ಇರುತ್ತದೆ.

ಶ್ರೀ ಎಸ್.ಪಿ. ಮುದ್ದುಹನುಮೇಗೌಡ :— ದಯಮಾಡಿ ಮಾನ್ಯ ಸಚಿವರು ಈಗೇನು ಕ್ಲಾರಿಫಿಕೇಷನ್ ಕೊಟ್ಟರೋ ಅದನ್ನು ಮತ್ತೆ ಹೇಳಬೇಕು. ಏಕೆಂದರೆ 76 ಎಫ್.ಎಫ್. ಕ್ಲಾಸ್‌ನ್ನು ಮೂವ್ ಮಾಡುತ್ತಿಲ್ಲವೆಂದು ಹೇಳಿದ ಮೇಲೆ ನೀವು ಈ ಅಮೆಂಡ್‌ಮೆಂಟ್‌ನಲ್ಲಿ ಏನು ಮಾಡುತ್ತಿದ್ದೀರಿ ಎಂಬುದನ್ನಾದರೂ ಹೇಳಿ.

MR SPEAKER :— Why is the former judicial officer confused?

ಶ್ರೀ ಎಸ್.ಪಿ. ಮುದ್ದಹನುಮೇಗೌಡ :— ನಾನು ಏಕೆ ಕೇಳುತ್ತಿದ್ದೇನೆಂದರೆ ಈ ಅಮೆಂಡ್‌ಮೆಂಟ್‌ನಲ್ಲಿ ಅನಧಿಕೃತ ಕಟ್ಟಡಗಳನ್ನು ರೆಗ್ಯುಲರೈಸ್ ಮಾಡುವ ಬಗ್ಗೆ ಹೇಳಿದ್ದಾರೆ. ಅಪ್ಪೋರ್ಷನ್ ಮೂವ್ ಮಾಡತ್ತಿಲ್ಲವೇ?

ಶ್ರೀ ಎಂ.ಎಸ್. ಪಾಟೀಲ್ :— ಇಲ್ಲ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :— ಆಲ್ ರೈಟ್, it is a good move "Validation of levy and collection of cess and surcharge for certain purpose." How can you take away the jurisdiction of the Court? How can you take away fundmental rights guaranteed to the citizens? Whatever your officer has done is deemed to have been done legally, lawfully. this is very bad. Then,

> "All acts, proceedings or things done or taken by the planning authority or any of its officer in connection with the levy assesment or collection of such cess or surcharge for all purposes be deemed to be and to have always been done or taken in accordance with law."

I think that is not in good taste.

And further

> "No suit or other proceedings shall be maintained or continued in any court or tribunal or before any authority for the reufnd of any such cess or surcharge:"

> "No vourt shall enforce any decree or order to direct the refund of any such cess and surcharge."

I think this is too much. ನೀವು ಈ ರೀತಿಯಾಗಿ ಮಾಡಿ ಪ್ರಜಾಪ್ರಭುತ್ವದಲ್ಲಿ ಪ್ರಜೆಗಳಿಗಿರುವ ಹಕ್ಕುಗಳನ್ನು ಕಸಿಯುವುದಕ್ಕೆ ಪ್ರಯತ್ನವನ್ನು ಮಾಡಿದ್ದೀರಿ. ಇದು ಸಲ್ಲದು. ನೀವು ಹಾಗೆ ಮಾಡುವುದಕ್ಕೆ ಬರುವುದಿಲ್ಲ. ಯಾವುದೇ ಅಕ್ರಮ ಜರುಗಿದರೂ ಕೂಡ ಅದನ್ನು ನ್ಯಾಯಾಲಯದಲ್ಲಿ ಪ್ರಶ್ನೆ ಮಾಡುವ ಅಧಿಕಾರವನ್ನು ಪ್ರತಿಯೊಬ್ಬ ಪ್ರಜೆಯೂ ಹೊಂದಿರುತ್ತಾನೆ. ನೀವು ಇದನ್ನು ರಿಸ್ಟ್ರಿಕ್ಟ್ ಮಾಡುವುದಕ್ಕೆ ಬರುವುದಿಲ್ಲ. ಆದುದರಿಂದ ನೀವು ಇದನ್ನು ರಿಮೂವ್ ಮಾಡಬೇಕು.

+ ಶ್ರೀ ಎ. ರಾಮದಾಸ್ (ಕೃಷ್ಣರಾಜ) :— ಮಾನ್ಯ ಅಧ್ಯಕ್ಷರೆ, ಸೆಕ್ಷನ್ 14 ಬಿ ಬಗ್ಗೆ ಮಾನ್ಯ ಸುರೇಶ್ ಕುಮಾರ್‌ರವರು ಮಾತನಾಡುತ್ತಾ ಅನೇಕ ವಿಚಾರಗಳನ್ನು ಹೇಳಿದ್ದಾರೆ. ವಿಶೇಷವಾಗಿ ರಸ್ತೆಗಳು ಹಾಗೂ ಮುಖ್ಯವಾಗಿ ಬೇಕಾದಂಥ ಪ್ರದೇಶಗಳನ್ನು ತೆಗೆದುಕೊಳ್ಳುವ ಸಲುವಾಗಿ ಇದನ್ನು ನಾವು ಸ್ವಾಗತ ಮಾಡುತ್ತೇವೆ. ಅದನ್ನು ಮುಖ್ಯವಾಗಿ ಇಟ್ಟುಕೊಂಡು ಅದರ ಹೆಸರಿನಲ್ಲಿಯೇ ಸೆಕ್ಷನ್ 14 'ಬಿ'ಯಲ್ಲಿ ಕೊನೆಯ ಪ್ಯಾರಾದಲ್ಲಿ ಒಂದು ವಿಚಾರವನ್ನು ಏನು ಹೇಳಲಾಗಿದೆಯೆಂದರೆ,

> "... such one hundred percent additional Floor Area Ratio on the lands so surrendered may be utilised on the remainder of the site or it may be transferred partially or fully to the land or site owned by the owner elsewhere."

ಅಧ್ಯಕ್ಷರೆ, ಇದನ್ನು ಬಹಳ ಅರ್ಥಗರ್ಭಿತವಾಗಿ ಸೇರಿಸಲಾಗಿದೆ. ಅಂದರೆ ಇದರ ಅರ್ಥ ಒಬ್ಬ ವ್ಯಕ್ತಿ ಯಾವುದೇ ಒಂದು ಪ್ರದೇಶದಲ್ಲಿ ತನ್ನ ಪ್ರದೇಶಕ್ಕೆ, ಉದಾಹರಣೆಗೆ ಕಾಟನ್ ಪೇಟೆಯಲ್ಲಿ ರಸ್ತೆಗೆ ಬೇಕಾದಂಥ ಪ್ರದೇಶವನ್ನು ಕಳೆದುಕೊಂಡರೆ ಅಲ್ಲಿ ಫ್ಲೋರ್ ಏರಿಯಾವನ್ನು ಅವನಿಗೆ ಕೊಡುವುದಕ್ಕೆ ಪ್ರಾವಿಷನ್ ಇದೆ. ಆದರೆ ಯಾವುದೇ ಒಂದು ರಿಮೋಟ್ ಏರಿಯಾದಲ್ಲಿ ಅವನಿಗೆ ಜಾಗವಿದ್ದು ಅದನ್ನು ಆತನು ಕಳೆದುಕೊಂಡರೆ, ಅವನಿಗೆ ಬೇಕಾದಂಥ ಜಾಗದಲ್ಲಿ ಅವನ ಪ್ರದೇಶ ಎಲ್ಲಿದೆ ಆ ಜಾಗದಲ್ಲಿ ಅವನಿಗೆ ಎಫ್.ಎ.ಆರ್.ನ್ನು ಇದು ಕೊಡುವಂಥಾದ್ದು ಆಗಿದೆ. ಅಂದರೆ ಇದರರ್ಥ ಸಿಟಿಯ ಮಧ್ಯದಲ್ಲಿ ಯಾವ್ಯಾರದ್ದು

ಕಮರ್ಶಿಯಲ್ ಪ್ಲೇಸ್‌ಗಳಿವೆ ಅಂಥವರಿಗೆ ಇದರಲ್ಲಿ ಪ್ರಾವಿಷನ್ ಮಾಡುವುದಕ್ಕೋಸ್ಕರವಾಗಿ ಈ ಒಂದು ಕ್ಲಾಸ್‌ನ್ನು ಸೇರಿಸಲಾಗಿದೆ. ಸಾಮಾನ್ಯ ರೈತನಿಗೆ ಸಹಾಯ ಮಾಡುವ ಉದ್ದೇಶ ಇದರಲ್ಲಿ ಇಲ್ಲ. ಕೇವಲ ಯಾವುದೋ ಬೇರೆ ಪ್ರದೇಶದಲ್ಲಿರುವಂಥ ಹೋಟೆಲ್‌ನವರಿಗೆ ಮತ್ತು ಇತರರಿಗೆ ಪ್ರಾವಿಷನ್ ಮಾಡುವುದಕ್ಕೋಸ್ಕರವಾಗಿ ಕಾನೂನಿನ ಪ್ರಕಾರ ಅವಕಾಶ ಮಾಡಿಕೊಡುವುದಕ್ಕೆ ಈ ಬಿಲ್‌ನ್ನು ತರುತ್ತಿದ್ದಾರೆ. ಇದು ಒಂದು ಭಾಗ. ಇನ್ನು ಎರಡನೆಯದಾಗಿ ಜೋನಲ್ ರೆಗ್ಯುಲೇಷನ್ ಬಗ್ಗೆ ಹೇಳಿದ್ದಾರೆ. ಉದಾಹರಣೆಗೆ ಮೈಸೂರಿನಲ್ಲಿ ಟೌನ್ ಪ್ಲಾನ್ ಆ್ಯಕ್ಟ್ ಪ್ರಕಾರ ಅಲ್ಲಿ ಮೂರು ಫ್ಲೋರ್‌ಗಿಂತ ಹೆಚ್ಚು ಹೋಗುವುದಕ್ಕೆ ಪ್ರಾವಿಷನ್ ಇಲ್ಲ; ಯಾವುದೇ ಕಟ್ಟಡ ಮೂರು ಫ್ಲೋರ್‌ಗಳಿಗಿಂತ ಮೇಲಕ್ಕೆ ಹೋಗಬಾರದು ಎಂದು ಇದೆ. ಆ್ಯಕ್ಟ್ ಬಂದತಕ್ಷಣ ಆ್ಯಕ್ಟ್ ಶೆಲ್ಬರ್‌ನಲ್ಲಿ ಯಾವುದಾದರೂ ಒಂದು ವ್ಯಕ್ತಿ ಯಾವುದೋ ಒಂದು ಎಕ್ಸ್‌ಟೆನ್‌ಷನ್‌ನಲ್ಲಿ ರಿಂಗ್ ರೋಡ್‌ಗೋ ಇನ್ನು ಯಾವುದಕ್ಕೋ ಭೂಮಿಯನ್ನು ಕಳೆದುಕೊಂಡರೆ ಸಿಟಿ ಮಧ್ಯದಲ್ಲಿ ನೂರು ಪರ್ಸೆಂಟ್ ಎಫ್‌ಎಆರ್ ತೆಗೆದುಕೊಳ್ಳುವುದಕ್ಕೋಸ್ಕರ ಐದು ಫ್ಲೋರ್ ಹೋಗುವುದಕ್ಕೆ ನೀವು ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ಕೇವಲ ಸಿಟಿ ಮಧ್ಯದಲ್ಲಿ ಬರುವ ಮಲ್ಟಿ ಸ್ಟೋರ್ಡ್ ಬಿಲ್ಡಿಂಗ್ ಅನ್ನು ನಗರ ಪ್ರದೇಶದಲ್ಲಿ ತರುವುದಕ್ಕೋಸ್ಕರ ನೀವು ಸೆಕ್ಷನ್ 14(ಬಿ)ಯಲ್ಲಿ ಸೆಕ್ಷನ್ (1) ಮತ್ತು (2) ಇದೆರಡಕ್ಕೂ ಅಮೆಂಡ್‌ಮೆಂಟ್ ತಂದಿರುವುದು ಖಂಡಿತವಾಗಿ ತಪ್ಪು ವಿಚಾರ. ಕಾರಣ ಎಲ್ಲಾ ದೃಷ್ಟಿಯಲ್ಲಿ ಪರಿಸರ ಮಾಲಿನ್ಯ ಈ ರೀತಿ ಪ್ರತಿಯೊಂದು ವಿಚಾರಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಎಂ.ಎಸ್. ಬಿಲ್ಡಿಂಗ್ ಕಟ್ಟುವುದಕ್ಕೆ ಅವಕಾಶ ಮಾಡಬಾರದು. ಆ ದೃಷ್ಟಿಯಿಂದ ನಾನು ಈ ಆ್ಯಕ್ಟನ್ನು ವಿರೋಧ ಮಾಡುತ್ತಿದ್ದೇನೆ. ಇನ್ನು ಎರಡನೆಯದಾಗಿ, ಪ್ರಮುಖವಾಗಿ ಅಮೆಂಡ್‌ಮೆಂಟ್ ಸೆಕ್ಷನ್ 18ರಲ್ಲಿ ಸೆಕ್ಷನ್ ಒಂದರಲ್ಲಿ ಏನು ಹೇಳಿದರು, 14 ಎ ಎಂದರೆ ಸೆಕ್ಷನ್ ಒಂದರಲ್ಲಿ ಏನು ಹೇಳಿದರು? change of land use ಸೆಕ್ಷನ್ 15, ಆ ಬಿಲ್ಡಿಂಗ್‌ಗೆ ಸಂಬಂಧಪಟ್ಟ ಡೆವಲಪ್‌ಮೆಂಟ್ ಚಾರ್ಜಸ್ ಅನ್ನು ಸೆಕ್ಷನ್ 17-ಅದರಲ್ಲಿ ಲೇಔಟ್‌ಗೆ ಬೇಕಾದಂತಹ ಚಾರ್ಜಸ್ ಅನ್ನು ಈಗ ಕಲೆಕ್ಟ್ ಮಾಡುವ ಬಗ್ಗೆ ಸರ್ಕಾರ ಸ್ಪೆಸಿಫೈ ಮಾಡಿದ್ದಾರೆ. ಮೈಸೂರು ನಗರಕ್ಕೆ ಇಷ್ಟು, ಬೆಂಗಳೂರು ನಗರಕ್ಕೆ ಇಷ್ಟು ಎಂದು ಹೇಳಿ ಸರ್ಕಾರ ನಿರ್ಧಾರ ಮಾಡುತ್ತಿದೆ. ಇಲ್ಲಿ ಪ್ರಾವಿಜನ್ ಮಾಡುತ್ತಿರುವುದು ಏನೆಂದರೆ, ಯಾರು ಲೋಕಲ್ ಅಥಾರಿಟೀಸ್ ಇದ್ದಾರೆ ಅವರು ತಮ್ಮ ಇಚ್ಛೆ ಬಂದಕೂಡಲೇ ತಾವೇ ಮಾರ್ಕೆಟ್ ವ್ಯಾಲ್ಯೂ ಅನ್ನು ನಿರ್ಧಾರ ಮಾಡಿ ಅದರಲ್ಲಿ ಮೂರನೇ ಒಂದು ಭಾಗದಷ್ಟು ಪಡೆಯಬಹುದು ಎಂದು ಹೇಳಿ ಬಿಟ್ಟು ಕೊಟ್ಟಿರುವುದು ಒಬ್ಬರಿಗೆ ಇನ್ನೊಬ್ಬರಿಗೆ ಅವಕಾಶ ಮಾಡಿಕೊಡುವುದಕ್ಕೋಸ್ಕರ ನಾವೇ ಬೇಕಾಗಿ ಈ ಆ್ಯಕ್ಟ್‌ನಲ್ಲಿ ಪ್ರಾವಿಜನ್ ಮಾಡಿಕೊಳ್ಳುತ್ತಿದ್ದೇವೆ. ಈಗಾಗಲೇ ಹಾಲಿ ಇರುವಂತಹ ವ್ಯವಸ್ಥೆ ಏನಿದೆ, ಜನಸಂಖ್ಯೆ ಆಧಾರದ ಮೇಲೆ ನೀವು ಏನು ರೇಟ್ ಇಟ್ಟಿದ್ದೀರಿ ಅದನ್ನು ವಯಲೇಟ್ ಮಾಡುವುದಕ್ಕೆ ಈ ಆ್ಯಕ್ಟ್‌ನಲ್ಲಿ ಪ್ರಾವಿಷನ್ ಮಾಡಿಕೊಟ್ಟಹಾಗೆ ಆಗುತ್ತದೆ. ಮೂರನೆಯದು, ಸೆಕ್ಷನ್ 18(ಎ) ನಲ್ಲಿ ಒಂದು ಆಶ್ಚರ್ಯ ಪಡುವಂತಾದ್ದು ಈಗಾಗಲೇ ಸೆಕ್ಷನ್ 18 ಪ್ರಕಾರದಲ್ಲಿ

ಡೆವಲಪ್‌ಮೆಂಟ್ ಚಾರ್ಜಸ್ ಕಲೆಕ್ಟ್ ಮಾಡುತ್ತಿದ್ದೀರಿ. ಯಾವುದಕ್ಕೋಸ್ಕರ ಡೆವಲಪ್‌ಮೆಂಟ್ ಚಾರ್ಜಸ್? ಡೆವಲಪ್‌ಮೆಂಟ್ ಚಾರ್ಜಸ್ ಎಂದರೆ ಆ ಪ್ರದೇಶದಲ್ಲಿ ಬೇಕಾದಂತಹ ಫೆಸಿಲಿಟೀಸ್ ಕೊಡುವುದಕ್ಕೋಸ್ಕರ ಡೆವಲಪ್‌ಮೆಂಟ್ ಚಾರ್ಜಸ್ ಕಲೆಕ್ಟ್ ಮಾಡುತ್ತಿದ್ದಾರೆ. ಅದಲ್ಲದೆ ಅದರ ಜೊತೆಯಲ್ಲಿ 18A-Levy and collection of cess and surcharge in certain areas. ಹಾಕುವಂತೆ ಹೇಳಿದ್ದೀರಿ. ಅದನ್ನು ಹಾಕುವಂತಹ ಅವಶ್ಯಕತೆ ಏನು? ನೀವು ಕಲೆಕ್ಟ್ ಮಾಡುವಂತಹ ಡೆವಲಪ್‌ಮೆಂಟ್ ಚಾರ್ಜಸ್ ಏಕೆ? ಸೆಸ್ ಏಕೆ ಎಂದು ಇಲ್ಲಿ ಅರ್ಥವಾಗದೇ ಇರುವಂತಹ ಪ್ರಶ್ನೆ. ಎಂದರೆ ಈಗ ತೆಗೆದುಕೊಳ್ಳುತ್ತಿರುವಂತಹ ಹಣವನ್ನು ಕೇವಲ ಡಿಪಾರ್ಟ್‌ಮೆಂಟ್ ಅಧಿಕಾರಿಗಳಿಗೋಸ್ಕರ ಖರ್ಚು ಮಾಡುತ್ತಿದ್ದೀರಾ? ಈ ಹಣವನ್ನು ಮಾತ್ರ ನೀವು ಡೆವಲಪ್‌ಮೆಂಟ್‌ಗೋಸ್ಕರ ಖರ್ಚು ಮಾಡುತ್ತೀರಾ ಎನ್ನುವುದು ಪ್ರಶ್ನೆ. ಇದರಿಂದ ನನಗೆ ಆಶ್ಚರ್ಯವಾಗುತ್ತದೆ. ಒಂದು ಅಮೆಂಡ್‌ಮೆಂಟ್ ಹೇಳುವಾಗ ವಾಟರ್ ಚಾರ್ಜ್, ರಿಂಗ್ ರೋಡ್‌ಗೆ ಇದೆಲ್ಲಾ ಹೇಳುತ್ತಾ, ಮಾಸ್ ರ್‍ಯಾಪಿಡ್ ಸಿಸ್ಟಂ, ಎಂದರೆ ಆ ಪ್ರದೇಶಕ್ಕೆ ಒಂದು ಸಿಟಿ ಬಸ್ ಹಾಕುತ್ತೀರಿ; ಆ ಸಿಟಿ ಬಸ್ ಚಾರ್ಜ್ ಆ ಪ್ರದೇಶದಲ್ಲಿ ಇರುವಂತಹ ಯಾರು ಪಾಸ್‌ಗೆ ಅಪ್ಲೈ ಮಾಡುತ್ತಾರೋ ಅಥವಾ ಚೇಂಜ್ ಆಫ್ ಲ್ಯಾಂಡ್‌ಗೆ ಅಪ್ಲೈ ಮಾಡುತ್ತಾರೋ ಅವರ ಮೇಲೆ ಸಿಟಿ ಬಸ್ ಚಾರ್ಜ್ ಅನ್ನು ಹಾಕುತ್ತೀರಿ. ಅಥವಾ ಬೆಂಗಳೂರಿನಲ್ಲಿ ಸಿಟಿ ರೈಲು ತರುತ್ತೀರಿ, ಅಥವಾ ನೀವು ಆ ಪ್ರದೇಶದಲ್ಲಿ ಯಾರು ಇನ್ನೂ ಕಟ್ಟಡವನ್ನು ಕಟ್ಟಿಲ್ಲ ಅಂತಹವರ ಮೇಲೆ ಸೆಸ್ ಹಾಕುವಂತಹ ವಿಚಾರಗಳು ಏನಿವೆ, ಅದು ತಪ್ಪು. ಸೆಕ್ಷನ್ 14, 15 ಮತ್ತು 18 ರಲ್ಲಿ ನೀವು ತೆಗೆದುಕೊಳ್ಳುತ್ತಿರುವ ಹಣವೇ ಅದಕ್ಕೋಸ್ಕರ ಇರುವುದರಿಂದ ಈ ಸರ್ ಚಾರ್ಜಸ್ ಅನ್ನು ಹಾಕುವ ಪದ್ಧತಿ ಸಿಂಧೂವಲ್ಲ. ಇದನ್ನು ನಾನು ವಿರೋಧ ಮಾಡುತ್ತಿದ್ದೇನೆ ಎಂದು ಹೇಳುತ್ತಾ, ಸೆಕ್ಷನ್ 24 ಎನ್ ಫೋರ್ಸ್‌ಮೆಂಟ್ ಆಫ್ ಕಾಂಪ್ರಹೆನ್ಸೀವ್ ಡೆವಲಪ್‌ಮೆಂಟ್ ಪ್ಲಾನ್, ಇದರಲ್ಲಿ ಓಡಿಸಿ ಈಗಾಗಲೇ ಇದೆ. ಓಡಿಸಿ ಒಂದು ಕಾಂಪ್ರಹೆನ್ಸೀವ್ ಡೆವಲಪ್‌ಮೆಂಟ್ ಪ್ಲಾನ್ ಅನ್ನು ತರುವುದಕ್ಕೆ ಮುಂಚೆ ನೀವು ಓಡಿಸಿ ಏನು ಎಕ್ಸಿಸ್ಟೆನ್ಸ್‌ನಲ್ಲಿ ಕೊಟ್ಟಿರುತ್ತೀರಿ ಅದಕ್ಕೆ ಸಂಬಂಧಪಟ್ಟ ಸೆಕ್ಷನ್ 14, 14ಎ, 15, ಹಾಗೂ 16ಕ್ಕೆ ಏನು ಸಂಬಂಧಪಟ್ಟ ರೂಲ್ಸ್ ಇದೆ ಅದನ್ನು ಸಿಡಿಪಿಯಲ್ಲಿ ತರಬೇಕು. ಆದರೆ ಈ ಅಮೆಂಡ್‌ಮೆಂಟ್ ಏಕೆ ತಂದಿರಿ? ಈಗಾಗಲೇ ಇದು ಎಗ್ಸಿಸ್ಟೆನ್ಸ್‌ನಲ್ಲಿ ಇದೆ. ಓಡಿಪಿಯಲ್ಲಿ ಇರುವಂತಹ ರೂಲ್ಸ್ ಅಂಡ್ ರೆಗ್ಯೂಲೇಷನ್ಸ್ ಏನಿದೆ ಅದನ್ನು ತರುವುದಕ್ಕೋಸ್ಕರ muttis and mutandis we are already following the DDP. What is the need of bringing of enforcement of development plan under Section 243. ಇದರ ಅವಶ್ಯಕತೆ ಇಲ್ಲದೆ ಇರುವಂತಹ ಅಮೆಂಡ್‌ಮೆಂಟ್ ತರುವಂತಹ ಕೆಲಸವಾಗಿದೆ. ಸನ್ಮಾನ್ಯ ಮಂತ್ರಿಗಳು ಹೇಳಬೇಕು, 76ರಲ್ಲಿ ಎಫ್‌ಎಫ್‌ಎಫ್ ಅಥವಾ ಎಫ್‌ಎಫ್ ಬಿಟ್ಟಿದ್ದೀರಾ?

ಶ್ರೀ ಎಂ.ಎಸ್. ಪಾಟೀಲ್ :— ಇದು ಯಾವುದನ್ನೂ ಬಿಟ್ಟಿಲ್ಲ. ಈಗೆ ಏನು ಅಮೆಂಡ್‌ಮೆಂಟ್ ಕಟ್ ಆಫ್ ಡೇಟ್ ಎಂದು ಇತ್ತು ಅದನ್ನು ಅಷ್ಟೇ ಬಿಟ್ಟಿದ್ದೇವೆ.

ಶ್ರೀ ಎ. ರಾಮದಾಸ್ :— ಸೆಕ್ಷನ್ 76 ಎಫ್‌ಎಫ್ ನೀವು ತರುವುದಾದರೆ ಸೆಕ್ಷನ್ 14, 14ಎ, 15, 16, 17 ಮತ್ತು 18ಎ ಏನಿದೆ ಆ ಸೆಕ್ಷನ್ ಎಲ್ಲಾ ಏಕೆ? ನೀವು ಈಗ ಏನು ಹೇಳುತ್ತಿದ್ದೀರಿ ಮಾಡಿರುವಂತಹ ತಪ್ಪೇನಿದೆ ಅದನ್ನು ನೀವು ರೆಗ್ಯುಲರೈಸ್ ಮಾಡುವುದೇ ಆದರೆ ಇನ್ನು ಮುಂದಕ್ಕೆ ಕಾನೂನಿನ ಪ್ರಕಾರ ಯಾರು ನೂರು ಪರ್ಸೆಂಟ್ ವಯಲೇಷನ್ ಮಾಡಿದರೂ ಕೂಡ ರೆಗ್ಯುಲರೈಸ್ ಮಾಡುವುದಕ್ಕೆ ಇಲ್ಲಿ ಅವಕಾಶ ಇರುವುದರಿಂದ ಈ ಆ್ಯಕ್ಟ್ ಎಲ್ಲಾ ಏಕೆ? ಈ ಸೆಕ್ಷನ್ ಎಲ್ಲಾ ಏಕೆ? ಇದು ಇರ್ರೆಲವೆಂಟ್ ಸೆಕ್ಷನ್ ಆದ್ದರಿಂದ ಈ ಸೆಕ್ಷನ್‌ನಲ್ಲಿ ಎಫ್‌ಎಫ್ ಅನ್ನು ಇಂಟ್ರಡ್ಯೂಸ್ ಮಾಡಿದ ಮೇಲೆ ಆ ಸೆಕ್ಷನ್ ಇಟ್ಟುಕೊಂಡಿರುವಂಥಾದ್ದು, ಜೋನಲ್ ರೆಗ್ಯುಲೇಷನ್ಸ್ ಏನಿದೆ ಅದನ್ನು ಕಾನೂನು ಪ್ರಕಾರ ಸಿಟಿ ಇಂಪ್ರೂಮೆಂಟ್‌ಗೋಸ್ಕರ ಇಟ್ಟಿದ್ದೇವೆ. ಆದರೆ ನೀವು ಈ ಒಂದು ಎಫ್‌ಎಫ್ ಅನ್ನು ತರುವುದಾದರೆ ಈ ಸೆಕ್ಷನ್ ಎಲ್ಲಾ ಕೂಡ null and void ಆಗುತ್ತವೆ. ಇದನ್ನು ತರುವಂತಹ ವ್ಯವಸ್ಥೆ ಏನು? ಆ ದೃಷ್ಟಿಯಲ್ಲಿ ಕೊಲೆ ಮಾಡಿದವವನಿಗೆ ಇಷ್ಟು ಶಿಕ್ಷೆ ಎನ್ನುವುದಾದರೆ ಮತ್ತೆ ಇನ್ನೊಂದು ಸೆಕ್ಷನ್ ಹಾಕಿ, ಮಂತ್ರಿಯಾದರೆ ಅವರನ್ನು ಬಿಟ್ಟು ಬಿಡಬಹುದು, ಗೌವರ್ನರ್ ಆದರೆ ಬಿಡಬಹುದು ಎಂದು ಒಂದು ಅಮೆಂಡ್‌ಮೆಂಟ್ ತಂದರೆ ನಾವು ಕೊಲೆ ಮಾಡುವವನಿಗೆ ಏನು ಶಿಕ್ಷೆ ವಿಧಿಸದೆ ಇದ್ದರೆ ಸೆಕ್ಷನ್ ಏಕೆ? ಹಾಗೂ ಈ ಸೆಕ್ಷನ್ ಅವಶ್ಯಕತೆ ನಿಮ್ಮ ಟೌನ್ ಪ್ಲಾನ್ ಆ್ಯಕ್ಟ್‌ನಲ್ಲಿ ಇರುವುದಿಲ್ಲ. ಆದುದರಿಂದ ಈ ಎಫ್‌ಎಫ್ ಪ್ರೊಸ್ಪೆಕ್ಟೀವ್ ಎಫೆಕ್ಟ್ ಅಲ್ಲ. 16 ಎಫ್‌ಎಫ್ ಮತ್ತು 76 ಎಫ್‌ಎಫ್‌ಎಫ್ ಅದನ್ನು ಬಿಡಬೇಕು. ಎಫ್‌ಎಫ್‌ಎಫ್ ಬಗ್ಗೆ ಒಂದು ವಿಚಾರವನ್ನು ಹೇಳಿದ್ದಾರೆ. ಯಾರು ಪೂರ್ತಿ ಎಂದರೆ 100ರಷ್ಟು ವಯಲೇಷನ್ ಮಾಡಿದ್ದಾರೆ ಅವರನ್ನು ಸರ್ಕಾರ ಇಷ್ಟಪಟ್ಟಲ್ಲಿ ಅದನ್ನು ತೆಗೆದುಕೊಳ್ಳಬಹುದು ಅಥವಾ ಅದನ್ನು ರೆಗ್ಯುಲರೈಸ್ ಮಾಡಬಹುದು. ಬಡವ ಯಾರಾದರೂ ಮನೆ ಕಟ್ಟಿದರೆ ಅದನ್ನು ಒಡೆಯಬಹುದು. ಶ್ರೀಮಂತರುಗಳಿಗೆ ರಕ್ಷಣೆಯನ್ನು ಕೊಟ್ಟು ಅವರಿಗೆ ರೆಗ್ಯುಲರೈಸ್ ಮಾಡಬಹುದು. ತ್ರಿಬಲ್ ಎಫ್‌ನಲ್ಲಿ ಇರುವಂತಹ ಅವಕಾಶ ಏನಿದೆ ಎಂದರೆ ಸರ್ಕಾರ ಎಲ್ಲವನ್ನು ಎದುರಿಸುವಂತಹ ಒಂದು ಉದ್ದೇಶವನ್ನು ಇಟ್ಟುಕೊಂಡು ಇದ್ದನ್ನು ತಂದಿರುವುದಾದರೆ ನಿಮ್ಮ ಜೋನಲ್ ರೆಗ್ಯುಲೇಷನ್ಸ್ ಏನಿದೆ ಅದನ್ನು ಸಂಪೂರ್ಣವಾಗಿ ತೆಗೆದಿಟ್ಟು ಆಮೇಲೆ ಈ ಒಂದು ಬಿಲ್ಲನ್ನು ತರಬೇಕಾಗುತ್ತದೆ. ಇಲ್ಲದಿದ್ದರೆ ಅಂನ್ನು ತರವಂತಹ ಅವಶ್ಯಕತೆ ಇಲ್ಲ. ನಾನು ಇದನ್ನು ಸಂಪೂರ್ಣವಾಗಿ ವಿರೋಧಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) :— ನಾನು ಹೇಳುವುದನ್ನು ಮಾನ್ಯ ಕಾನೂನು ಸಚಿವರು ಕೇಳಿದರೆ ಬಹಳ ಒಳ್ಳೆಯದು. ಕ್ಲಾಜ್ 8ರಲ್ಲಿ ಸೆಕ್ಷನ್ 76ಕ್ಕೆ ತಿದ್ದುಪಡಿ ತಂದಿದ್ದೀರಿ. ಅದರಲ್ಲಿ ನಾವು ರೆಗ್ಯುಲರೈಜ್ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿರಿ. Sec. 76FF Regularisation of certain buildings, 76FF Forfeiture of certain buildings ಒಂದು ಕ್ಲಾಜ್ ಅನ್ನು ತಾವು ತಿದ್ದುಪಡಿ, ಇನ್ ಸೆಕ್ಷನ್ ಮಾಡಿದ್ದೀರಿ. ಇದರಲ್ಲಿ ಏನು ಹೇಳುತ್ತೀರಿ, ಯಾವುದನ್ನು ರೆಗ್ಯುಲರೈಜ್ ಮಾಡಲಿಲ್ಲ

ಅದನ್ನು ಒಡೆದು ಹಾಕತಕ್ಕಂಥಾದ್ದು. ಎಂದರೆ ವಯಲೇಷನ್ ಮಾಡಿರುವುದನ್ನು ಒಡೆದುಹಾಕುವುದು; ಒಡೆದುಹಾಕತಕ್ಕಂಥ ಕೆಲಸ. ಕ್ಲಾಜ್ ಹೀಗೆ ಹೇಳುತ್ತದೆ.

``Constructed without obtaining a permission or in contravention of any order passed or direction issued by any authority is inadvisable or impracticable on account of heavy expenditure and huge loss in carrying out the demolition of such building or part of a building... ಇದನ್ನು ಹೇಳಿಬಿಟ್ಟಿರಿ. ಅಂತಹ ಸಂದರ್ಭದಲ್ಲಿ ಏನು ಹೇಳುತ್ತೀರಿ ಸರ್ಕಾರಕ್ಕೆ ಫೋರ್‌ಫೀಟ್ ಮಾಡಿಕೊಳ್ಳುವುದು ಎಂದು ಹೇಳಿದಿರಿ. ಈಗ ನೀವು 76 ಎಫ್‌ಎಫ್ ಪ್ರಕಾರ ರೆಗ್ಯುಲರೈಜ್ ಮಾಡುವುದಕ್ಕೆ ಒಂದು ಕ್ಲಾಜ್‌ನಲ್ಲಿ ಅವಕಾಶ ಮಾಡಿದ್ದೀರಿ. ಆ ಕ್ಲಾಜ್ ಪ್ರಕಾರ ಯಾವುದನ್ನು ರೆಗ್ಯುಲರೈಜ್ ಮಾಡುವುದಕ್ಕಾಗುವುದಿಲ್ಲ ಅದನ್ನು ಒಡೆದು ಹಾಕುವುದಕ್ಕೆ ನಿಮಗೆ ಇರತಕ್ಕಂಥ ಒಂದು ಮಾರ್ಗ. ಒಡೆದು ಹಾಕುವುದಕ್ಕೆ ಇದು ಸಾಧುವಲ್ಲ ಅಥವಾ ಹೆಚ್ಚು ಖರ್ಚು ಬರುತ್ತದೆ ಎಂದು ನೀವು ಫೋರ್ ಫೀಟ್ ಮಾಡಿಕೊಂಡರೆ ಸರ್ಕಾರಕ್ಕೆ ಆ ಕಟ್ಟಡ ಬಂದ ತಕ್ಷಣ ವ್ಯಾಲೀಡ್ ಆಗುತ್ತದೆ. ಅವನ ಕೈಯಲ್ಲಿದ್ದರೆ ವ್ಯಾಲೀಡ್ ಆಗುತ್ತದೆ. ಸರ್ಕಾರದ ಸ್ವಾಧೀನಕ್ಕೆ ಬಂದ ತಕ್ಷಣ ವ್ಯಾಲೀಡ್ ಆಗುತ್ತದೆ. ಇದು ಯಾವ ಲಾಜಿಕ್?

ಶ್ರೀ ಜೆ.ಹೆಚ್. ಪಟೇಲ್ :— ಇದು ಸರ್ಕಾರದ ಲಾಜಿಕ್.

ಶ್ರೀ ಕಾಗೋಡು ತಿಮ್ಮಪ್ಪ :— ಅದರ ಜೊತೆಯಲ್ಲಿ ಮುಂದೆ ಹೋಗಿ ಹೇಳುತ್ತಾರೆ, ಸರ್ಕಾರದ ಲಾಜಿಕ್ ಪ್ರಕಾರ ಅದನ್ನು ಅಪ್ಲೆ ಮಾಡಿದಮೇಲೆ ಸರ್ಕಾರದ ಸ್ವಾಧೀನದಲ್ಲಿ ಇರುತ್ತದೆ.

Provided that the Planning Authority or the authority or the authority in person as the case may be, shall not declare any such building or part of the building to be forfeited... ಇದರ ಅರ್ಥವೇನು? ಸರ್ಕಾರದ ಲಾಜಿಕ್ ಪ್ರಕಾರ ಇನ್-ವ್ಯಾಲೀಡ್ ಆಗಿರುವಂಥಾದ್ದು ಸರ್ಕಾರಕ್ಕೆ ಬಂದಕೂಡಲೇ ನಿಮ್ಮ ಲಾಜಿಕ್ ಪ್ರಕಾರ ಅದು ವ್ಯಾಲೀಡ್ ಆಗುತ್ತದೆ. ಅದನ್ನು ನೀವೇನಾದರೂ ಇಟ್ಟುಕೊಳ್ಳುತ್ತೀರಾ? ಇಲ್ಲ, ಅದನ್ನು ಯಾರಾದರೂ ತೆಗೆದುಕೊಳ್ಳಬಹುದೇ? ಓನರ್ ಅಥವಾ ಇಂಟರೆಸ್ಟರ್ ಪರ್ಸನ್ ಯಾರು ಬೇಕಾದರೂ ಮಾರ್ಕೆಟ್ ವ್ಯಾಲ್ಯೂಡ್‌ಗಿಂತ ಎರಡರಷ್ಟು ವ್ಯಾಲ್ಯು ಕೊಟ್ಟು ಕೊಂಡುಕೊಳ್ಳಬಹುದೆಂದರೆ ಇದರ ಅರ್ಥ ಏನು? ಇದರ ಉದ್ದೇಶವೇನು? ಮಾನ್ಯ ಮುಖ್ಯಮಂತ್ರಿಯವರೇ, ನಮ್ಮ ಈ ನಾಗರೀಕ ಸಮಾಜದಲ್ಲಿ ನಮ್ಮ ಪಟ್ಟಣಗಳನ್ನು ಟೌನ್‌ಗಳನ್ನು ಕಟ್ಟುವಂತಹ ಸಂದರ್ಭದಲ್ಲಿ ರಸ್ತೆಗಳು, ಬಿಲ್ಡಿಂಗ್‌ಗಳು, ನಾಗರಿಕನ ಸುರಕ್ಷತೆ ಇವೆಲ್ಲವನ್ನೂ ಮುಂದುವರೆಸುವಂಥಾದ್ದು ಇರಬೇಕು. ಅಂದರೆ ರಸ್ತೆಗಳ

ಬದಿ ಇರಬೇಕು, ಬಿಲ್ಡಿಂಗ್ ಇದ್ದರೆ ಎಷ್ಟು ಜಾಗವನ್ನು ಬಿಡಬೇಕು, ಕಾರಿಗೆ ಎಷ್ಟು ಜಾಗ ಬಿಡಬೇಕು, ಜನರಿಗೆ ಗಾಳಿಯ ತೊಂದರೆಯಾಗಬಾರದು; ಬೆಳಕು ಬರಬೇಕು, ಇದೆಲ್ಲಾ ನಾಗರಿಕರ ಸೌಲಭ್ಯಗಳನ್ನು ಗಮನದಲ್ಲಿಟ್ಟುಕೊಂಡು ಇವೆಲ್ಲಾ ಪಟ್ಟಣ ಪ್ರದೇಶದಲ್ಲಿ ಸಿಗಬೇಕು ಮತ್ತು ಅವರ ರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ಇವೆಲ್ಲಾ ಪಟ್ಟಣ ಪ್ರದೇಶದಲ್ಲಿ ಸಿಗಬೇಕು ಮತ್ತು ಅವರ ರಕ್ಷಣೆಯನ್ನು ಗಮನದಲ್ಲಿಟ್ಟುಕೊಂಡು ಈ ಕಂಟ್ರಿ ಪ್ಲಾನಿಂಗ್ ಅನ್ನು ತಂದಿರುವಂಥಾದ್ದು. ಇದನ್ನು ಅತಿಕ್ರಮ ಮಾಡಿದ್ದಾರೆಂದು ಒಂದು ಸಾರಿ ಗಮನಕ್ಕೆ ತಂದರೆ ಆಯಿತು. ಈಗ ಆಸ್ಪತ್ರೆ, ವಿಜಯ ಬ್ಯಾಂಕ್ ಇದರಲ್ಲಿ ನಿಮ್ಮ ವ್ಯವಹಾರ ಏನು ನಡೆದಿದೆಯೋ ಅದು ನಮಗೆ ಗೊತ್ತಿಲ್ಲ. ಆದರೆ ಕೆಲವು ಭಾಗಗಳನ್ನು ರೆಗ್ಯುಲರೈಜ್ ಮಾಡಬೇಕೆಂದು ಮಾಡಿದ್ದೀರಿ. ಅದನ್ನು ಅಷ್ಟಕ್ಕೆ ಸೀಮಿತಮಾಡಿಬಿಡಿ. ನಿಮ್ಮ ವಿಸ್ಡಂ ಪ್ರಕಾರ, ರಿಯಾಲಿಸ್ಟಿಕ್ ಅಪ್ರೋಚ್ ದೃಷ್ಟಿಯಿಂದ ಒಂದು ಹಂತದವರೆಗೆ ವ್ಯಾಲೀಡ್ ಆಗಿರುವಂಥಾದ್ದಕ್ಕೆ ರೆಗ್ಯುಲರೈಜ್ ಮಾಡುವುದಕ್ಕೆ ಏನು ತೀರ್ಮಾನ ಮಾಡಿದ್ದಾರೋ ಅದನ್ನು ಅಷ್ಟಕ್ಕೆ ಸೀಮಿತವಾಗಿಟ್ಟುಕೊಳ್ಳಿ, ಅದಕ್ಕೆ ನಮ್ಮ ಒಪ್ಪಿಗೆಯೂ ಇದೆ. Don't go beyond that. What type of society you are going to create? what type of facilities you are going to offer to the citizens. ಇವತ್ತು ಸಿಟಿಗಳು ಏನಾಗಿವೆ? ಇವತ್ತು ಕಂಟೋನ್‌ಮೆಂಟ್ ರಸ್ತೆಗಳು ಏನಾಗಿವೆ, ಅಲ್ಲಿರತಕ್ಕಂಥ ಕಟ್ಟಡಗಳು ಹೇಗಿವೆ, ಅಲ್ಲಿ ಎಷ್ಟು ಫ್ಲೋರ್ ಏರಿಯಾ ಇದೆ, ಇವೆಲ್ಲವನ್ನೂ ನೋಡುವುದಕ್ಕಾಗುತ್ತಿಲ್ಲವೇ? ಇವತ್ತು ಇದೆಲ್ಲವನ್ನು ತಂದು, ರಸ್ತೆಗಳು ಯಾವುದೂ ಉಳಿಯುವುದಿಲ್ಲ, ಫುಟ್‌ಪಾತ್ ಉಳಿಯುವುದಿಲ್ಲ, ಇನ್‌ಸ್ಟಲೇಷನ್ ಯಾವ ವೆಂಟಿಲೇಷನ್ ಇರುವುದಿಲ್ಲ. ಇವತ್ತು ಬೆಂಗಳೂರು ನಗರದ ಸ್ಥಿತಿಯನ್ನು ನೋಡಿದರೆ ಕಣ್ಣೀರು ಬರುತ್ತದೆ. ಆಯಿತು, ಸರ್ಕಾರದ ಜಡ್ಜ್‌ಮೆಂಟ್ ಇದೆ, ಲಾಜಿಕ್ ಇದೆ, ನೀವು ಇನ್‌ವ್ಯಾಲೀಡ್ ಆಗಿರುವುದನ್ನು ವ್ಯಾಲೀಡ್ ಮಾಡಿ ಅದನ್ನು ಅಷ್ಟಕ್ಕೆ ಸೀಮಿತ ಮಾಡಿಕೊಳ್ಳಿ, ದಯಮಾಡಿ ಈ ಫೋರ್‌ಫೀಚರ್ ಕ್ಲಾಜ್ ಇವೆಲ್ಲವನ್ನೂ ಮಾಡಬೇಡಿ. ನೀವು ಹಣ ಹಣವೆಂದು ಅದನ್ನು ಏನು ಹೆಣದ ಮೇಲೆ ಹಾಕುತ್ತೀರಾ?

SRI M.C. NANAIAH :— What is it that you want us to do now? ಫೋರ್‌ಫೀಚರ್ ಕ್ಲಾಜ್ ಬೇಡವೆಂದು ಹೇಳುತ್ತೀರಾ?

SRI KAGODU THIMAPPA :— To certain extent, you have agreed to regularise the building; it is o.k. beyond that why? do you want that clause? What logic is there? ಇವತ್ತು ಮುಂಬೈನಲ್ಲಿ ಎಷ್ಟು ಕಟ್ಟಡಗಳನ್ನು ಒಡೆದು ಹಾಕಿಲ್ಲ? What is wrong? ಇದರಲ್ಲಿ ಯಾವುದು ಲಾಜಿಕ್ ಇಲ್ಲ, ರೀಜನ್ ಇಲ್ಲ, ಆರ್ಗ್ಯುಮೆಂಟ್ ಇಲ್ಲ. it is nothing but a corrupt attitude. ಆಯಿತು, ಇದನ್ನು ಮಾಡಿ, ಏಕೆಂದರೆ ನಾವು ಸತ್ತು ಹೋಗುತ್ತೇವೆ, ನಾವೆಲ್ಲರೂ ಸತ್ತ ಮೇಲೆ

ಮುಂದಿನ ಪೀಳಿಗೆಯವರು ಬರುತ್ತಾರೆ. ಆಗ ನೋಡಿದವರು ಏನು ಹೇಳುತ್ತಾರೆ ನಾನು ಇದನ್ನು ಬೇರೆ ಯಾವ ಕಾರಣಕ್ಕೂ ಹೇಳುತ್ತಾ ಇಲ್ಲ. ಇವತ್ತು ಮಲ್ಯ ಆಸ್ಪತ್ರೆಯ ಬಳಿ ಒಂದು ರಸ್ತೆ ಇದ್ದು, ಅದು ಓಡಾಡುವುದಕ್ಕೆ ಇತ್ತು. ಅವರು ಸೆಲ್ಲರ್‌ನಲ್ಲಿ ಕಾರ್ ಪಾರ್ಕಿಂಗ್ ಮಾಡಬೇಕಾಗಿತ್ತು. ಆದರೆ ಅದನ್ನು ಅವರು ಬೇರೆ ಪರ್ಪಸ್‌ಗೆ ಉಪಯೋಗ ಮಾಡಿಕೊಂಡು, ಅಲ್ಲಿ ಕಾರು ಪಾರ್ಕಿಂಗ್ ತೆಗೆದು ಹಾಕಿದರು. ಇದರಿಂದ ಏನು ಸಾಧನೆಯಾಗಿದೆ? ಬಡವರಿಗೆ ಚಿಕಿತ್ಸೆ ಸಿಗುತ್ತದೆಯೇ? ಅಲ್ಲಿ ಕಾರು ಪಾರ್ಕಿಂಗ್ ರಸ್ತೆಯಲ್ಲಿದೆ. ಇದನ್ನು ಯಾರಾದರೂ ಬೇಕಾದರೆ ಹೋಗಿ ನೋಡಿ; ರಸ್ತೆಯಲ್ಲಿ ಓಡಾಡುವುದಕ್ಕೆ ಆಗುವುದಿಲ್ಲ. ಈ ರೀತಿ ಎಲ್ಲಾ ಕಡೆಯೂ ಆಗಿದೆ. ಆದುದರಿಂದ ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳುವುದೇನೆಂದರೆ, ನಿಮ್ಮಲ್ಲಿ ರೆಪ್ರಜೆಂಟೇಷನ್ ಆಗಿ ಹೋಗಿತ್ತು, ಅದನ್ನು ಏನೋ ಮಾಡಬೇಕೆಂದು ಮಾಡಿದ್ದೀರಿ, ಆಯಿತು; ಅದನ್ನು ಅಷ್ಟಕ್ಕೆ ಸೀಮಿತ ಮಾಡಿ. ಈಗ ಜಮೀನನ್ನು ರೆಗ್ಯುಲರೈಜ್ ಮಾಡುವುದಕ್ಕೆ ಕಾನೂನು ತಂದರು ಮಾಡಿದೆವಲ್ಲಾ ನಾವು ಮಾಡಿದ್ದನ್ನೆಲ್ಲಾ ಕೊಟ್ಟುಬಿಡುತ್ತೇವೆಯೇ? ಇವತ್ತು ನಾವು ಜಮೀನನ್ನು ಯಾವ ಕಾರಣಕ್ಕಾಗಿ ಕೊಡುತ್ತೇವೆ. ಒಂದು ಹೆಕ್ಟೇರ್‌ಗಿಂತ ಜಾಸ್ತಿ ಮಾಡಿ, 2-3 ಎಕರೆ ಮಾಡಿ, ಅದರಲ್ಲಿ ಅರ್ಧ ಎಕರೆ ಕೊಡುವುದು; ಏಕೆಂದರೆ ಇದಕ್ಕೆ ಸೀಲಿಂಗ್ ಲಿಮಿಟ್ ಇದೆ. ಇಲ್ಲಿ ಮಾತ್ರ ಸರ್ಕಾರ ತೆಗೆದುಕೊಳ್ಳಲೂ ಬಹುದು, ಮತ್ತೆ ಅದನ್ನು ಮಾರಲೂ ಬಹುದು. ನೀವು ಹಣ ಹಣವೆಂದು ಮಾರ್ಕೆಟ್‌ಗಿಂತ ಎರಡರಷ್ಟು ಹಣವನ್ನು ತೆಗೆದುಕೊಂಡು ಕಟ್ಟಿಕೊಳ್ಳುವುದಕ್ಕಾಗುವುದಿಲ್ಲ. ನಮ್ಮ ಆಲೋಚನೆ ವಿಚಾರ ಪ್ರಶ್ನೆಗಳನ್ನು ಇಟ್ಟುಕೊಂಡು ಭವಿಷ್ಯದ ದೃಷ್ಟಿಯಿಂದ ಪಟ್ಟಣ ಹೇಗಿರಬೇಕು, ಅದು ಹೇಗೆ ಬೆಳೆಯಬೇಕು ನಾಗರಿಕರಿಗೆ ಅನುಕೂಲಗಳನ್ನು ಹೇಗೆ ಒದಗಿಸಬೇಕು, ಅದಕ್ಕೆ ತಕ್ಕಂತೆ ನಮ್ಮ ರಸ್ತೆಗಳು, ಫುಟ್‌ಪಾತ್‌ಗಳು, ಬಿಲ್ಡಿಂಗ್‌ಗಳು, ಆಸ್ಪತ್ರೆಗಳು, ಶಾಲೆಗಳು ಇರಬೇಕೆಂಬ ಮುಂದಾಲೋಚನೆಯನ್ನು ಇಟ್ಟುಕೊಂಡು ಮಾಡದೇ ಹೋದರೆ ನಾವು ದೇಶವನ್ನು ಕಟ್ಟುವ ಬಗ್ಗೆ ಚಿಂತನೆ ಮಾಡಿದ ಹಾಗೆ ಆಗುತ್ತದೆಯೇ? ಆದುದರಿಂದ ಈ ಕ್ಲಾಜ್ ಅನ್ನು ತೆಗೆದುಹಾಕಿ.

ಶ್ರೀ ಎ. ರಾಮದಾಸ್ :— ಮಾನ್ಯ ಅಧ್ಯಕ್ಷರೆ, ಈಗಾಗಲೇ ಸರ್ಕಾರ ಒಂದು ಆರ್ಡಿನೆನ್ಸ್ ಹೊರಡಿಸಿ ಶೇ. 25 ರಷ್ಟು ವಯಲೇಷನ್ ಆಗಿರುವಂಥಾದ್ದು ಎಲ್ಲೇ ಇರಲಿ ಅದನ್ನು ರೆಗ್ಯುಲರೈಜ್ ಮಾಡುವಂಥಾದ್ದಕ್ಕೆ ಎಷ್ಟು ಚಾರ್ಜ್ ಅವರ ಮೇಲೆ ಹಾಕಬೇಕು, ಪೆನಾಲ್ಟಿ ಎಷ್ಟು ಹಾಕಬೇಕೆಂದು ಈಗಾಗಲೇ ಎಲ್ಲಾ ಅಥಾರಿಟಿಯನ್ನು ಕೊಟ್ಟು ಮೂರು ವರ್ಷಗಳಿಂದ ಅದರ ಅಡಿಯಲ್ಲಿ ಕೆಲಸವನ್ನು ಮಾಡುತ್ತಿದೆ. ಇದು ಬಂದರೆ ಶೇ. 25ರಷ್ಟು ವಯಲೇಷನ್ ಇದ್ದದ್ದನ್ನು ಶೇ.100ರಷ್ಟು ಪ್ರಾವಿಜನ್ ಮಾಡಿದ ಹಾಗೆ ಆಗುತ್ತದೆಂದು ಹೇಳುತ್ತೇನೆ. ಈಗ ಮಾನ್ಯ ಸಚಿವರು ಏನು ಹೇಳಿದ್ದಾರೋ ಅದು ಈಗಾಗಲೇ ಇದೆ. ಈಗ ಅದನ್ನೇ ಮುಂದುವರೆಸಿಕೊಂಡು ಹೋದರೆ ಸಾಕಾಗುತ್ತದೆಂದು ಹೇಳಬಯಸುತ್ತೇನೆ.

+ ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್ (ಧಾರವಾಡ) :— ಮಾನ್ಯ ಅಧ್ಯಕ್ಷರೆ, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆಗೆ ತಿದ್ದುಪಡಿ ಮಾಡುವ ಬಗ್ಗೆ ಏನು

ತಿಳಿಸಿದ್ದಾರೆ. ಇದರ ಬಗ್ಗೆ ಮಾನ್ಯ ಸುರೇಶ್ ಕುಮಾರ್‌ರವರು ಸರಿಯಾದಂತಹ ಉದ್ದೇಶ, ಮತ್ತು ಸ್ಪಷ್ಟವಾದಂತಹ ದಾರಿಯಲ್ಲಿ ಹೋಗುತ್ತಿಲ್ಲವೆನ್ನುವಂಥ ವಿಚಾರವನ್ನು ಹೇಳಿದ್ದಾರೆ. ನಾವು ಎಲ್ಲರೂ ಇದರ ಬಗ್ಗೆ ವಿಚಾರ ಮಾಡಬೇಕಾಗುತ್ತದೆ. ಇವತ್ತು ನಗರಗಳು ಯಾವ ದೃಷ್ಟಿಯಲ್ಲಿ ಬೆಳೆಯುತ್ತವೆ, ಬೆಂಗಳೂರು ಎಷ್ಟು ಸುಂದರವಾದಂತಹ ನಗರ, ಅದು ಇವತ್ತು ಎಂತಹ ದುಃಸ್ಥಿತಿಗೆ ಬಂದಿದೆ ಎನ್ನುವುದು ನಮಗೆಲ್ಲರಿಗೂ ಗೊತ್ತಿರುವಂತಹ ಸಂಗತಿಯಾಗಿದೆ. ಇವತ್ತು ಕಟ್ಟಡಗಳ ಬೆಳವಣಿಗೆಯಿಂದ ಅಥವಾ ಇರುವಂತಹ ಸೆಲ್ಲರ್‌ಗಳು ಯಾವ ಕಾನೂನಿನಡಿಯಲ್ಲಿ ವಾಹನಗಳ ಸಲುವಾಗಿ ಇಡಬೇಕೋ, ಅವೆಲ್ಲವನ್ನೂ ಇವತ್ತು ಮುರಿದು ಹಾಕಿ ಅವೆಲ್ಲವನ್ನೂ ಇವತ್ತು ಮುರಿದುಹಾಕಿ ಅವೆಲ್ಲವನ್ನೂ ಕಟ್ಟಡಗಳಿಗೆ ಉಪಯೋಗ ಮಾಡಿಕೊಳ್ಳುವಂತಹ ಸ್ಥಿತಿಗೆ ಬಂದಿದೆ. ಇವತ್ತು ಬೆಂಗಳೂರು ನಗರದಲ್ಲಿ ವಾಹನಗಳನ್ನು ನಿಲ್ಲಿಸುವುದಕ್ಕೆ ಜಾಗವಿಲ್ಲವೆನ್ನುವಂತಹ ಸ್ಥಿತಿಗೆ ಬಂದಿದೆ. ರಸ್ತೆಗಳಲ್ಲಿ ಓಡಾಡುವುದಕ್ಕೆ ಸಾಧ್ಯವಿಲ್ಲ. ಅಂತಹ ಸ್ಥಿತಿಯಲ್ಲಿ ಇವತ್ತು ಈ ಬೆಂಗಳೂರು ನಗರವನ್ನು ಕಾಣುತ್ತಿದ್ದೇವೆ. ಇವತ್ತು ಈ ಕಾನೂನನ್ನು ವೈಲೇಟ್ ಮಾಡಿ ಕಟ್ಟಡಗಳು ಬರುತ್ತಿವೆ. ಇದಕ್ಕಾಗಿ ನಗರಾಭಿವೃದ್ಧಿ ಪ್ರಾಧಿಕಾರ, ಟೌನ್ ಪ್ಲಾನಿಂಗ್ ಮಾಡಿ ಇಷ್ಟೊಂದು ಸಿಬ್ಬಂದಿಗಳನ್ನು ನೇಮಕ ಮಾಡಿದೆ. ಈ ಬೆಂಗಳೂರು ನಗರ ಮೊದಲು ಸುಂದರವಾದ ನಗರವಾಗಿತ್ತು. ಅಂತಹ ಪ್ಲಾನ್ ನಲ್ಲಿ ಮಾಡಿದಂತಹ ನಗರ ಇವತ್ತು ಎಂತಹ ದುಃಸ್ಥಿತಿಗೆ ತಂದಿದ್ದೇವೆ. ಈ ಎಲ್ಲಾ ಇಲಾಖೆಗಳ ಅಗತ್ಯವೂ ಇದೆಯೇ? ಇದ್ದರೆ ಅವು ಸರಿಯಾದಂತಹ ರೀತಿಯಲ್ಲಿ ಕೆಲಸ ಮಾಡುತ್ತಿವೆಯೇ? ಹೇಗೆ? ಈ ರೀತಿಯಲ್ಲಿ ವಯಲೇಟ್ ಮಾಡಿ ಕಟ್ಟಡವನ್ನು ಕಟ್ಟುವಂಥಾದ್ದಕ್ಕೆ ಇದನ್ನು ಮಾಡುತ್ತಿರುವುದರಿಂದ ನಾವು ಇವತ್ತು ಎಂತಹ ದುಃಸ್ಥಿತಿಗೆ ಬಂದಿದ್ದೇವೆಂದರೆ, ಇವತ್ತು ನಾವು ಕಟ್ಟಡಗಳ ಬಳಿ ಓಡಾಡುವಂತಹ ಸ್ಥಿತಿಯಲ್ಲಿ ಇಲ್ಲ. ಇದರ ಬಗ್ಗೆ ನಾನು ಒಂದು ಉದಾಹರಣೆಯಾಗಿ ಹೇಳುವುದಾದರೆ, ಧಾರವಾಡ ಇದು ಒಂದು ಉತ್ತಮವಾದಂತಹ ನಗರವಾಗಿದೆ. ಇಲ್ಲಿ ಹಿರಿಯರು ವಿಸ್ತಾರವಾದಂತಹ ದೊಡ್ಡ ದೊಡ್ಡ ರಸ್ತೆಗಳನ್ನು ಮಾಡಿಸಿದ್ದರು. ಆದರೆ ಇವತ್ತು ಅದು ಇರುವ ಸ್ಥಿತಿಯ ಬಗ್ಗೆ ನಗರಸಭೆಯಾಗಲೀ, ಪ್ರಾಧಿಕಾರವಾಗಲೀ, ಯಾರು ಕೂಡ ಅದರ ಬಗ್ಗೆ ವಿಚಾರ ಮಾಡುವ ಹಾಗೆ ಇಲ್ಲ. ಈಗ ಆ ದೊಡ್ಡ ದೊಡ್ಡ ರಸ್ತೆಗಳನ್ನು ಸಂಕುಚಿತ ಮಾಡಿ ಅಲ್ಲಿ ವಾಹನಗಳು ಓಡಾಡುವುದಕ್ಕೆ ಆಗುವುದಿಲ್ಲವೆನ್ನುವಂತಹ ಸ್ಥಿತಿಯಲ್ಲಿ ಮಾಡುತ್ತಿದ್ದಾರೆ. ನಾನು ಆ ನಗರದ ಶಾಸಕನಾಗಿ ಪ್ರಾಧಿಕಾರದ ಮೂಲಕ ಕಾರ್ಪೋರೇಷನ್‌ರವರಿಗೆ ಹೇಳಿದೆ. ಅಲ್ಲಿ ದುಡ್ಡು ಇರುವಂಥವರ ಕಟ್ಟಡವಿದ್ದರೂ ಒಡೆದುಹಾಕಿ ಎಂದು ಹೇಳಿದೆ.ಇವತ್ತಿನವರೆಗೂ ಅಲ್ಲಿ ಜಿಲ್ಲಾಧಿಕಾರಿಗಳು, ಪ್ರಾಧಿಕಾರದವರು, ಕಾರ್ಪೋರೇಷನ್‌ನವರು ಯಾರೂ ಕೂಡ ಆ ಕಟ್ಟಡವನ್ನು ಒಡೆಯುವಂತಹ ಕೆಲಸವನ್ನು ಮಾಡಿಲ್ಲ. ಏಕೆಂದರೆ ಇವರು ದುಡ್ಡು ಇರುವಂಥವರಿಗೆ ಕೆಲಸ ಮಾಡುವಂಥಾದ್ದು. ನಾವು ಇಂತಹ ಕೋಟ್ಯಾಧೀಶರಿಗೆ ರಸ್ತೆಗಳ ಮೇಲೆ ಬಿಲ್ಡಿಂಗ್‌ಗಳನ್ನು ತರುವಂಥಾದ್ದಕ್ಕೆ ಅವಕಾಶವನ್ನು ಕೊಡುವಂಥಾದ್ದು ಅಥವಾ ವಾಹನಗಳಿಗೆ ಪಾರ್ಕಿಂಗ್ ಇರುವಂಥಾದ್ದನ್ನು ಒಡೆದು ಹಾಕಿ ಅವರಿಗೆ ಪೆನಾಲ್ಟಿ ಹಾಕಿ

ರೆಗ್ಯುಲರೈಜ್ ಮಾಡಿಕೊಡುವುದು ಇದು ಸೂಕ್ತವಲ್ಲ. ಆದುದರಿಂದ ಸರ್ಕಾರ ದೂರದೃಷ್ಟಿಯಿಂದ ಇದರ ಬಗ್ಗೆ ವಿಚಾರ ಮಾಡಬೇಕಾಗಿದೆ. ಇವತ್ತು ಈ ಪ್ರಾಧಿಕಾರ, ಟೌನ್ ಪ್ಲಾನಿಂಗ್ ಆಫೀಸ್ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ. ಅಲ್ಲಿ ಭ್ರಷ್ಟಾಚಾರಕ್ಕೆ ಅವಕಾಶ ಮಾಡಿಕೊಡುತ್ತಿದ್ದಾರೆ. ಇದರಿಂದ ನಗರಗಳು ಹಾಳಾಗುತ್ತಿವೆ. ಇವತ್ತು ಯಾವುದೇ ನಗರಗಳನ್ನು ನೋಡಿ, ಯಾವುದು ಸರಿಯಾದಂತಹ ಸ್ಥಿತಿಯಲ್ಲಿ ಇಲ್ಲ. ನಮಗೆ ಜನರು ಛೀಮಾರಿ ಹಾಕುವಂತಹ ಸ್ಥಿತಿಯಲ್ಲಿದೆ. ಆದುದರಿಂದ ನಾವು ಈ ತಿದ್ದುಪಡಿಯನ್ನು ದೂರದೃಷ್ಟಿಯನ್ನು

12.20 ಪಿ.ಎಂ.

ಇಟ್ಟುಕೊಂಡು ತರಬೇಕಾಗುತ್ತದೆ. ಯಾವುದೇ ದೃಷ್ಟಿಯಿಂದ ಈ ತಿದ್ದುಪಡಿಗಳನ್ನು ತರುವುದಕ್ಕೆ ಅವಕಾಶವಿಲ್ಲ, ಇದನ್ನು ನಾವು ವಿರೋಧ ಮಾಡಬೇಕಾಗುತ್ತದೆನ್ನುವುದನ್ನು ಹೇಳುತ್ತಿದ್ದೇನೆ. ಧಾರವಾಡ ನಗರದಲ್ಲಿ ಅನೇಕ ಸಾರಿ ಪ್ರಾಧಿಕಾರ ಮೂಲಕ ಹೇಳಿದ್ದೇನೆ, ಇವತ್ತು ನಗರಗಳು ಹಾಳಾಗುತ್ತಿವೆ. ಸಿಡಿಪಿ ಬಿಟ್ಟು ಪ್ರಾಧಿಕಾರಿಗಳೇ ಹಣವನ್ನು ಹೊಡೆದು ಸ್ಥಳಗಳನ್ನು ತೆಗೆದುಕೊಳ್ಳುವಂತಹ ವ್ಯವಸ್ಥೆ ಇವತ್ತು ನಡೆಯುತ್ತಿದೆ, ಅದಕ್ಕೆ ನಾವು ವಿರೋಧ ಮಾಡಬೇಕಾಗುತ್ತದೆ.

+ ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) :— ಮಾನ್ಯ ಸಭಾಧ್ಯಕ್ಷರೆ, ಸೆಕ್ಷನ್ 14(ಬಿ) ಒಂದು ಮತ್ತು ಎರಡನ್ನು ನಾನು ಸ್ವಾಗತ ಮಾಡುತ್ತಿದ್ದೇನೆ. ಬಹುಶಃ ಕಳೆದ ಬೇಡಿಕೆಯ ಮೇಲಿನ ಚರ್ಚೆಯ ಸಂದರ್ಭದಲ್ಲಿ ನಾನು ಇದೇ ಪ್ರಸ್ತಾವವನ್ನು ಮಂಡಿಸಿದ್ದೆ. ಮಹಾರಾಷ್ಟ್ರ ರಾಜ್ಯದ ಮುಂಬೈ ಕಾರ್ಪೋರೇಷನ್‌ನಲ್ಲಿ ಇದು ಯಾವ ರೀತಿ ನಡೆಯುತ್ತಿದೆ ಎನ್ನುವ ಉಲ್ಲೇಖವನ್ನೂ ಕೂಡ ನಾನು ಮಾಡಿದ್ದೇನೆ. ನಗರದಲ್ಲಿರುವ ಅನೇಕ ರಸ್ತೆಗಳನ್ನು ಅಭಿವೃದ್ಧಿಗೊಳಿಸುವುದಕ್ಕೆ ಭೂಸ್ವಾಧೀನ ಆಗುತ್ತದೆ, ಆದರೆ ಪರಿಹಾರ ಕೊಡುವ ನಿಟ್ಟಿನಲ್ಲಿ ಸ್ಥಳೀಯ ಮಹಾನಗರಪಾಲಿಕೆ ಅಥವಾ ಸ್ಥಳೀಯ ಆಡಳಿತ ಸಂಸ್ಥೆಗೆ ಸಾಧ್ಯವಾಗುತ್ತಿಲ್ಲ; ಸರ್ಕಾರದ ಕಡೆಯಿಂದಲೂ ಕೂಡ ಪರಿಹಾರ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಅಂತಹ ಸಂದರ್ಭದಲ್ಲಿ ಇರುವ ಒಂದೇ ಒಂದು ಉಪಾಯವೆಂದರೆ, ಒಂದೇ ಒಂದು ನಯಾಪೈಸೆಯನ್ನು ವೆಚ್ಚ ಮಾಡದೆ ಶೇಕಡ 100 ರಷ್ಟು ಫ್ಲೋರ್ ಏರಿಯಾವನ್ನು ಕೊಡುವ ನಿರ್ಣಯ ಇದರಲ್ಲಿ ಏನು ಆಗಿದೆ, ಇದರಿಂದ ನಿಜವಾಗಿಯೂ ಅಭಿವೃದ್ಧಿ ಚಟುವಟಿಕೆಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತಿದೆ. ಇದನ್ನು ಆರು ತಿಂಗಳ ಹಿಂದೆಯೇ ಮಾಡಿದ್ದರೆ ಹಲವಾರು ಕೋಟಿ ರೂಪಾಯಿಗಳಷ್ಟು ಸರ್ಕಾರಕ್ಕೆ ಲಾಭವಾಗುತ್ತಿತ್ತು ಎನ್ನುವ ಅಂಶವನ್ನು ಉಲ್ಲೇಖ ಮಾಡುತ್ತಿದ್ದೇನೆ. ಅದಕ್ಕೆ ಇವತ್ತು ವಿಶೇಷವಾಗಿ ಸೆಕ್ಷನ್ 14(ಬಿ) ಒಂದು ಮತ್ತು ಎರಡನ್ನು ಸ್ವಾಗತಪೂರ್ವಕವಾಗಿ ನಾನು ಉಲ್ಲೇಖ ಮಾಡುತ್ತಿದ್ದೇನೆ. ಹಾಗೆ 5; 18ನೇ ಪ್ರಕರಣದ ತಿದ್ದುಪಡಿಗೆ ಸಂಬಂಧಿಸಿದಂತೆ ಬಹುಶಃಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಹತ್ತು ಸೆಂಟ್ ಜಾಗಕ್ಕೆ ಒಂದು ಕನ್ವರ್ಷನ್ ಚೇಂಜ್ ಆಫ್ ಲ್ಯಾಂಡ್‌ಗೆ ಅಲ್ಲಿ ಪ್ರಾವಿಷನ್

ಇಲ್ಲ. ಅಲ್ಲಿ ಸ್ಥಳೀಯ ಆಡಳಿತ ಅದನ್ನು ಶಿಫಾರಸ್ಸು ಮಾಡಿದರೂ ಕೂಡ ಬೆಂಗಳೂರಿಗೆ ಬರಬೇಕು. ಇಲ್ಲಿ ಹಲವಾರು ತಿಂಗಳಾದ ನಂತರ ಅದನ್ನು ತಿರಸ್ಕರಿಸುತ್ತಾರೆ, ನಂತರ ಸಂಬಂಧಿಕರು ಮಂತ್ರಿಗಳಿಗೆ ಅಪೀಲ್ ಮಾಡುತ್ತಾರೆ, ಅಪೀಲ್ ಮಾಡಿದ್ದನ್ನು ಕೊನೆಗೆ ಊರ್ಜಿತಗೊಳಿಸುತ್ತಾರೆ. ಇದರ ಹಿನ್ನೆಲೆ ಏನು ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಷಯ. ಇಲ್ಲಿ ಅನೇಕ ಸೆಸ್‌ಗಳ ಬಗ್ಗೆ ಉಲ್ಲೇಖ ಮಾಡಿದ್ದಾರೆ. ಈಗಾಗಲೇ ಹಾಕಿರುವ ಸೆಸ್ ನಿಶ್ಚಿತವಾದ ಉದ್ದೇಶಕ್ಕೆ ಅದು ಉಪಯೋಗವಾಗತ್ತಿದೆಯೇ ಇಲ್ಲವೇ ಎಂದು ಹೇಳುವುದು ಇವತ್ತು ಡಿಬೇಟೇಬಲ್ ಆಗಿರುವ ಒಂದು ಪ್ರಶ್ನೆ. ಇನ್ನು ಸೆಸ್‌ಗೆ ಸಂಬಂಧಿಸಿದ ಹಲವು ಕೋಟಿ ರೂಪಾಯಿಗಳು ನಮ್ಮಲ್ಲಿ ಸಂಗ್ರಹವಾಗಿದೆ, ಅದು ಬೇರೆ ಬೇರೆ ಕಾಮಗಾರಿಗಳಿಗೆ ಉಪಯೋಗವಾಗುತ್ತಿದೆ. ಅದನ್ನು ನಿಶ್ಚಿತವಾಗಿ ಇಂತಹದ್ದೇ ಕಾರ್ಯಕ್ಕೆ ಉಪಯೋಗ ಮಾಡಬೇಕೆನ್ನುವುದನ್ನು ಉಲ್ಲೇಖ ಮಾಡಿದರೆ ಮಾತ್ರ ಅದು ಉಪಯುಕ್ತವಾಗುತ್ತದೆಯೇ ವಿನಹ ಇಲ್ಲದಿದ್ದರೆ ಖಂಡಿತವಾಗಿ ಉಪಯೋಗವಾಗುವುದಿಲ್ಲ. ಮತ್ತೆ ಕೆಲವು ಕಟ್ಟಡಗಳನ್ನು ಸಕ್ರಮಗೊಳಿಸುವುದರ ಬಗ್ಗೆ ಉಲ್ಲೇಖ ಮಾಡಲಾಗಿದೆ. ಶೇಕಡ 25ಕ್ಕಿಂತ ಹೆಚ್ಚು ಉಲ್ಲಂಘನೆಯಾದಲ್ಲಿ ಅದನ್ನು ಸಕ್ರಮಗೊಳಿಸುವಂಥ ಅಧಿಕಾರ ಅಲ್ಲಿಯ ಸ್ಥಳೀಯ ಆಡಳಿತಕ್ಕೆ ಇಲ್ಲ, ಅದನ್ನು ಬೆಂಗಳೂರಿಗೆ ಕಳುಹಿಸಬೇಕು. ಇಲ್ಲಿ ಬೆಂಗಳೂರಿನಲ್ಲಿ ಸಕ್ರಮಗೊಳಿಸುವಂತಹ ಏನೊಂದು ವ್ಯವಸ್ಥೆಯನ್ನು ಹಾಕಿಕೊಂಡಿದ್ದಾರೆ ಅದಕ್ಕೆ ಹೆಚ್ಚು ಶಕ್ತಿ ಕೊಡುವ ನಿಟ್ಟಿನಲ್ಲಿ ಈ ಒಂದು ಮಸೂದೆಯನ್ನು ತಂದಿದ್ದಾರೆ; ಖಂಡಿತವಾಗಿಯೂ ಇದು ಸ್ವಾಗತಾರ್ಹವಲ್ಲ. ಈ ರೀತಿ ತಂದಿರುವ ತಿದ್ದುಪಡಿಯ ಹಿಂದೆ ಏನೋ ಒಂದು ರಹಸ್ಯ ಅಡಗಿದೆ ಎಂದು ಕಾಣುತ್ತಿದೆ. ಸ್ಥಳೀಯ ಮಟ್ಟದಲ್ಲಿರುವ ಅಧಿಕಾರಿಗಳು, ಶಾಸಕರು ಎಷ್ಟು ಉಲ್ಲಂಘನೆಯಾಗಿದೆ ಎಂದು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆಯೇ ವಿನಹ ಬೆಂಗಳೂರಿನಲ್ಲಿ ಅದನ್ನು ಸಕ್ರಮಗೊಳಿಸುವಂಥ ವ್ಯವಸ್ಥೆ ಏನಿದೆ ಅದು ಖಂಡಿತ ಸರಿಯಲ್ಲ. ನಾನು ಒಂದು ಉಲ್ಲೇಖ ಮಾಡುತ್ತೇನೆ, ಪಬ್ಲಿಕ್ ಇಂಟ್ರೆಸ್ಟ್ ಲಿಟೀಗೇಷನ್ ಮೂವ್ ಮಾಡಿಕೊಂಡು ಒಂದು ದೊಡ್ಡ ಕಟ್ಟಡದ ರಚನೆಯನ್ನು ಕೂಡ ನಿಲ್ಲಿಸುವಂತಹ ಮಟ್ಟಕ್ಕೆ ನಾನು ರಿಟ್ ಅನ್ನು ಮೂವ್ ಮಾಡಿದ್ದೆ. ಆದರೆ ನನಗೆ ಆಶ್ಚರ್ಯವಾಗುತ್ತದೆ, ಸ್ಥಳೀಯ ಮಟ್ಟದಲ್ಲಿ ಸಕ್ರಮಗೊಳಿಸುವ ಅಧಿಕಾರವನ್ನು ಕೊಡದೆ ಬೆಂಗಳೂರಿನ ಹಂತದಲ್ಲಿ ಸಕ್ರಮಗೊಳಿಸುವುದು ನಡೆದಿತ್ತು. ಮುಂದಿನ ದಿವಸಗಳಲ್ಲಿ ಹೆಚ್ಚು ಸಕ್ರಮಗೊಳಿಸುವುದನ್ನು ಕಾನೂನುಬದ್ಧ ಮಾಡುವ ಈ ಕಾನೂನು ಖಂಡಿತ ಸ್ವಾಗತಾರ್ಹವಲ್ಲ, ನಾನು ಇದನ್ನು ವಿರೋಧ ಮಾಡುತ್ತಿದ್ದೇನೆ. ನಂತರ, ಕೆಇಬಿಗೆ ಸಂಬಂಧಪಟ್ಟಂತೆ ಇಲ್ಲಿಯವರೆಗೆ ನಮ್ಮ ಪ್ಲಾನಿಂಗ್ ಅಥಾರಿಟಿ ಕಂಟ್ರೋಲ್ ಮಾಡುತ್ತಿರಲಿಲ್ಲ. ಕೆಇಬಿಯವರು ನಿಜವಾಗಿ ಕಂಟ್ರೋಲ್ ಮಾಡುತ್ತಿದ್ದರು. ಅನಧಿಕೃತ ಕಟ್ಟಡಕ್ಕೆ ಕೆಇಬಿ ಕನೆಕ್ಷನ್ ಕೊಡುವ ವ್ಯವಸ್ಥೆ ಇರಲಿಲ್ಲ. ಇತ್ತೀಚೆಗೆ ಏನು ಮಾಡಿದ್ದಾರೆ, ಅದಕ್ಕೂ ಸಹ ತಿದ್ದುಪಡಿಯನ್ನು ತಂದು ಅನಧಿಕೃತ ಕಟ್ಟಡವಿದ್ದರೆ ಕೆಇಬಿ ಕನೆಕ್ಷನ್ ಕೊಡಬಹುದು ಎನ್ನುವ ನಿಟ್ಟಿನಲ್ಲಿರುವುದರಿಂದ ಇವತ್ತು ಯಾವುದೇ ನಿಯಂತ್ರಣವಿಲ್ಲದಿರುವ ಪರಿಸ್ಥಿತಿ ಬಂದಿದೆ. ಆದುದರಿಂದ ಕನಿಷ್ಠ ಕೆಇಬಿ

ಮಟ್ಟದಲ್ಲಾದರೂ ಯಾವುದೇ ರೀತಿ ಎಲೆಕ್ಟ್ರಿಫಿಕೇಷನ್ ಆಗದೆ ಆ ಕಟ್ಟಡ ಉಪಯೋಗವಾಗದಿರುವ ಸ್ಥಿತಿ ಇತ್ತು, ಅದಕ್ಕೂ ಕೂಡ ಇವತ್ತು ತಡೆ ಬಂದಿದೆ. ಆದುದರಿಂದ 76 ಎಫ್.ಎಫ್.ಎಫ್. ಅದರ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕು ಎಂದು ಹೇಳಿ, 14 ಬಿ ಒಂದು ಮತ್ತು ಎರಡನ್ನು ಇವತ್ತು ಸ್ವಾಗತ ಮಾಡಿದಲ್ಲಿ, ಅದನ್ನು ಜಾರಿಗೆ ತಂದಲ್ಲಿ ರಾಜ್ಯಕ್ಕೆ ಹೆಚ್ಚಿನ ಲಾಭ ಬರಬಹುದೆಂಬ ಅಂಶವನ್ನು ಒತ್ತಿ ಹೇಳುತ್ತಿದ್ದೇನೆ.

+ ಶ್ರೀ ಎಂ.ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) :— ಸನ್ಮಾನ್ಯ ಅಧ್ಯಕ್ಷರೆ, ಈ ಒಂದು ತಿದ್ದುಪಡಿ ವಿಧೇಯಕದ ಮೇಲೆ ಸಾಕಷ್ಟು ಚರ್ಚೆಯಾಗಿದೆ. ಬಹಳ ಸಂತೋಷಪಡುವ ಒಂದು ವಿಷಯವೇನೆಂದರೆ, ಒಂದು ವಿಧೇಯಕದ ಮೇಲೆ ಇಷ್ಟೊಂದು ಮಹತ್ವಕೊಟ್ಟು ಚರ್ಚೆ ಮಾಡುವುದು ಬಹಳ ಸಂತೋಷಪಡುವಂತಹದ್ದು, ಸಮಾಜ ಒಪ್ಪಿಕೊಳ್ಳತಕ್ಕಂಥದ್ದು ಇದೆ. ವಿಶೇಷವಾಗಿ ಮಾನ್ಯ ಕಾಗೋಡು ತಿಮ್ಮಪ್ಪನವರು ಮಾತನಾಡುವಾಗ, ನಾವು ಎಂತಹ ಸಮಾಜವನ್ನು ಕಟ್ಟುತ್ತಿದ್ದೇವೆ, ಎಂತಹ ದಿಕ್ಕಿಗೆ ಹೋಗುತ್ತಿದ್ದೇವೆ, ಈ ಮಸೂದೆಯನ್ನು ಮಾಡುವುದರಿಂದ ಮುಂದೆ ಯಾವುದಕ್ಕೆ ಅವಕಾಶ ಮಾಡುಕೊಡುತ್ತಿದ್ದೇವೆ ಎಂಬ ಚಿಂತನೆ ಮಾಡಿರತಕ್ಕಂತಹದ್ದನ್ನು ಬಹಳ ಸ್ವಾಗತ ಮಾಡುತ್ತೇನೆ. ನಿಜವಾಗಿ ಇವತ್ತು ಕಾನೂನಿನಿಂದ ಯಾವುದನ್ನೂ ನಿಯಂತ್ರಿಸುವುದಕ್ಕಾಗುವುದಿಲ್ಲ. ಸಮಾಜದ ಸ್ಥಿತಿ ಹಾಗಿದ್ದಾಗ ಸಮಾಜವನ್ನು ಆ ನಿಟ್ಟಿನಲ್ಲಿ ಕಟ್ಟುವುದು ಬಹಳ ಮಹತ್ವವಾದುದು. ಈ ಅಂತಹ ಸಮಾಜವನ್ನು ನಾವು ಕಟ್ಟುವುದಕ್ಕೆ ಹೋಗಲಿಲ್ಲ, ಕಾನೂನನ್ನು ಮಾಡಿಕೊಳ್ಳುತ್ತಾ ಬಂದಿದ್ದೇವೆ, ಇವತ್ತು ಹಲವಾರು ಕಾರಣಗಳಿಂದ ಇವನ್ನು ಮಾಡಬೇಕಾದ ಪರಿಸ್ಥಿತಿ ಏತಕ್ಕೆ ಬಂತು ಎಂಬುದನ್ನು ಚಿಂತನೆ ಮಾಡಬೇಕಾಗುತ್ತದೆ. ಮಾನ್ಯ ಸದಸ್ಯರಾದ ಸುರೇಶ್ ಕುಮಾರ್‌ರವರು ಮಾತನಾಡುವಾಗ ಅಕ್ರಮವಾಗಿ ನಿರ್ಮಿಸಲಾದ ಕಟ್ಟಡಗಳನ್ನು ಸಕ್ರಮಗೊಳಿಸುವ ವಿಚಾರ ನಾವು ಯಾರನ್ನೋ ರಕ್ಷಣೆ ಮಾಡುವುದಕ್ಕೆ ತಂದಿದ್ದೇವೆ ಎಂದು ಹೇಳಿರುವುದನ್ನು ನಾವು ಬಹಳ ಚಿಂತನೆ ಮಾಡಬೇಕಾದ್ದು. ಅವಶ್ಯಕ. ಇವು ಏತಕ್ಕೆ ಆದವು, ಇದಾಗುವುದಕ್ಕೆ ಯಾರು ಕಾರಣರು? ಈ ಕಟ್ಟಡಗಳನ್ನು ಅಕ್ರಮವಾಗಿ ಕಟ್ಟುವುದಕ್ಕೆ, ಡಿವಿಯೇಷನ್ ಮಾಡುವುದಕ್ಕೆ ಯಾರು ಹೊಣೆಗಾರರು? ಇಡೀ ಸಮಾಜವೇ ಇದಕ್ಕೆ ಹೊಣೆಗಾರರು, ಇದಕ್ಕೆ ಒಬ್ಬರು ಇಬ್ಬರು ಎಂದು ಹೇಳುವುದಲ್ಲ. ಇವತ್ತು ಈ ವ್ಯವಸ್ಥೆಯಲ್ಲಿ ಡಿವಿಯೇಷನ್ ಆದ ಸಂದರ್ಭದಲ್ಲಿ ಹೈಕೋರ್ಟಿನಲ್ಲಿ ಕೆಲವೊಂದು ತೀರ್ಮಾನಗಳಾಗಿದ್ದಾವೆ. ಆ ತೀರ್ಮಾನಕ್ಕೆ ಅನುಗುಣವಾಗಿ ಈಗ ನಾಲ್ಕನೇ ಅಂತಸ್ತಿನಲ್ಲಿ ಅಕ್ರಮ ಕಟ್ಟಡ ನಿರ್ಮಾಣವಾಗಿತ್ತೆಂದರೆ ಅದನ್ನು ಒಡೆಯಬೇಕಾದರೆ ಮೂರನೆ ಅಂತಸ್ತಿನ ಕಟ್ಟಡಕ್ಕೆ ತೊಂದರೆಯಾಗದಂತೆ ಒಡೆಯಬೇಕೆನ್ನುವ ಆದೇಶವಿದೆ; ಇದನ್ನು ಕಾರ್ಯಗತ ಮಾಡುವುದು ಹೇಗೆ? ಆಮೇಲೆ ಕಟ್ಟಿದಂಥ ಕಟ್ಟಡಗಳಲ್ಲಿ ಡಿವಿಯೇಷನ್ ಆಗಿ ಒಂದು ಕೊಠಡಿ ಅಥವಾ ಒಂದು ಗೆರೇಜ್ ಏನಾದರೂ ಒಂದನ್ನು ಕಟ್ಟಿರುತ್ತಾನೆ, ಇದನ್ನು ಮುಖ್ಯ ಕಟ್ಟಡಕ್ಕೆ ತೊಂದರೆಯಾಗದಂತೆ ಕೆಡವಿ ಎಂದು ಹೇಳಲಾಗುತ್ತದೆ, ಇದನ್ನು ಹೇಗೆ ಕಾರ್ಯಗತಗೊಳಿಸುವುದು? ನಮಗೆ ಇಲ್ಲಿ ಸಮಸ್ಯೆ ಬರುತ್ತದೆ. ನಾವು ಏನಾದರೂ ಒಂದು ಕಾನೂನನ್ನು ತಂದು

ಕಾರ್ಯಗತಗೊಳಿಸಬೇಕೆಂದಾಗ ಕೆಲವೊಂದು ಅನಿವಾರ್ಯತೆಗಳಿದ್ದಾವೆ. ಮೊದಲನೆಯದಾಗಿ ಅಕ್ರಮವಾಗಿ ಕಟ್ಟಡ ನಿರ್ಮಾಣ ಮಾಡುವುದಕ್ಕೆ ಅವಕಾಶ ಕೊಟ್ಟದ್ದು ತಪ್ಪು. ಕಾನೂನನ್ನು ಕಾರ್ಯಗತಗೊಳಿಸುವ ಹಂತದಲ್ಲಿ, ನಮ್ಮ ಸಮಾಜ ವ್ಯವಸ್ಥೆಯಲ್ಲಿ ಹೇಗಾಗಿದೆ ಎಂದರೆ, ಯಾರೇ ಒಬ್ಬ ಅಧಿಕಾರಿ ತಪ್ಪು ಮಾಡಿದನೆಂದು ಗೊತ್ತಾದರೂ ಕೂಡ, ಯಾವುದೇ ಸರ್ಕಾರ ಆವನನ್ನು ತೆಗೆಯಬೇಕೆಂದು ಕ್ರಮ ತೆಗೆದುಕೊಂಡಾಗ ಅವನನ್ನು ತೆಗೆಯಬೇಡಿ, ನಮ್ಮವನು ಎಂದು ನಾವೇ ಅವನಿಗೆ ರಕ್ಷಣೆಯನ್ನು ಕೊಡುತ್ತೇವೆ. ಶ್ರೀ ಚಂದ್ರಕಾಂತ್ ಬೆಲ್ಲದ್‌ರವರು ಎಲ್ಲವು ಇಲ್‌ಲೀಗಲ್, ಎಲ್ಲಿ ಬೇಕಾದರೂ ಗ್ರ್ಯಾಬ್ ಮಾಡುತ್ತಾರೆಂದು ಹೇಳಿದರು; ಹೌದು ನಾವು ಈ ವ್ಯವಸ್ಥೆಯಲ್ಲಿ ಬಂದಿದ್ದೇವೆ. ಆದುದರಿಂದ ಹಲವಾರು ಸಂದರ್ಭದಲ್ಲಿ ಕೋರ್ಟ್ ಮಧ್ಯಪ್ರವೇಶ ಮಾಡಿರುವುದರಿಂದ ಇವನ್ನು ಮಾಡಬೇಕಾದಾಗ ಕೆಲವೊಂದು ಮಾಡುವ ಅವಶ್ಯಕತೆ ಇದೆ. ಮಾನ್ಯ ಉಪನಾಯಕರಾದ ಜಯಚಂದ್ರರವರು ಸೆಸ್‌ನಲ್ಲಿ ದ್ವಂದ್ವ ನೀತಿಯಿದೆ ಎಂದು ಹೇಳಿದರು. 1992 ಕ್ಕಿಂತ ಮೊದಲು ಸರ್ಕಾರದ ಆದೇಶದ ಮೇಲೆ ಕೆಲವೊಂದು ಸೆಸ್‌ಗಳನ್ನು ವಸೂಲ್ಮಾಡುತ್ತಿದ್ದರು. ವಾಟರ್ ಸೆಸ್ ಆಗಲೀ, ರಿಂಗ್ ರೋಡ್ ಸೆಸ್ ಆಗಲೀ, ಸ್ಲಂ ಡೆವಲಪ್‌ಮೆಂಟ್ ಮಾಡುವ ಸೆಸ್ ಆಗಲಿ ಅವುಗಳಿಗೆ ಯಾವುದೇ ಕಾನೂನಿನ ಬೆಂಬಲವಿರಲಿಲ್ಲ, ಆದರೂ ವಸೂಲ್ಮಾಡಲಾಗುತ್ತಿತ್ತು, ಅದನ್ನು ಹೈಕೋರ್ಟಿನಲ್ಲಿ ಚಾಲೆಂಜ್ ಮಾಡಲಾಯಿತು, ಅದಕ್ಕೆ ತಡೆಯಾಜ್ಞೆಯನ್ನು ಕೊಟ್ಟರು. ಇವತ್ತು ಆ ತಡೆಯಾಜ್ಞೆ ಇರುವುದರಿಂದ ಯಾವುದೇ ಸೆಸ್ ವಸೂಲ್ಮಾಡತಕ್ಕಂಥ ಸ್ಥಿತಿಯಲ್ಲಿಲ್ಲ. ಇದನ್ನು ನಿವಾರಣೆ ಮಾಡುವ ಸಲುವಾಗಿ, ಸೆಸ್ ಕಲೆಕ್ಟ್ ಮಾಡಲು ಕಾನೂನಿನ ಬೆಂಬಲ ಕೊಡುವ ಸಲುವಾಗಿ ನಾವು ಇದನ್ನು ತಂದಿದ್ದೇವೆ. ಜೊತೆಗೆ ಕೆಲವೊಂದು ಈಗ ಆಗಿಲ್ಲ. ಇವರಿಗೆ ಮಾಡುತ್ತಿದ್ದಾರೆ, ಇನ್ನೊಬ್ಬರಿಗೆ ಮಾಡುತ್ತಿಲ್ಲ, ದ್ವಂದ್ವ ನೀತಿ ಇದೆ ಎನ್ನುವುದು ಸನ್ಮಾನ್ಯ ಜಯಚಂದ್ರ ಅವರ ಅಭಿಪ್ರಾಯ. ಕೆಲವೊಂದು ಅಥಾರಿಟಿಗಳಿವೆ. ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ಕಾನ್ಸ್‌ಟಿಟ್ಯೂಟ್ ಮಾಡಿದಂಥ ಅಥಾರಿಟಿಗಳಿಗೆ ನಾವು ಅಧಿಕಾರವನ್ನು ಕೊಡುತ್ತೇವೆ, ಅವರು ಬೇಕಾದಂಥ ಎಲ್ಲಾ ಇನ್‌ಫ್ರಾಸ್ಟ್ರಕ್ಚರ್ ಸಲುವಾಗಿ ತಾವೇ ಸ್ವತಃ ಖರ್ಚು ಮಾಡಿಕೊಳ್ಳುತ್ತಾರೆ. ಸರ್ಕಾರ ಖರ್ಚು ಮಾಡುವಂಥಾದ್ದು ಯಾವುದೂ ಇರುವುದಿಲ್ಲ. ಅದು ನೀರಿನದು ಇರಬಹುದು, ರೋಡ್ ಡೆವೆಲಪ್‌ಮೆಂಟ್‌ನದು ಇರಬಹುದು, ಕಮ್ಯುನಿಕೇಷನ್ ಇರಬಹುದು ಅಥವಾ ಈ ರೀತಿಯ ಯಾವುದೇ ಒಂದು ಅಭಿವೃದ್ಧಿ ಆಗಬೇಕಾದಂಥ ಸಂದರ್ಭದಲ್ಲಿ ಅವರು ಸ್ವತಃ ತಮ್ಮ ಬಂಡವಾಳ ಹೂಡಿ, ಅದನ್ನು ಖರ್ಚು ಮಾಡುತ್ತಾರೆ. ಆದ್ದರಿಂದ ಅವರಿಗೆ ಲೆವಿ ಮಾಡತಕ್ಕಂಥ ಅವಶ್ಯಕತೆ ಇಲ್ಲ. ತಮ್ಮ ಇನ್‌ಫ್ರಾಸ್ಟ್ರಕ್ಚರನ್ನು ತಾವೇ ಬಿಲ್ಡ್ ಮಾಡುವಂಥವರಿಗೆ ಲೆವಿ ಕಲೆಕ್ಟ್ ಮಾಡತಕ್ಕಂಥ ಅವಶ್ಯಕತೆ ಇಲ್ಲ ಎನ್ನುವಂಥಾದ್ದನ್ನು ನೋಡುವಾಗ ದ್ವಂದ್ವ ನೀತಿಯಾಗುತ್ತಿದೆ ಎಂದು ಕಾಣುತ್ತದೆಯೇ ಹೊರತಾಗಿ ಅದರಲ್ಲಿ ಯಾವ ದ್ವಂದ್ವ ನೀತಿಯೂ ಇಲ್ಲ. ಅವರು ಮಾಡುತ್ತಿರತಕ್ಕಂಥಾದ್ದರಲ್ಲಿ ಏನೂ ತಪ್ಪಿಲ್ಲ ಎನ್ನುವ ವಿಷಯವನ್ನು ನಾನು ಹೇಳುತ್ತೇನೆ.

ಇನ್ನು ಫ್ಲೋರ್ ಏರಿಯಾ ವಿಷಯಕ್ಕೆ ಬಂದರೆ, ಯಾರನ್ನೋ ನೀವು ತಲೆಯಲ್ಲಿಟ್ಟುಕೊಂಡು, ಯಾರಿಗೋ ಅನುಕೂಲ ಮಾಡುವ ದೃಷ್ಟಿಯಿಂದ ನೀವು ಇದನ್ನು ತಂದಿದ್ದೀರಿ ಎನ್ನುವುದು ಸರ್ವಥಾ ಸರಿಯಲ್ಲ ಅಥವಾ ಇದು ಅವಸರದಲ್ಲಿ ತಂದಂಥ ಬಿಲ್ ಅಲ್ಲ. ಈಗಾಗಲೇ ಒಂದು ಸಲ ಇಲ್ಲಿ ಇಂಟ್ರೊಡ್ಯೂಸ್ ಆಗಿ, ಮೇಲ್ಮನೆಯಲ್ಲಿ ಪಾಸ್ ಆಗಿ ಬಂದಿದೆ. ಅವತ್ತು ಇದು ಇಲ್ಲಿ ಸಂಪೂರ್ಣವಾಗಿ ಚರ್ಚೆಯಾಯಿತು. ಚರ್ಚೆಯನ್ನು ಮುಗಿಸಬೇಕು ಎನ್ನುವ ಹಂತದಲ್ಲಿ, ಮಾನ್ಯ ಅಧ್ಯಕ್ಷರ ಕೊಠಡಿಯಲ್ಲಿ ಸೇರಿ ಚರ್ಚೆ ಮಾಡಿದಂಥ ಸಂದರ್ಭದಲ್ಲಿ ಅದನ್ನು ಮುಂದೆ ಹಾಕತಕ್ಕಂಥ ಸಂದರ್ಭ ಬಂತೇ ಹೊರತಾಗಿ ಅವಸರದಲ್ಲಿ ತಂದಂಥಾದ್ದು ಅಲ್ಲ ಇದು. ಒಂದು ಹೈವೇಯನ್ನೋ, ರೋಡನ್ನೋ ಮಾಡತಕ್ಕಂಥ ಸಂದರ್ಭದಲ್ಲಿ, ಯಾರು ಪೋರ್ಷನ್ ಅನ್ನು ಕಳೆದುಕೊಳ್ಳುತ್ತಾರೋ, ಅವರಿಗೆ ಮೇಲೆ ಕಟ್ಟತಕ್ಕಂಥ ಅವಕಾಶ ಮಾಡಿಕೊಟ್ಟಿರತಕ್ಕಂಥಾದ್ದು ಸರಿ ಎಂದು ಶ್ರೀ ಸುರೇಶ್ ಕುಮಾರ್‌ರವರು ಮತ್ತು ಬೇರೆ ಮಾನ್ಯ ಸದಸ್ಯರುಗಳು ಸ್ವಾಗತ ಮಾಡಿ ಹೇಳಿದರು. ಅದರ ಜೊತೆಗೆ ಫ್ಲೋರ್ ಏರಿಯಾ ಕಳೆದುಕೊಳ್ಳುವಂಥ ಹೋಟೆಲ್‌ಗಳು, ಹೈಟೆಕ್ ಆಸ್ಪತ್ರೆಗಳು ಮತ್ತು ಕಾಲೇಜ್ ಬಿಲ್ಡಿಂಗ್ ಇವುಗಳನ್ನೂ ಇದರಲ್ಲಿ ತರತಕ್ಕಂಥಾದ್ದು ಆಗಿದೆ. ಮೊದಲು ತಂದಂಥ ಸಂದರ್ಭದಲ್ಲಿ ನಾವು ಇವುಗಳ್ಯಾವುದನ್ನೂ ಇದರಲ್ಲಿ ಸೇರಿಸಿರಲಿಲ್ಲ. ಸ್ಟಾರ್ ಹೋಟೆಲ್ ಎನ್ನತಕ್ಕಂಥಾದ್ದು ಮಾತ್ರ ಮೊದಲು ಇತ್ತು. ಆಗ ಕೆಲವು ಮಾನ್ಯ ಸದಸ್ಯರುಗಳು ಸಲಹೆ ಕೊಟ್ಟರು, ಏಕೆ ನೀವು ಸ್ಟಾರ್ ಹೋಟೆಲ್‌ಗೆ ಮಾತ್ರ ಸೀಮಿತವಾಗಿ ಇದನ್ನು ಮಾಡುತ್ತಿದ್ದೀರಿ, ಇದರಲ್ಲಿ ಸಾಕಷ್ಟು ಹಾಸ್ಪಿಟಲ್‌ಗಳು ಬರತಕ್ಕಂಥಾದ್ದು ಇರುತ್ತವೆ, ಕಾಲೇಜ್ ಬಿಲ್ಡಿಂಗ್‌ಗಳು ಇರುತ್ತವೆ, ಎಜ್ಯುಕೇಷನಲ್ ಇನ್ಸ್‌ಟಿಟ್ಯೂಷನ್‌ಗಳು ಇರುತ್ತವೆ, ಇವೆಲ್ಲಕ್ಕೂ ಅಪ್ಲಿಕಬಲ್ ಮಾಡಬಹುದು ಎಂದು ಹೇಳಿದರು. ಆ ದೃಷ್ಟಿಯಿಂದ, ಕೆಲವು ಸ್ನೇಹಿತರು ಸಲಹೆ ಮಾಡಿದ್ದರಿಂದ ಇವುಗಳನ್ನು ಇದರಲ್ಲಿ ಸೇರಿಸತಕ್ಕಂಥಾದ್ದು ಆಗಿದೆಯೇ ಹೊರತಾಗಿ, ಯಾರನ್ನೋ ತಲೆಯಲ್ಲಿಟ್ಟುಕೊಂಡು, ಯಾರಿಗೋ ಸಹಾಯ ಮಾಡಬೇಕು ಎಂದುದನ್ನು ತಂದಿದ್ದಲ್ಲ. ಇದರಲ್ಲಿ 'ಹೋಟೆಲ್' ಎಂದು ಬಂದಿರುವುದು ಟೂರಿಸ್ಟ್ ಅಟ್ರ್ಯಾಕ್ಷನ್ ಮಾಡತಕ್ಕಂಥ ದೃಷ್ಟಿಯಿಂದ ಮತ್ತು ಅದರಿಂದ ನಮ್ಮ ರಾಜ್ಯಕ್ಕೆ ಆದಾಯ ಇದೆ. ಅಲ್ಲಿ ಒಂದು ಫ್ಲೋರ್ ಅಕಾಮಡೇಶನ್ ಹೆಚ್ಚು ಮಾಡುವುದರಿಂದ, ಆ ರೂಮುಗಳಿಗೆ ಬರತಕ್ಕಂಥ ಜನರಿಗೆ ಮತ್ತು ನಮಗೆ ಅನುಕೂಲತೆಯಾಗುತ್ತದೆಯೇ ಹೊರತು ಅನಾನುಕೂಲತೆ ಆಗತಕ್ಕಂಥಾದ್ದು ಯಾವುದೂ ಇಲ್ಲ. ಆ ದೃಷ್ಟಿಯಿಂದ ಕೆಲವು ತಿದ್ದುಪಡಿಗಳನ್ನು ತರತಕ್ಕಂಥ ಪ್ರಯತ್ನ ಇಲ್ಲಿ ಮಾಡಿದ್ದೇವೆ. ಆದರಿಂದ ನಮ್ಮ ರಾಜ್ಯಕ್ಕೆ ಆದಾಯ ಹೆಚ್ಚು ಆಗುವುದರ ಜೊತೆಗೆ ಅನುಕೂಲತೆಗಳು ಹೆಚ್ಚಾಗುತ್ತವೆ. ಈಗ ಬಂದಿರತಕ್ಕಂಥ ಕೆಲವು ಬಿಲ್ಡಿಂಗ್‌ಗಳನ್ನು ರೆಗ್ಯುಲರೈಸ್ ಮಾಡತಕ್ಕಂಥಾದ್ದು ಆಗುತ್ತದೆ. ಇಲ್ಲಿಯವರೆಗೂ ರೆಗ್ಯುಲರೈಸ್ ಮಾಡದೇ ಇರುವುದರಿಂದ, ನಾವು ಇದುವರೆಗೂ ಅವರಿಂದ ಟ್ಯಾಕ್ಸ್ ಕಲೆಕ್ಟ್ ಮಾಡಲು ಆಗಿಲ್ಲ ಅಥವಾ ಇನ್ನಿತರ ಸೌಲಭ್ಯಗಳನ್ನು ಮಾಡಲು ಆಗಿಲ್ಲ. ಆದ್ದರಿಂದ ಈ ಮಸೂದೆಯ ಮುಖಾಂತರ ನಮ್ಮಲ್ಲಿರತಕ್ಕಂಥ ಕೆಲವೊಂದು ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿದು, ಅವುಗಳಿಗೆ ಅನುಕೂಲತೆ ಮಾಡಿಕೊಡುವ ದೃಷ್ಟಿಯಿಂದ ಮತ್ತು ನಮ್ಮ ರಾಜ್ಯಕ್ಕೆ ಇದರಿಂದ ಹೆಚ್ಚಿನ ಟ್ಯಾಕ್ಸ್ ಕಲೆಕ್ಟ್ ಆಗುತ್ತದೆ ಎನ್ನುವ

ದೃಷ್ಟಿಯಿಂದ ಕೆಲವೊಂದು ಅಮೆಂಡ್‌ಮೆಂಟ್‌ಗಳನ್ನು ತಂದಿದ್ದೇವೆ. ಸನ್ಮಾನ್ಯ ಸದಸ್ಯರು ಹೇಳಿದಂಥ ಎಲ್ಲಾ ವಿಷಯಗಳನ್ನು ನಾವು ಗಂಭೀರವಾಗಿ ಪರಿಗಣಿಸಿದ್ದೇವೆ. ನಾನು ತಮ್ಮ ಮೂಲಕ ಎಲ್ಲರಿಗೂ ಬಿನ್ನಹ ಮಾಡಿಕೊಳ್ಳುತ್ತಿದ್ದೇನೆ. ಇದನ್ನು ಪಾಸ್ ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್:— ಮಾನ್ಯ ಸಭಾಧ್ಯಕ್ಷರೇ, ಅವರು ಹೇಳುವ ಸಮಯದಲ್ಲಿ ನಮ್ಮನ್ನು ಕನ್ವಿನ್ಸ್ ಮಾಡಲು ಪ್ರಯತ್ನ ಪಟ್ಟರು. ನಿಮ್ಮ ಪ್ರಯತ್ನಕ್ಕೆ ನಾನು ಸ್ವಾಗತ ಮಾಡುತ್ತೇನೆ. ಆದರೆ ಕನ್ವಿನ್ಸ್ ಆಗುವ ಸಂಧರ್ಭವೇ ಇಲ್ಲ. ಮೊದನೇಯದಾಗಿ, 14ಬಿ 1 ಮತ್ತು 2 ರಲ್ಲಿ ಬಹಳ ಡಿಸ್ಟಿಂಕ್ಷನ್ ಇದೆ. ಅಂದರೆ ಯಾರು ರಸ್ತೆ ಮಾಡುವಾಗ ಜಮೀನು ಕಳೆದುಕೊಳ್ಳುತ್ತಾರೋ, ಅವರಿಗೆ ಎಕ್ಸ್‌ಟ್ರಾ ಫ್ಲೋರ್ ಕಟ್ಟಲು ಅನುಮತಿ ಕೊಡುವುದು ಎನ್ನುವುದು. ಅದನ್ನು ನಾವು ಸ್ವಾಗತ ಮಾಡುತ್ತೇವೆ. ನೀವು ಆದೇ ರೀತಿ ಹೈಟೆಕ್ ಆಸ್ಪತ್ರೆಗಳು, ಬ್ಯಾಂಕಿಂಗ್ ಇನ್ಸ್ಟಿಟ್ಯೂಷನ್‌ಗಳು, ಎಜ್ಯುಕೇಷನಲ್ ಇನ್ಸ್ಟಿಟ್ಯೂಷನ್‌ಗಳಿಗೂ ಮಾಡುತ್ತಿದ್ದೀರಿ. ಇವರುಗಳು ಎಲ್ಲಿ ಜಮೀನು ಕಳೆದುಕೊಳ್ಳುತ್ತಾರೆ? ಇದರಲ್ಲಿ ಏನಿದೆ ಎಂದರೆ,

Clauses 14 (b) and sub-clause (2) reads:

``The planning Authority, may, permit an additional Floor area ratio upto one hundred percent of the permissible Floor Area Ration specified in the development plan in case of starred category of residential hotels subject to payment of such amount and such other terms and conditions as it may specify:

ಇದರಲ್ಲಿ ಅವರು ಕಳೆದುಕೊಳ್ಳುವುದು ಏನೂ ಇಲ್ಲ. ಈಗ ಏನಿದೆ, ಅದರ ಮೇಲೆ ಅವರು ಕಟ್ಟಿಕೊಳ್ಳಬಹುದಷ್ಟೇ. ಒಟ್ಟಿನಲ್ಲಿ ನಿಮಗೆ ದುಡ್ಡು ಬೇಕು. ಸರ್ಕಾರಕ್ಕೆ ಅದರಿಂದ ಆದಾಯ ಬರುತ್ತದೆ ಎಂದು ನೀವು ಹೇಳಿದಿರಿ. ಒಂದು ಕೆಲಸ ಮಾಡಿ, ಇವತ್ತಿನಿಂದ ರಾಜ್ಯದಲ್ಲಿ ಪಿಕ್-ಪ್ಯಾಕೆಟ್ ಮಾಡುವುದು, ಡಕಾಯಿತಿ ಮಾಡುವುದು ಅಪರಾಧವಲ್ಲ ಎಂದು ಮಾಡಿ. ಅವರು ಡಕಾಯಿತಿ ಮಾಡುವುದರಲ್ಲಿ ಶೇ.50ರಷ್ಟನ್ನು ಸರ್ಕಾರಕ್ಕೆ ಕೊಡಲಿ, we will become rich. ಅದನ್ನು ಅಪರಾಧ ಎಂದು ಮಾಡಬೇಡಿ. ನೀವು ಬೇಕಾದ ಹಾಗೆ ಕಟ್ಟಿಕೊಳ್ಳಿ, ಆದರೆ ನಮಗೆ ಆದಾಯ ಕೊಡಿ ಎಂದರೆ ಏನು ಅರ್ಥವಾಗುತ್ತದೆ? ಮಾನ್ಯ ಮುಖ್ಯಮಂತ್ರಿವರು ಇಲ್ಲಿ ಇರುವುದರಿಂದ, ನನಗೆ ನೆನಪಿಗೆ ಬಂದು ಒಂದು ಅಂಶವನ್ನು ಹೇಳುತ್ತೇನೆ, ಯಾರೋ ಒಂದು ರೆಸಿಡೆನ್ಷಿಯಲ್ ಸ್ಕೂಲ್ ಕಟ್ಟಿದರಂತೆ, Fortunately or unfortunately it was a co-education school. ರಾತ್ರಿ ಮಲಗುವುದಕ್ಕೆ ಅವನು ಬೇರೆಬೇರೆ ಬಿಲ್ಡಿಂಗ್ ಕಟ್ಟಿರಲಿಲ್ಲ. ಒಂದು ದೊಡ್ಡ ಹಾಲ್ ಇತ್ತು. ಅದರ ಮಧ್ಯೆ ಎಂದು ಲೈನ್ ಎಳೆದು, ಇತ್ತಕಡೆ ಹುಡುಗಿಯರು ಮಲಗಿಕೊಳ್ಳಬೇಕು, ಇತ್ತಕಡೆ ಹುಡುಗರು ಮಲಗಿಕೊಳ್ಳಬೇಕು, ಯಾರೂ ಕೂಡ ರಾತ್ರಿ ಈ ರೇಖೆಯನ್ನು

ಧಾಟಬಾರದು ಎಂದು ಒಂದು ಫರ್ಮಾನು ಹೊರಡಿಸಿದ. ಮೊದಲನೆಯ ದಿವಸ ರಾತ್ರಿಯೇ ಒಬ್ಬ ಹುಡುಗ ಕಂಟ್ರೋಲ್ ಲೈನನ್ನು ಧಾಟಿಬಿಟ್ಟು ಆ ಕಡೆ ಹೋಗಿ ಬಂದ. ಅವನನ್ನು ಕರೆದುಕೊಂಡು ಹೋಗಿ ಪ್ರಿನ್ಸಿಪಾಲ್ ಮುಂದೆ ನಿಲ್ಲಿಸಿದರು. ಏನಪ್ಪಾ, ಹೋಗಿದ್ದೆಯಾ ಎಂದು ಕೇಳಿದಕ್ಕೆ, ಹೋಗಿದ್ದೆ ಎಂದ. 50 ರೂಪಾಯಿ ಫೈನ್ ಹಾಕಿದರು. ಎರಡನೆ ಸಲ ಹೋದರೆ 100 ರೂಪಾಯಿ ಫೈನ್, ಮೂರನೇ ಸಲ ಹೋದರೆ 150 ರೂಪಾಯಿ ಫೈನ್ ಎಂದರು. ಈಗ ನೀವು ಹಾಕುತ್ತಿದ್ದೀರಲ್ಲಾ, ಅದೇ ರೀತಿ. ಎಲ್ಲದಕ್ಕೂ ಅವನು ಸುಮ್ಮನೆ ಇದ್ದ, ಏಕಪ್ಪ ಎಂದು ಪ್ರಿನ್ಸಿಪಾಲ್ ಕೇಳಿದಕ್ಕೆ, ಸರ್, ಒಂದು ಪ್ರಶ್ನೆ ಎಂದ, ಏನು ಎಂದಿದ್ದಕ್ಕೆ, ಸೀಸನ್ ಟಿಕೆಟ್ ಎಷ್ಟು ಸರ್ ಎಂದು ಕೇಳಿದ. ಹಾಗೆಯೇ ಇವತ್ತು ನೀವು ಸೀಸನ್ ಟಿಕೆಟ್ ಮಾಡುವುದಕ್ಕೆ ಹೊರಟಿದ್ದೀರಿ. ಯಾರು ಎಷ್ಟು ಬೇಕಾದರೂ ಕಟ್ಟಿಕೊಳ್ಳಬಹುದು, ಆದರೆ ನಮಗೆ ಆದಾಯ ಬಂದರೆ ಸಾಕು ಎಂದು ಮಾಡುತ್ತಿದ್ದೀರಿ. ಬೆಂಗಳೂರಿನಲ್ಲಿರುವ 57,000 ಅನ್‌ಅಥರೈಸ್ಡ್ ಕನ್‌ಸ್ಟ್ರಕ್ಷನ್‌ಗಳು ಸರ್ಕಾರ ಅಥವಾ ಕಾರ್ಪೊರೇಶನ್ ಗಮನಕ್ಕೆ ಹೇಗೆ ಬಂತು ಎಂದರೆ ಅದನ್ನು ನಿಮ್ಮ ಇಂಜನಿಯರ್‌ಗಳು ಮಾಡಲಿಲ್ಲ. ಪಕ್ಕದ ಮನೆಯವನು ಶಂಕ ಹೊಡೆದುಕೊಂಡ, ನಮ್ಮ ಮನೆಗೆ ಬೆಳಕು ಬರುವುದಿಲ್ಲ, ನಮ್ಮ ಮನೆಗೆ ಗಾಳಿ ಬರುವುದಿಲ್ಲ, ನಾವು ಓಡಾಡಲು ಆಗುವುದಿಲ್ಲ ಎಂದು ಹೇಳಿದ. ಅವನು ಹೇಳಿದ್ದಕ್ಕೆ, ಅವನು ಫರ್ಸಿಸ್ಟ್ ಮಾಡಿದ್ದಕ್ಕೆ ನೀವು ನೋಟೀಸ್ ಕೊಟ್ಟ ನಾಟಕ ಮಾಡಿ, ಇವತ್ತು ನೀವು ಅವರ ಜೊತೆ ಶಾಮೀಲಾಗಿ ರಾಜಿ ಮಾಡಲು ಹೋಗುತ್ತಿದ್ದೀರಲ್ಲಾ, ಆ ಪಕ್ಕದ ಮನೆಯವರ ಕತೆ ಏನು? ಸಿಗರೇಟ್ ಪ್ಯಾಕ್ ಮೇಲೆ ಒಂದು ವಾಕ್ಯ ಇರುತ್ತದೆ, `smoking is injurious to health' ಎಂದು; ಹಾಗೆಯೇ voilating rules and regulations is injurious to an enlightened citizen. ಅದನ್ನು ಬ್ರೇಕ್ ಮಾಡದೇ ಇವತ್ತು ಸಿಟಿಜನ್ ಆಗುವುದು, ಲಾಭ ಪಡೆಯುವುದು, ಸರ್ಕಾರಕ್ಕೆ ಬಹಳ ಮೆಚ್ಚಿನ ಅಂಶ ಆಗುವುದು. ಶ್ರೀ ಕಾಗೋಡು ತಿಮ್ಮಪ್ಪನವರು ಬಹಳ ಮನಸ್ಸು ಮುಟ್ಟುವ ಹಾಗೆ ಮಾತನಾಡಿದ್ದಾರೆ. ನಾಳೆ ಏನೋ ಆಗಿಬಿಡುತ್ತದೆ ಎನ್ನುವ ಅರ್ಜೆನ್ಸಿ ಇಲ್ಲ. ದಯವಿಟ್ಟು ಇದನ್ನು ಪ್ರೆಸ್ಟೀಜ್ ಎಂದು ಇಟ್ಟುಕೊಳ್ಳದೆ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ರೆಫರ್ ಮಾಡಿ. ಒಳ್ಳೆಯ ಅಂಶಗಳನ್ನು ನಾವು ಸ್ವಾಗತಿಸಿದ್ದೇವೆ. ಸಾರಾಸಗಟಾಗಿ ಇದನ್ನು ತಳ್ಳಿಹಾಕಿಲ್ಲ. ದಯವಿಟ್ಟು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹಾಕಿ. ತಾವು ಹೇಳಿದಿರಿ, ಮೊದಲು ಸ್ಟಾರ್ಡ್ ಹೋಟೆಲ್‌ಗಳಿಗೆ ಮಾತ್ರ ಎಂದು ಮಾಡಿದ್ದೆವು ಆಮೇಲೆ ಕೆಲವು ಸ್ನೇಹಿತರುಗಳು ಸಲಹೆ ಮಾಡಿ ಹೇಳಿದರು; ಎಂದು ಸಹ ಅವರು ಹೇಳಿದರು. ಆ ಸ್ನೇಹಿತರುಗಳು ಯಾರು ಎಂಬುದು ನನಗೆ ಗೊತ್ತಿಲ್ಲ. ನಾವಂತೂ ಹೇಳಿಲ್ಲ. ಹೈಟೆಕ್ ಆಸ್ಪತ್ರೆಗಳನ್ನು ಮಾಡಿ, ಮಲ್ಟ ಆಸ್ಪತ್ರೆಯನ್ನು ಮಾಡಿ, ಬ್ಯಾಂಕಿಂಗ್ ಮಾಡಿ ಎಂದು ನಾವು ಹೇಳಲಿಲ್ಲ. ಆದರೆ ನಿಜವಾದ ಸ್ನೇಹಿತರುಗಳನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕರೆದು ಅಲ್ಲಿ ಇದರ ಬಗ್ಗೆ ಪೂರ್ಣ ವಿಮರ್ಶೆ ಮಾಡಿ. ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿದ ಹಾಗೆ ಮುಂದಿನ ಜನಾಂಗಕ್ಕೆ we should be accountable. ಸಾರಾಸಗಟಾಗಿ ಕೆಲವು ಪಟ್ಟಭದ್ರ ಹಿತಾಸಕ್ತಿಗಳಿಗೆ ಇದರಿಂದ ಉಪಯೋಗ ಆಗುವಂಥಾದ್ದಲ್ಲ. ಮುಂದಿನ ಜನಾಂಗಕ್ಕೆ, ಮುಂದೆ ಬರುವ ಸರ್ಕಾರ ಕೂಡ ಅಕೌಂಟಬಲ್ ಆಗಬೇಕು. ಅದಕ್ಕೋಸ್ಕರ ನಾನು ಬಹಳ ಕಳಕಳಿಯಿಂದ ಹೇಳುತ್ತಿದ್ದೇನೆ, ಇದನ್ನು ಯಾವುದೋ ಒಂದು

ದೃಷ್ಟಿಯಿಂದ ವಿರೋಧ ಮಾಡಬೇಕು ಅಥವಾ ದ್ವೇಷ ಮಾಡಬೇಕು ಎಂದು ಅಂದುಕೊಳ್ಳದೆ please refer it to a Joint Select Committee and let us try to have a fair amendment.

+ ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) :— ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರು ಈ ಬಿಲ್ಲಿನ ಬಗ್ಗೆ ಚರ್ಚೆ ಆಗಿದ್ದನ್ನು / ಆಗುತ್ತಿರುವುದನ್ನು ನಾನು ಮುಕ್ತಕಂಠದಿಂದ ಸ್ವಾಗತ ಮಾಡಿದ್ದೇನೆ. ಅಧ್ಯಕ್ಷರೇ, ತಮಗೂ ಕೂಡ ಅನುಭವ ಇದೆ, ತಮಗೂ ಗೊತ್ತಿದೆ, ಯಾವುದೇ ಒಂದು ತಿದ್ದುಪಡಿ ಮಸೂದೆಯನ್ನು ಸಭೆಯ ಮುಂದೆ ತರಬೇಕಾದರೆ, ಅದರಲ್ಲಿ ಆಸಕ್ತಿ ಇರುವಂಥವರ ಜೊತೆ ಕುಳಿತು ಅಥವಾ ತಮ್ಮ ಪಾರ್ಟಿ ಸಭೆಯಲ್ಲಿ ಕುಳಿತು ಚರ್ಚೆಮಾಡಿ ನಂತರ ವಿಧೇಯಕವನ್ನು ತರತಕ್ಕಂಥಾದ್ದು ಪದ್ಧತಿ. ಇದನ್ನು ತಂದು ಇಂಟ್ರೊಡ್ಯೂಸ್ ಮಾಡಿದ್ದೀರಿ. ಮಾಡಿದ್ದರಲ್ಲೇ ಮೂರು ಅಮೆಂಡ್‌ಮೆಂಟ್‌ಗಳನ್ನು ತಂದಿದ್ದೀರಿ. ಅವುಗಳು ಇನ್ನೂ ಚರ್ಚೆಗೆ ಬರಲಿಲ್ಲ. ಚರ್ಚೆ ಆಗುತ್ತಿರುವುದು ಈಗಷ್ಟೇ. ಈಗಾಗಲೇ ಮೂರನೇ ಅಮೆಂಡ್‌ಮೆಂಟ್ ತಂದಿದ್ದೀರಿ. ಇದನ್ನು ನೋಡಿದಾಗ, ನಿಮಗೆ ಸ್ಪಷ್ಟವಾದಂಥ ಒಂದು ವಿಷನ್ ಇಲ್ಲ ಎಂದು ಅನಿಸುತ್ತದೆ. ಒಂದು ತಿದ್ದುಪಡಿಯನ್ನು ತರಬೇಕಾದರೆ ಏನೋ ಒಂದು ಗುರಿ ಇಟ್ಟುಕೊಂಡಿರಬೇಕು. ಅದು ಸಮಗ್ರವಾಗಿ ಬೆಂಗಳೂರು ಪಟ್ಟಣ ಅಥವಾ ಯಾವುದೋ ಒಂದು ಅರ್ಬನ್ ಪ್ಲೇಸಸ್ ಅನ್ನು ಪ್ರಿಸರ್ವ್ ಮಾಡುವ ಬಗ್ಗೆ ಇರಬಹುದು. ಆದರೆ ಈಗ ನೀವು ತರುವ ಕಾನೂನಿನಿಂದ ಯಾರಿಗೆ ಭಯ ಬರುತ್ತದೆ. ಉದಾಹರಣೆಗೆ ಹೇಳುವುದಾದರೆ, ಇಲ್ಲಿ ಎಫ್‌ಎಫ್ ಅನ್ನು ತೆಗೆದುಹಾಕಬೇಕು ಎನ್ನುವುದರ ಬಗ್ಗೆ ಪ್ರಸ್ತಾಪವಾಯಿತು. ಒಂದು ಕಡೆ ನೀವು ಪೆನಾಲ್ಟಿ ಹಾಕುತ್ತೀರಿ, ಇನ್ನೊಂದು ಕಡೆ ಸರ್ಕಾರಕ್ಕೆ ತೆಗೆದುಕೊಳ್ಳುತ್ತೀರಿ ಇನ್ನೊಬ್ಬ ಪಕ್ಕದ ಮನೆಯವರು ದುಡ್ಡು ಕೊಡುತ್ತೇವೆ ಎಂದು ಬಂದರೆ ಅವರಿಗೆ ಕೊಡುತ್ತೇವೆ ಎಂದು ಹೇಳುವುದಾದರೆ, you are inviting all sorts of litigations. ಇದರಿಂದ ಜನರಿಗೆ ನಾವು ವಯಲೇಷನ್ ಮಾಡಬಾರದು ಎನ್ನುವ ಭಯ ಬರುತ್ತದೆಯೇ? ಅಥು ಖಂಡಿತಾ ಬರುವುದಿಲ್ಲ. ಆ ವಿದೇಯಕ ಈ ಸದನದಲ್ಲಿ ಪಾಸ್ ಆಗುವುದರಿಂದ ನಿಮಗೆ ಒಳ್ಳೆಯ ಮೆಸೇಜ್ ಬರುವುದಿಲ್ಲ. ಇದು ಎಫೆಕ್ಟ್ ಆಗತಕ್ಕಂಥದ್ದು ಬೆಂಗಳೂರಿನಂತಹ ಪಟ್ಟಣದಲ್ಲೇ. ಬೆಂಗಳೂರು ನಗರವನ್ನು ಇವತ್ತು ಎಲ್ಲರೂ ಕೂಡ ಪ್ರೈಸ್ ಮಾಡುತ್ತಾರೆ. ಇದು ಬಹಳ ಸುಂದರವಾದಂತಹ ನಗರ, ಬೆಂಗಳೂರು ನಗರದಲ್ಲಿರತಕ್ಕಂಥ ಆರ್ಕಿಟೆಕ್ಚರ್ ಆಗಲೀ, ಕಟ್ಟಡಗಳು ಆಗಲೀ ಬಹಳ ಚೆನ್ನಾಗಿವೆ ಎಂದು ಎಲ್ಲರೂ ಕೂಡ ಪ್ರಶಂಸೆ, ಮಾಡುವಂತಹ ಸಂದರ್ಭದಲ್ಲಿ, ನೀವೇನಾದರೂ ಈ ವಿಧೇಯಕವನ್ನೂ ಜಾರಿಗೆ ತಂದಲ್ಲಿ ಇದು ಬಹಳ ತಪ್ಪಾಗುತ್ತದೆ. ಎಲ್ಲಾ ಸಂದರ್ಭದಲ್ಲೂ ಕೂಡ ಅಧಿಕಾರಿಗಳು ತಪ್ಪು ಮಾಡಿದ್ದಾರೆ ಎನ್ನತಕ್ಕಂಥ ಮಾತನ್ನು ಹೇಳುತ್ತೀರಿ. ಅಧಿಕಾರಿಗಳಿಂದ ತಪ್ಪಾಗಿದೆ, ಅಧಿಕಾರಿಗಳು ತಪ್ಪು ಮಾಡುವುದಕ್ಕೆ ನಾವು ಕೂಡ ಕಾರಣರು ಆಗಿರಬಹುದು. ಅಂತಿಮವಾಗಿ ಇದಕ್ಕೆ ಏನಾದರೂ ಜವಾಬ್ದಾರಿ ಫಿಕ್ಸ್ ಮಾಡುವುದಕ್ಕೆ ನಿಮ್ಮ ತಿದ್ದುಪಡಿಯಲ್ಲಿ ಪ್ರಸ್ತಾಪ ಮಾಡಿದ್ದೀರಾ? ಒನ್ ಟೈಮ್ ನಾವೇನೋ ಇವುಗಳನ್ನು ರೆಗ್ಯೂಲರೈಸ್ ಮಾಡುತ್ತೇವೆ ಎಂದಿಟ್ಟುಕೊಳ್ಳಿ. ರೆಗ್ಯೂಲರೈಸ್ ಮಾಡಿದ ಮೇಲೆ, ಇನ್ನು ಮುಂದೆ ಈ ರೀತಿ ಮಾಡಲೇಕೂಡದು, ಅದಕ್ಕೆ ಇಂತಹವರು

ಯಾರಾದರೂ ಒಬ್ಬರು ಜವಾಬ್ದಾರರು ಎನ್ನತಕ್ಕಂಥ ಮಾತನ್ನಾದರೂ ಕೂಡ ನೀವು ತಿದ್ದುಪಡಿ ವಿಧೆಯಕದಲ್ಲಿ ಹೇಳಿದ್ದೀರಾ? ನೀವು ಅದನ್ನು ಕೂಡ ಹೇಳಿಲ್ಲ. ಈ ರೀತಿಯಾಗಿ ಈಗ 50-60 ಸಾವಿರ ಕಟ್ಟಡಗಳು ಇವೆ. ನಾವು ಈಗ ಇವುಗಳನ್ನು ರೆಗ್ಯೂಲರೈಸ್ ಮಾಡಿದರೆ, ಇನ್ನು ಮುಂದಿನ 5-10 ವರ್ಷಗಳಲ್ಲಿ ಇಂತಹ 50-60 ಸಾವಿರ ಕಟ್ಟಡಗಳು ಬರಬಹುದು, ಆಗ ನಾವು ಇನ್ನೊಂದು ಮಸೂದೆ ಜಾರಿಗೆ ತಂದು ಅದನ್ನು ರೆಗ್ಯೂಲರೈಸ್ ಮಾಡಬಹುದು; ನಾವು ಈ ರೀತಿ ಮಾಡುತ್ತಾ ಹೋದರೆ, ಬೆಂಗಳೂರಿಗಾಗಲೀ ಅಥವಾ ಇನ್ನಾವುದಾದರೂ ಪಟ್ಟಣ ಪ್ರದೇಶಗಳಿಗಾಗಲೀ ನಿಜವಾಗಿಯೂ ಕೂಡ ಅವುಗಳು ತಮ್ಮ ಸೌಂದರ್ಯವನ್ನು ಕಾಪಾಡಿಕೊಳ್ಳಲಿಕ್ಕೆ ಸಾಧ್ಯವಾಗುವುದಿಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ. ಈ ಕಟಾಫ್ ಡೇಟ್ ಮತ್ತು ಸೀಲಿಂಗ್ ಬಗ್ಗೆ ಕೂಡ ಈ ವಿಧೇಯಕದಲ್ಲಿ ಹೇಳಿದ್ದೀರಿ. ಈ ಕಟಾಫ್ ಡೇಟಿನಲ್ಲಿರುವಂತಹ ಕಟ್ಟಡಗಳಿಗೆ ನೀವು ಒನ್ ಟೈಮ್ ರೆಗ್ಯೂಲರೈಸ್ ಮಾಡಿಕೊಳ್ಳಲು ಅವಕಾಶ ನೀಡುತ್ತೀರಿ. What is the ceiling, suppose it affects the easement right of another person?

ನೀವು ಹೇಳಿದ ಪ್ರಕಾರ 4ನೇ ಬಿಲ್ಡಿಂಗ್ ಇತ್ಯಾದಿಗಳ ಪ್ರಶ್ನೆ ಬೇರೆ. ಈಗ ಕಟ್ಟಡದ ಐದು ಅಡಿ ಜಾಗ ಬಿಡಬೇಕೆಂದು ಇರುತ್ತದೆ. ಆದರೆ ಒಂದು ಅಡಿ ಜಾಗವನ್ನೂ ಕೂಡ ಬಿಡದೇ ಕಟ್ಟಡವನ್ನು ಕಟ್ಟಲಾಗಿರುತ್ತದೆ. ಪಕ್ಕದವನಿಗೆ ಗಾಳಿ ಬರುವುದಿಲ್ಲ ಮತ್ತು ಬೆಳಕೂ ಕೂಡ ಬರುವುದಿಲ್ಲ. ಅವನು ಅದರ ಬಗ್ಗೆ ಲಿಟಿಗೇಷನ್ ಹಾಕಿದಾಗ ಅದಕ್ಕೆ ಸಂಬಂಧಪಟ್ಟ ಕೋರ್ಟ್ ಆರ್ಡರ್ ಆಗಿದ್ದರೆ, ಅದನ್ನೂ ಕೂಡ ರೆಗ್ಯೂಲರೈಸ್ ಮಾಡಬೇಕೆಂದರೆ ಅದು ಹೇಗೆ ಸಾಧ್ಯವಾಗುತ್ತದೆ? ಈ ವಿಧೇಯಕದ ಬಗ್ಗೆ ಜಂಟಿ ಸದನ ಸಮಿತಿಯಲ್ಲಿ ಚರ್ಚಿಸುವುದು ಒಳ್ಳೆಯದು ಎಂದು ನನಗನ್ನಿಸುತ್ತದೆ. ಬೇಕಾದರೆ ಜಂಟಿ ಸದನ ಸಮಿತಿಗೆ 15-20 ದಿವಸಗಳಲ್ಲಿ ವರದಿ ಕೊಡುವಂತೆ ನಾವು ಸೂಚಿಸಬಹುದು. ಜಂಟಿ ಸದನ ಸಮಿತಿ ರಚಿಸಿದಲ್ಲಿ ಆ ಸಮಿತಿಯಲ್ಲಿ ಈ ವಿಧೇಯಕದ ಬಗ್ಗೆ ಆಮೂಲಾಗ್ರವಾಗಿ ಚರ್ಚಿಸಿ ಎಲ್ಲವನ್ನೂ ಕೂಡ ಅಳವಡಿಸುವುದು ಸಾಧ್ಯವಾಗುತ್ತದೆ. ಇಂತಹ ಒಂದು ತಿದ್ದುಪಡಿ ಮಸೂದೆಯನ್ನು ನೀವು ಸಭೆಯ ಮುಂದೆ ಮಂಡಿಸಿದಾಗ ಮತ್ತು ಅದಕ್ಕೆ ಒಪ್ಪಿಗೆ ಪಡೆಯುವಂತಹ ಸಂದರ್ಭದಲ್ಲಿ ಸರ್ಕಾರದವರು ಇನ್ನು ಮುಂದೆ ಇಂತಹ ತಪ್ಪುಗಳು ಆಗದಂತೆ ಏನು ಕ್ರಮವನ್ನು ಕೈಗೊಂಡಿದೆ ಎಂಬುದನ್ನು ಇಲ್ಲಿ ಸ್ಪಷ್ಟಪಡಿಸಬೇಕಾಗುತ್ತದೆ. ಬಹುಶ: ಈಗ ನಾವು ಏನೇ ಹೇಳಿದರೂ ಕೂಡ ನಾವು ಏನೂ ಮಾಡಲಾಗುವುದಿಲ್ಲ. ಅನುಭವ ಇರತಕ್ಕವರನ್ನು ಜಂಟಿ ಸದನ ಸಮಿತಿಯ ಸದಸ್ಯರನ್ನಾಗಿ ನೇಮಿಸಿ 15 ದಿವಸಗಳೊಳಗಾಗಿ ಸದರಿ ಸಮಿತಿಯಿಂದ ವರದಿ ಪಡೆದುಕೊಂಡು ಅನಂತರ ನೀವು ಈ ವಿಧೇಯಕವನ್ನು ಪಾಸ್ ಮಾಡಿ. ದಯವಿಟ್ಟು ಅದರ ಬಗ್ಗೆ ಚಿಂತನೆ ಮಾಡಿ ಎನ್ನತಕ್ಕಂಥ ಮಾತನ್ನು ಹೇಳಿ ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) :— ಮಾನ್ಯ ಅಧ್ಯಕ್ಷರೇ, ಮಾನ್ಯ ಎಂ.ಎಸ್ ಪಾಟೀಲ್‌ರವರು ಬಹಳ ಫಿಲಾಸಫಿಕಲ್ಲಾಗಿ ಹೇಳಿದರು. ವ್ಯವಸ್ಥೆ ಕೆಟ್ಟು ಹೋಗಿ ಬಿಟ್ಟಿದೆ, ಎಲ್ಲರೂ ಕೆಟ್ಟು ಹೋಗಿ ಬಿಟ್ಟಿದ್ದಾರೆ, ಏನೂ ಮಾಡಲಿಕ್ಕೆ ಆಗುತ್ತಿಲ್ಲ,

ನಾವೆಲ್ಲರೂ ಈ ವ್ಯವಸ್ಥೆಯಡಿ ಅಸಹಾಯಕರು... ಮುಂತಾಗಿ ಮಾನ್ಯ ಸಚಿವರು ಹೇಳಿದರು. ಸರ್ಕಾರ ನಡೆಸತಕ್ಕವರು ಸ್ವಲ್ಪ ಜವಾಬ್ದಾರಿಯಿಂದ ಮಾತನಾಡಬೇಕು. ಎಲ್ಲಾ ವ್ಯವಸ್ಥೆ ಕೆಟ್ಟು ಹೋಗಿ ಬಿಟ್ಟಿದೆ ಎಂದು ಹೇಳಿ ನೀವೂ ಕೂಡ ಕಿಡಲಿಕ್ಕೆ ಶುರುವಾಗಿದ್ದೀರಾ? ನೀವು ಏನು ಮಾಡುತ್ತಿದ್ದೀರಿ? ಸ್ವಲ್ಪ ಮಾತನಾಡುವಾಗ ಜವಾಬ್ದಾರಿ ಸ್ಥಾನದಲ್ಲಿರುವ ನೀವು ಜವಾಬ್ದಾರಿಯುತವಾಗಿ ಮಾತನಾಡಿ. ವ್ಯವಸ್ಥೆ ಕೆಟ್ಟು ಹೋಗಿರುವುದನ್ನು ಸರಿಪಡಿಸಲಿಕ್ಕಾಗಿಯೇ ನಿಮ್ಮನ್ನು ಇಲ್ಲಿಗೆ ಕಳುಹಿಸಲಾಗಿದೆ. ಯಾರೋ ಏನೋ ಬೀದಿಯಲ್ಲಿ ಹಾದಿಯಲ್ಲಿ ಹೋಗತಕ್ಕಂಥವರು ತಪ್ಪುಗಳನ್ನು ಮಾಡುತ್ತಾರೆ, ಆ ತಪ್ಪುಗಳನ್ನು ನೀವು ಸರಿಪಡಿಸಬೇಕು ಎಂದು ಜನ ನಿಮಗೆ ಕೊಟ್ಟಿರತಕ್ಕಂಥ ಅಧಿಕಾರವನ್ನು ಉಪಯೋಗಿಸಿ ಕೆಡುತ್ತಾ ಇರತಕ್ಕಂಥ ವ್ಯವಸ್ಥೆಯನ್ನು ನೀವು ಸರಿಪಡಿಸಬೇಕಾಗುತ್ತದೆ. ಅದಕ್ಕೋಸ್ಕರವೇ ನಿಮಗೆ ಅಧಿಕಾರವನ್ನು ನೀಡಲಾಗಿದೆ. ಎರಡನೆಯದಾಗಿ, ಈ ವಿಧೇಯಕದಿಂದ ದಂದೆ ಮಾಡುತ್ತಾ ಇರತಕ್ಕಂಥ ಜನ ಅನುಕೂಲ ಪಡೆಯುತ್ತಾರೆ. ಈ ವಿಧೇಯಕದಿಂದ ಯಾರಿಗೆ ಸಹಾಯವಾಗುತ್ತದೆ ಎಂಬುದನ್ನುಂ ನೀವೇ ಹೇಳಿಬಿಡಿ. ಈ ವಿಧೇಯಕದಿಂದ ಕರ್ನಾಟಕ ರಾಜ್ಯದ ಬಡ ಜನತೆಗೆ ಅನುಕೂಲ ಆಗುತ್ತದೆಯೇ? ಯಾವ ಸಾಮಾನ್ಯ ಮನುಷ್ಯನಿಗೆ ಇದರಿಂದ ಅನುಕೂಲವಾಗುತ್ತದೆ ಎಂಬುದನ್ನು ನೀವು ಹೇಳಿ. ನೀವು ಸಾಮಾನ್ಯ ಮನುಷ್ಯರ ಪರವಾಗಿ ಇದನ್ನು ತರುತ್ತಿದ್ದೇವೆ ಎಂದು ಹೇಳಿದರೆ ನಾವೆಲ್ಲರೂ ಸರ್ವಾನುಮತದಿಂದ ಇದಕ್ಕೆ ಒಪ್ಪಿಗೆ ಕೊಡುತ್ತೇವೆ. ಬಗರ್ ಹುಕುಂ ಸಾಗುವಳಿಯನ್ನು ಸಕ್ರಮ ಮಾಡಲಿಕ್ಕೆ ಸರ್ಕಾರ ಇಲ್ಲಿ ಒಂದು ಬಿಲ್ ಮಂಡಿಸಿತ್ತು, ಅದಕ್ಕೆ ನಾವೆಲ್ಲರೂ ಒಪ್ಪಿಗೆ ಕೊಟ್ಟೆವು. ಏಕೆಂದರೆ ಅದು ಬಡವರ ಪರವಾಗಿ ಇರತಕ್ಕಂಥ, ಜನಸಾಮಾನ್ಯರ ಪರವಾಗಿರತಕ್ಕಂಥ, ಜನರಿಗೆ ಅನುಕೂಲ ಆಗತಕ್ಕಂಥ ಮಸೂದೆಯಾಗಿತ್ತು. ಆದ್ದರಿಂದ ಪಕ್ಷ ಬೇಧ ಮರೆತು ಆ ಮಸೂದೆಗೆ ನಾವೆಲ್ಲರೂ ಬೆಂಬಲ ಕೊಟ್ಟಿದ್ದೆವು. ಈ ವಿಧೇಯಕ ಯಾರ ಪರವಾಗಿದೆ ಸ್ವಾಮಿ? ಮಲ್ಯ ಆಸ್ಪತ್ರೆ, ಹೈಟೆಕ್ ಆಸ್ಪತ್ರೆಗಳ ಪರವಾಗಿದೆಯೇ? ತಿದ್ದುಪಡಿ ವಿಧೇಯಕದ 3ನೇ ಪುಟದಲ್ಲಿ 18ನೇ ಪ್ರಕರಣದ ತಿದ್ದುಪಡಿಯ 3ನೇ ಅಂಶದಲ್ಲಿ ಈ ಕೆಳಕಂಡಂತೆ ಹೇಳಲಾಗಿದೆ.

> "(3) ರಾಜ್ಯ ಸರ್ಕಾರವು, ಯಾವುದೇ ಕಾನೂನಿನಿಂದ ಅಥವಾ ಅದರಡಿ ರಚಿಸಲಾದ ಮತ್ತು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಮಂಡಲಿ, ಪ್ರಾಧಿಕಾರ ಅಥವಾ ನಿಕಾಯಕ್ಕೆ (1)ನೇ ಉಪ ಪ್ರಕರಣದಡಿ ನಿರ್ದಿಷ್ಟಪಡಿಸಲಾದ ಶುಲ್ಕದ ಸಂದಾಯದಿಂದ ವಿನಾಯಿತಿ ನೀಡಬಹುದು."

ಈ ವಿನಾಯಿತಿ ನೀಡತಕ್ಕಂಥ ಅಧಿಕಾರವನ್ನು ಸರ್ಕಾರ ಇಟ್ಟುಕೊಂಡಲ್ಲಿ, ಸರ್ಕಾರ ತನಗೆ ಬೇಕಾದವರಿಗೆ ವಿನಾಯಿತಿ ಕೊಡುತ್ತದೆ. ನಾಳೆ ದಿವಸ ಸರ್ಕಾರ ಅದಕ್ಕೊಂದು ಬ್ರಾಂಡ್ ಹಾಕಿ ಬಿಡುತ್ತದೆ. ಇವರು ಸಮಾಜಕ್ಕೆ ಭಾರೀ ಸೇವೆ ಸಲ್ಲಿಸುತ್ತಿದ್ದಾರೆಂದು ಸರ್ಕಾರ ಬ್ರಾಂಡ್ ಮಾಡುತ್ತದೆ. ನೀವೇ ಏನೇನು ಸೇವೆ ಸಲ್ಲಿಸುತ್ತಿದ್ದಾರೆ ಎಂದು ಪಟ್ಟಿ ಹೇಳುತ್ತೀರಿ. ಶ್ರೀ ಮಲ್ಯರವರು ಆಸ್ಪತ್ರೆ ಕಟ್ಟಿ ಬಿಟ್ಟು, ಜನಕ್ಕೆ ಹೈಟೆಕ್ ಟೆಕ್ನಾಲಜಿ ಕೊಟ್ಟು

ಉನ್ನತವಾದಂತಹ ಸೌಲಭ್ಯವನ್ನು ಕೊಡುತ್ತಿದ್ದಾರೆ, ಹಾಗಾಗಿ ಇಂತಹವರಿಗೆ ಏಕೆ ವಿನಾಯಿತಿ ಕೊಡಬಾರದು? ಎನ್ನುವಂತಹ ಒಂದು ವಾದವನ್ನು ಮುಂದಿಟ್ಟು, ಆ ದುಡ್ಡನ್ನೂ ಕೂಡ ಸರ್ಕಾರ ವಿನಾಯಿತಿ ಮಾಡಬಹುದು. ಏನು ಸ್ವಾಮಿ? ಇದು ಇದಕ್ಕೆ ಏನಾದರೂ ಅರ್ಥವಿದೆಯೇ? ನೀವು ಯಾರ ಪರವಾಗಿ ನಿಂತಿದ್ದೀರಿ? ಯಾರ ಪರವಾಗಿ ನಿಲ್ಲುತ್ತಿದ್ದೀರಿ? ಇದರಿಂದ ಯಾರಿಗೆ ಅನುಕೂಲವಾಗುತ್ತದೆ? ಆದುದರಿಂದ ದಯವಿಟ್ಟು ಈ ಬಿಲ್ಲನ್ನು ತಂದು ಜನರ ಮುಂದೆ ನೀವು ಅಪರಾಧಿಗಳಾಗಬೇಡಿ. ಇದು ಸಾಮಾನ್ಯ ಜನರಿಗೆ ಅನುಕೂಲವಾಗತಕ್ಕಂಥ ಬಿಲ್ ಏನಲ್ಲ. ಆದ್ದರಿಂದ ಈ ಬಿಲ್ಲನ್ನು ನಾವು ಖಂಡಿತವಾಗಿಯೂ ಕೂಡ ಒಪ್ಪಲಿಕ್ಕೆ ಸಾಧ್ಯವಿಲ್ಲ. ಸರ್ಕಾರ ಈ ವಿಧೇಯಕವನ್ನು ಹಿಂದಕ್ಕೆ ತೆಗೆದುಕೊಂಡು ಇದನ್ನು ಜಂಟಿ ಸದನ ಸಮಿತಿಗೆ ಒಪ್ಪಿಸಬೇಕೆಂದು ನಾನು ಕೋರುತ್ತೇನೆ.

ಶ್ರೀ ಕುಮಾರ್ ಬಂಗಾರಪ್ಪ (ಸೊರಬ) :— ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಯವರು ಮಾತನಾಡುವಾಗ demolition of top floor without affecting the ground floor ಬಗ್ಗೆ ಹೇಳಿದರು. ಕಟ್ಟಡದ ಕನ್‌ಸ್ಟ್ರಕ್ಷನ್ ಮಾಡಬೇಕಾದರೆ ಅವನು ಇಲ್ಲೀಗಲ್ಲಾಗಿ ಕನ್‌ಸ್ಟ್ರಕ್ಷನ್ ಮಾಡಿರುತ್ತಾನೆ. ಡೆಮಾಲಿಷನ್ ಮಾಡಬೇಕಾದರೆ ಮಾತ್ರ ಕೋರ್ಟ್ ಆದೇಶ ಇದೆ ಎಂದು ಹೇಳುತ್ತಾರೆ. without affecting the ground floor. ಡೆಮಾಲಿಷನ್ ಮಾಡಬೇಕೆಂದು ಹೇಳುತ್ತಾರೆ. Give him the responsibility. Without affecting the ground floor, let him demolish the top floor. ಅವನು ಕಟ್ಟಡ ಕಟ್ಟಬೇಕಾದರೆ ಅದನ್ನು ಚೆನ್ನಾಗಿಯೇ ಕಟ್ಟಬೇಕೆಂದು ಯೋಚನೆ ಮಾಡಿರುತ್ತಾನೆ. ಒಂದು ವೇಳೆ ಅವನು ಯಾರಿಗೋ ಒಬ್ಬರಿಗೆ ಆ ಬಿಲ್ಡಿಂಗ್ ಅನ್ನು ಮಾರಿಕೊಂಡಿರುತ್ತಾನೆ ಎಂದಿಟ್ಟುಕೊಳ್ಳಿ. Whoever is living in that building has to take the responsiblity of demolition of the top floor. ಇಲ್ಲದಿದ್ದರೆ ಏನಾಗುತ್ತದೆ ಎಂದರೆ, ಒಂದು ಕಡೆಯಿಂದ ನಾವು ಟಾಪ್ ಫ್ಲೋರ್ ಅನ್ನು ಆಥರೈಸ್ ಮಾಡುತ್ತೇವೆ ಎಂದು ಹೋಗುತ್ತೇವೆ, ಮತ್ತೊಂದು ಕಡೆಯಿಂದ ಡೆಮಾಲಿಷನ್ ಮಾಡಬೇಕೆಂದು ನಾವು ಇಲ್ಲಿ ಡಿಸ್ಕಷನ್ ಮಾಡುತ್ತೇವೆ. ಈಗ ನಾವು ಡೆಮಾಲಿಷನ್ ಮಾಡುವುದಕ್ಕೆ ಕಾಸ್ಟ್ ಜಾಸ್ತಿ ಆಗುತ್ತದೆಂದೂ ಸಹಾ ಮಾತನಾಡುತ್ತೇವೆ. ಕಾಸ್ಟೂ ಜಾಸ್ತಿಯಾಗುತ್ತದೆ, ಡೆಮಾಲಿಷನ್ನೂ ಕೂಡ ಮಾಡಬಾರದು, At the same time we will have to protect our own interest, i.e., the law. ಆದ್ದರಿಂದ give him the responsiblity, whoever it is. ಅದಕ್ಕೆ ಒಂದು ಲಕ್ಷ ಖರ್ಚಾಗುತ್ತದೋ, 10 ಲಕ್ಷ ರೂ. ಖರ್ಚಾಗುತ್ತದೋ, ಒಂದು ಕೋಟಿ ರೂ. ಖರ್ಚಾಗುತ್ತದೋ ಗೊತ್ತಿಲ್ಲ. Whoever is responsible directly for the construction of the building or the construction of the floor, ಅವನೇ ಅದನ್ನು ಭರಿಸಬೇಕಾಗುತ್ತದೆ. ಒಂದು ವೇಳೆ ಅವನು ಡೀವಿಯೇಷನ್ ತೆಗೆದುಕೊಂಡು ಕನ್‌ಸ್ಟ್ರಕ್ಷನ್ ಮಾಡಿದ್ದರೂ ಕೂಡ, ಅಥವಾ ಎಕ್ಸ್‌ಟ್ರಾ ಫ್ಲೋರ್ ಕನ್‌ಸ್ಟ್ರಕ್ಷನ್ ಮಾಡಿದ್ದರೂ ಕೂಡ let him take the responsiblity of the entire thing.

ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :— ಮಾನ್ಯ ಅಧ್ಯಕ್ಷರೇ, ಮಾನ್ಯ ಕಾಗೋಡು ತಿಮ್ಮಪ್ಪನವರು ಕೆಲವು ಲೀಗಲ್

ಇಶ್ಯೂಸ್ ಬಗ್ಗೆ ಇಲ್ಲಿ ಪ್ರಸ್ತಾಪಿಸಿದ್ದಾರೆ. Probably, I thought I should answer Sri Thimmappa. ಅವರು ನಿರ್ದಿಷ್ಟವಾಗಿ ಸೆಕ್ಷನ್ 14 (b) ಗೆ ಸಂಬಂಧಪಟ್ಟಂತೆ ಮಾತನಾಡಿದರು. ಇದು ಒಳ್ಳೆಯದು, ನಾವು ಇದನ್ನು ಮಾಡೋಣ ಎಂದು ಅವರು ಹೇಳಿದ್ದಾರೆ. ಆದರೆ ಡೆಮಾಲಿಷನ್ ಮಾಡುವುದನ್ನು ಬಿಟ್ಟು ರೆಗ್ಯೂಲರೈಸೇಷನ್ ಮಾಡಲಿಕ್ಕೆ ಮಾರ್ಕೆಟ್ ದರಕ್ಕಿಂತ ಎರಡು ಪಟ್ಟು ಕಲೆಕ್ಟ್ ಮಾಡುವ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. That is the one objection you have raised. ತಮಗೆಲ್ಲಾ ಗೊತ್ತಿರುವ ಹಾಗೆ, ಈ ಹಿಂದೆ 1981-82ರಲ್ಲಿ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ ವಿಧೇಯಕ ತಂದಾಗ ಜೋನಲ್ ರೆಗ್ಯುಲೇಷನ್. ಅನ್ನು ಮಾಡಲಾಗಿತ್ತು. ಆ ಟೈಮ್‌ನಲ್ಲಿ ಜೋನಲ್ ರೆಗ್ಯುಲೇಷನ್ ಅನ್ನು ಮಾಡಿದಾಗ, ಡಿಫರೆಂಟ್ ಏರಿಯಾಗಳನ್ನು ಅವರು ಮಾಡಿಕೊಂಡು ಯಾವ ಏರಿಯಾದಲ್ಲಿ ಎಷ್ಟು ಫ್ಲೋರ್ ಬರಬೇಕೆಂಬ ಬಗ್ಗೆ ಷೆಡ್ಯೂಲ್ ಅನ್ನು ಹಾಕಿದರು. ಆ ಸಂದರ್ಭದಲ್ಲಿ 1:3 ರೇಷಿಯೋವನ್ನು ಕೆಲವು ಏರಿಯಾಗಳಿಗೆ ಹಾಕಿದ್ದರು. Same Zonal Regulation Act came to be amended in the year 1985.ಆಗ 1:3 ರೇಷಿಯೋ ಯಾವ ಏರಿಯಾದಲ್ಲಿ ಇತ್ತೋ, ಆ ಏರಿಯಾದಲ್ಲಿ 1985ರಲ್ಲಿ ಜೋನಲ್ ರೆಗ್ಯುಲೇಷನ್‌ನಲ್ಲಿ ಅಮೆಂಡ್‌ಮೆಂಟ್ ತಂದಾಗ ಅದನ್ನು 1:7 ಎಂದು ಮಾಡಿದರು. 4 ಫ್ಲೋರ್ ಇರತಕ್ಕದ್ದು ಆಗ 7 ಫ್ಲೋರ್ಸ್ ಆಯಿತು. Sir, between 1981 and 1986, between the period of amendment, ಆ ಜೋನಲ್ ರೆಗ್ಯುಲೇಷನ್ಸ್ ಅನ್ನು ವಯಲೇಟ್ ಮಾಡಿದರು. ಹಾಗೆ ವಾಯಲೇಟ್ ಮಾಡುವಂತಹ ಸಂದರ್ಭದಲ್ಲಿ 4 ಫ್ಲೋರ್ ಕಟ್ಟಿಕೊಳ್ಳುವ ಬದಲಾಗಿ 6 ಫ್ಲೋರ್ ಕಟ್ಟಿದರು, 4 ಫ್ಲೋರ್ ಕಟ್ಟುವಲ್ಲಿ 5 ಫ್ಲೋರ್ ಕಟ್ಟಿದ್ದಾರೆ, 7 ಫ್ಲೋರ್‌ಗಳನ್ನೂ ಕೂಡ ಕಟ್ಟಿದ್ದಾರೆ. 1986 ರಲ್ಲಿ, ಆ 4 ಫ್ಲೋರ್ ಇದ್ದಂತಹ ಜಾಗದಲ್ಲಿ ಅದೇ ಜೋನ್‌ನಲ್ಲಿ, 7 ಫ್ಲೋರ್‌ಗಳನ್ನು ಕಟ್ಟಬಹುದು ಎಂದು ನೀವು ತಿದ್ದುಪಡಿ ಮಾಡಿಕೊಂಡಿರಿ. Then what happened? ವಾಯಲೇಷನ್ ಮಾಡಿರತಕ್ಕಂಥ ಕೆಲವು ಕೇಸ್‌ಗಳು ಆದವು. ಕೆಲವು ಹೈಕೋರ್ಟ್‌ಗೆ ಹೋಯಿತು; ಹೈಕೋರ್ಟ್‌ನಿಂದ ಹಿಂದಕ್ಕೆ ಬಂದಿತ್ತು. ಮಾನ್ಯ ಮಿತ್ರರೊಬ್ಬರು ಮಾತನಾಡುವಾಗ ಆಗಲೇ ಭಕ್ತಾರಾಮ್ ಕೇಸ್ ವಿಷಯವನ್ನು ಇಲ್ಲಿ ಪ್ರಸ್ತಾಪಿಸಿದರು; ಆ ಭಕ್ತಾರಾಮ್ ಕೇಸ್ ಸುಪ್ರೀಂ ಕೋರ್ಟಿಗೆ ಹೋಗಿ ಬಂದಾದ ಮೇಲೆ, ಕಡೆಗೆ ಇದೇ ಸದನದಲ್ಲಿ ನಾವು ಏನು ಮಾಡಿದೆವು ಎಂದರೆ, ಡೆಮಾಲಿಷನ್ ಮಾಡುವುದಕ್ಕೆ ಆಗುವುದಿಲ್ಲ, ನಾವು ಆ ಸಂದರ್ಭದಲ್ಲಿ ಏನು ಮಾಡಬೇಕಾಗುತ್ತದೆ ಎಂದು ಯೋಚಿಸಿ. ಈ Zonal Regulations from time to time amendment ಆಗುತ್ತಾ ಬಂತು; 4 ಇರತಕ್ಕಂಥದ್ದು 7 ಆಗಿದೆ, 4ನ್ನು ಕಟ್ಟುವ ಸಂದರ್ಭದಲ್ಲಿ 7ನ್ನು ಕಟ್ಟಿದ್ದಾನೆ, ಆದ್ದರಿಂದ ನಾವು ಅದನ್ನು ರೆಗ್ಯೂಲರೈಸ್ ಮಾಡಬೇಕೆಂದು ಹೇಳಿ ಇದೇ ಸದನದಲ್ಲಿ ನಾವು ಅಮೆಂಡ್‌ಮೆಂಟ್ ಅನ್ನು ಮಾಡಿ ಅದಕ್ಕೆ ತಿದ್ದುಪಡಿಯನ್ನು ತಂದು ನಾವು one and a half times of the then market value ಏನಿತ್ತು, ಅದನ್ನು ಕಲೆಕ್ಟ್ ಮಾಡಿಕೊಂಡು ನೀವು ಅದನ್ನೆಲ್ಲಾ ರೆಗ್ಯೂಲರೈಸ್ ಮಾಡಿಕೊಳ್ಳಿ ಎಂಬ ತಿದ್ದುಪಡಿಯನ್ನು ನಾವು ಇದೇ ಸದನದಲ್ಲಿ ಪಾಸ್ ಮಾಡಿದೆವು. ಎರಡನೆಯದಾಗಿ, ಡೆಮಾಲಿಷನ್ ಮಾಡಬೇಕು ಎನ್ನುವಂತಹ ಸಂದರ್ಭದಲ್ಲಿ, Where there is absolute violation, you cannot even regularise at all. ಅಂತಹ ಸಂದರ್ಭ ಬಂದಾಗ

ಏನು ಮಾಡಬೇಕು ಎಂದು ಯೋಚಿಸಿ, ಅದನ್ನು ಡೆಮಾಲಿಷ್ ಮಾಡಬೇಕು ಎಂದು ಬಂದಾಗ, the matter was agitated in the High Court. ಮಾನ್ಯ ಜಸ್ಟೀಸ್ ಸಲ್ದಾನಾರವರ ಈ ಬಗೆಗಿನ ಹೈಕೋರ್ಟಿನ ಜಡ್ಜ್‌ಮೆಂಟ್ ತಮಗೆಲ್ಲಾ ಗೊತ್ತಿರಲೇ ಬೇಕು. It has become final.ಅವರೇನು ಹೇಳುತ್ತಾರೆಂದರೆ,

12.50 ಪಿ.ಎಂ.

``Since the government and the public authorities are equally in need of commercial and residential accomodations....."

This is the last paragraph of the judgement.

"....that an example be made as is done under the Income Tax Act by confiscating the offending properties instead incurring heavy expenditure and want on loss by merely seeking a demolition which is in fact rarely ever done. In those of the cases where demolition is inadvisable such as high-rise buildings where the forfeiture clause is applied in appropriate cases, an option may be provided when interested parties want to retain the premises by paying the redemption fine which shall be equivalent to two times of the current market value, it is recommended that the State Government should seriously consider incorporating the requisite amemdments in the law immediately so that action along with the constructive lines than those for which provision is to-day made, can be undertaken as this is imminent in the public interest."

ನಾನೂ ಸಹ ಅದನ್ನೇ ಹೇಳುತ್ತಿದ್ದೇನೆ. ಏಕೆಂದರೆ, ಯಾವುದನ್ನೂ ಡಿಮಾಲಿಷ್ ಮಾಡಲಿಕ್ಕಾಗುವುದಿಲ್ಲ. ನಿಮ್ಮ ಚಿಂತನೆಗೆ ಸಂಬಂಧಪಟ್ಟಹಾಗೆ ನಾವು ಹೇಳುತ್ತಿದ್ದೇವೆ. ನಾವು ಈ ಆಕ್ಟನ್ನು ತಂದಿದ್ದೇವೆ. ಸೆಕ್ಷನ್ 14(ಬಿ) ಗೆ ಸಂಬಂಧಪಟ್ಟ ಹಾಗೆ, ಶ್ರೀ ಸುರೇಶ್ ಕುಮಾರ್‌ರವರು ಬಹಳ ವಿಚಾರ ಹೇಳಿದರು. ಯಾವುದೋ ಒಂದನ್ನು ಗಮನದಲ್ಲಿಟ್ಟುಕೊಂಡು ತಂದಿರಿ ಎಂದು Probably you should look to the provisions of the other States also, like Maharastra, Gujarat, Delhi Tourism today is one of the most attractive propositions. ನಮ್ಮಲ್ಲಿ ಟೂರಿಸ್ಟ್ ಇನ್‌ಕಂ ಎಂದು ಹೇಳುವುದನ್ನು ನಾವಿನ್ನೂ ಎಕ್ಸ್‌ಪ್ಲಾಯಿಟ್ ಮಾಡಿಲ್ಲ. We need have to do that. Have an objective analysis. Let us look at it objectively.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಟೂರಿಸಂಗೂ, ಇದಕ್ಕೂ ಏನು ಸಂಬಂಧ?

ಶ್ರೀ ಎಂ.ಸಿ. ನಾಣಯ್ಯ :— ಇವತ್ತು ಸೋಷಿಯಲಿಸಂ, ಕಮ್ಯುನಿಸಂ, ಫಿಲಾಸಫಿ ಎಂದು ಹೇಳುತ್ತಿರುವ ಸಂದರ್ಭದಲ್ಲಿ I am as much aware of it as you are aware of it now ಈ ಒಂದು ಪ್ರಾವಿಜನ್‌ನ್ನು ಮೊದಲು ಮಾಡುವ ಸಂದರ್ಭದಲ್ಲಿ, in almost all the states, tourist attracting centres, ಬಂದಾಗ, ಅವರಿಗೆ ಫ್ಲೋರ್ ಏರಿಯಾ ಇಲ್ಲ. Then what should be done? you have one more floor. In certain places, you have one more floor. What is the total area covered under that? 100%, pay the market value of it and then do that ಎಂದು ಮಾಡುವ ಸಂದರ್ಭದಲ್ಲಿ, ರೆಗ್ಯುಲರೈಜೇಷನ್ ಪ್ರೋಸೆಸ್ ಎಂದು ಹೇಳುವ ಸಂದರ್ಭ ಆ ಸಮಯದಲ್ಲಿ ಬಂತು. ನಂತರ, ನೀವೇನು ಮಾಡಿದಿರಿ, Why should you select a few tourist hotels? It may give a wrong signal. It came up for discussion on the Floor of this House. ಇದೇ ಸದನದಲ್ಲಿ ತಾವು ಚರ್ಚೆ ಮಾಡಿದಿರಿ. ಆ ಟೈಂನಲ್ಲಿ, tourist attraction was was a predominant factor. ಆದರೂ ಕೂಡ, when such a provision is there in almost of the Acts of Maharastra, Delhi, Gujarat, let me tell you, you can go through the Act now; At the time of preparing it, of course, we had a loot at that. I think, you enlarge the scope of it. Why should you confine it only on this? Perhaps some educational institutions ಆ ಎಜ್ಯುಕೇಷನ್ ಇನ್ಸ್‌ಟಿಟ್ಯೂಷನ್ಸ್‌ನಿಂದ ಬಂದಾಗ, ಎಲ್ಲಾದರೂ ಈ ತರಹ ಅವಕಾಶ ಸಿಕ್ಕಿದಾಗ, why should you not do that? There are certain super speciality hospitals now. Yes, in Bangalore so many super speciality hospitals are coming up now. We cannot say no to that. If they are prepared to pay 100% of the market value of it.. ಅಂಥ ಸಂದರ್ಭದಲ್ಲಿ, ಅವರಿಗಿರುವ ಏರಿಯಾ ಕೊಟ್ಟು, ನೀವು ಮಾಡಲಿಕ್ಕೆ ಇರುವುದೇನು?

ಶ್ರೀ ಕಾಗೋಡು ತಿಮ್ಮಪ್ಪ :— ಈ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಇರುವುದು ಯಾರ ಉದ್ಧಾರಕ್ಕಾಗಿ?

ಶ್ರೀ ಎಂ.ಸಿ. ನಾಣಯ್ಯ :— ಶ್ರೀ ಸತ್ಯ ಸಾಯಿಬಾಬಾರವರು ಪುಟ್ಟಪರ್ತಿಯಲ್ಲಿ ಸೂಪರ್ ಸ್ಪೆಷಾಲಿಟಿ ಹಾರ್ಟ್ ಹಾಸ್ಪಿಟಲ್‌ನ್ನು ಕಟ್ಟಿಸಿದ್ದಾರೆ supposed to be the best in Asia. ಯಾರಿಗಾಗಿ ಮಾಡುತ್ತಿದ್ದಾರೆ? ವೈಟ್ ಫೀಲ್ಡ್‌ನಲ್ಲಿ ಸೂಪರ್ ಸ್ಪೆಷಾಲಿಟಿ ಹಾಸ್ಪಿಟಲ್ ತೆರೆಯಬೇಕೆಂದು ಸರ್ಕಾರ ತೀರ್ಮಾನಿಸಿದೆ. ಅಲ್ಲಿಗೆ ಯಾರು ಬರುತ್ತಾರೆ? All of them will be poor. ನಾವು ಇದರ ಬಗ್ಗೆ ಚಿಂತನೆ ಮಾಡೋಣ. Super speciality hospitals, there are certain persons who are coming forward. ಅವರಲ್ಲಿರುವ, ಅವರಲ್ಲೋ ಒಂದು ಕಡೆ ಮಾಡಿರುವ ಹಣವನ್ನು ನಾವು ಖರ್ಚು

ಮಾಡುತ್ತೇವೆ; ಬಡವರಿಗೆ ಸಹಾಯ ಮಾಡುತ್ತೇವೆಂದು ಹೇಳಿ ದೊಡ್ಡ ಆಸ್ಪತ್ರೆ ಕಟ್ಟುವ ಸಂದರ್ಭದಲ್ಲಿ, ರಾಜ್ಯ ಸರ್ಕಾರವನ್ನು ಫೆಸಿಲಿಟಿ ಕೇಳಿದಾಗ, should we say `No' to that?

ಶ್ರೀ ಟಿ.ಬಿ. ಜಯಚಂದ್ರ :— ಅವರು ಹಳ್ಳಿಯಲ್ಲಿ ಕಟ್ಟಿದ್ದಾರೆ. ಪಟ್ಟಣದಲ್ಲಲ್ಲ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಪುಟ್ಟಪರ್ತಿಯಲ್ಲಿ ಇಲ್ಲೀಗಲ್ ಕಟ್ಟಡ ಕಟ್ಟಿಲ್ಲ.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ :— ನೀವು ಜನರಲ್ ಕಾರ್ಯಪ್ಪನವರು ಹುಟ್ಟಿದ ಸ್ಥಳದಿಂದ ಬಂದು, ಇವತ್ತು ಈ ತರಹ ಮಾತನಾಡಿದರೆ ಹೇಗೆ?

ಶ್ರೀ ಎಂ.ಸಿ. ನಾಣಯ್ಯ :— ಜನರಲ್ ಕಾರ್ಯಪ್ಪನವರು ಹುಟ್ಟಿದ ಊರಿನಲ್ಲಿ ನಾನು ಹುಟ್ಟಲಿಲ್ಲವಲ್ಲಾ? ನನಗೆ ಅದೇ ಬೇಸರವಾಗಿದೆ. ಅಲ್ಲಿ ನಾನು ಹುಟ್ಟಬೇಕಿತ್ತು.

ಶ್ರೀ ಕಾಗೋಡು ತಿಮ್ಮಪ್ಪ :— ಒಂದು ಕಾಫಿ ತೋಟ ಮಾಡುವುದಕ್ಕೆ ಒಂದು ಕಲ್ಚರ್ ಇದೆ. ತಾವು ಆ ಭೂಮಿಯಿಂದ ಬಂದಿದ್ದೀರಿ. You are speaking something which is going beyond that.

ಶ್ರೀ ಎಂ.ಸಿ. ನಾಣಯ್ಯ :— ನಿಮ್ಮ ಸೋಷಿಯಲಿಸ್ಟ್ ಫಿಲಾಸಫಿ ಕಾಲದಲ್ಲಿ ಆ ಕಾಫಿ ಬೆಳೆಯುವುದರ ವಿರುದ್ಧ ತಾವೇ ಇದ್ದೀರಿ!

ಅಧ್ಯಕ್ಷರು :— ಮಾನ್ಯ ಗೋಪಾಲಗೌಡರ ಊರಿನಿಂದ ಬಂದವರಿಗೆ ಈ ಗತಿ ಬಂತು, ಅವರಿಗೆ ಆ ಗತಿ ಬಂತು, ಇದನ್ನೆಲ್ಲಾ ನೋಡುವ ಗತಿ ನನಗೆ ಬಂತು!

SRI M.C. NANAIAH :— One more salient feature of this Act. Kindly look into that. 14(ಬಿ) ಬಗ್ಗೆ ಕೇಳಿದಿರಿ. ಆದಾದಮೇಲೆ, ಸಬ್-ಕ್ಲಾಸ್ (2), you look to the proviso. What is the proviso? Which is the land you are going to give? Which is the land you are supposed to regularise?

"Provided further that no condonation in any open space, set back and parking and other requirements in the Zonal Regulations of the development plan shall be allowed in case of grant of such additional floor area ratio."

Have you seen that? ಇದನ್ನು ಮಾಡಬೇಕಾದರೆ, ಪಾರ್ಕಿಂಗ್ ಇರುವ ಪ್ಲೇಸ್, ಸೆಟ್ ಆಫ್ ಇರುವ ಪ್ಲೇಸ್, ಎಲ್ಲವನ್ನೂ, you are not supposed to give. Sir, we have made a provision. ಪ್ರತಿಯೊಂದನ್ನೂ ಮಾಡುವಾಗ ಯೋಚಿಸುತ್ತೇವೆ. ಇವರು ಯೋಚಿಸುವುದಕ್ಕಿಂತ ಮುಂಚೆ ನಾವು ಯೋಚನೆ ಮಾಡುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್ :— ಅಲ್ಲಿ ಪಾರ್ಕಿಂಗ್ ಭಾಗ ಇಲ್ಲ. ನೀವೇನು ಪಾರ್ಕಿಂಗ್ ಪ್ಲೇಸ್ ಉಳಿಸುತ್ತೀರಿ? Take for example Mallya Hospital.

SRI M.C. NANAIAH :— I don't know which Hospital you are referring to.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮಲ್ಯ ಆಸ್ಪತ್ರೆಗೆ ಪಾರ್ಕಿಂಗ್‌ಗೆ ಜಾಗವಿಲ್ಲದೆ, ಬಿಲ್ಡಿಂಗ್‌ಗೆ ಹೇಗೆ ಪರ್ಮಿಷನ್ ಕೊಟ್ಟಿರಿ? ಕಂಠೀರವ ಸ್ಟೇಡಿಯಂಗೆ ಕೊಟ್ಟಿಲ್ಲವೆಂದು ಹೇಳಿ, ಅಲ್ಲಿ ಕೊಟ್ಟಿರಿ.

ಶ್ರೀ ಎಂ.ಸಿ. ನಾಣಯ್ಯ :— ಒಂದು ಕಾಯಿದೆಯನ್ನು ತರುವಾಗ ಅದರಲ್ಲಿರುವ ಎಲ್ಲಾ ಕ್ಲಾಜ್‌ನ್ನು ಸಮಗ್ರವಾಗಿ ಓದಿ.

ಅಧ್ಯಕ್ಷರು :— ಅಂತಿಮವಾಗಿ ಅವರು ಜೆಎಸ್‌ಸಿಗೆ ಕಳುಹಿಸಿ ವಿತ್‌ಡ್ರಾ ಮಾಡಿಕೊಳ್ಳಿ ಎಂದರು. Are you agreeable? Otherwise I will go through the procedure.

ಶ್ರೀ ಎಂ.ಸಿ. ನಾಣಯ್ಯ :— ನಾನು ಈ ವಿಚಾರವನ್ನು ಹೇಳಿದ ನಂತರ, I think there is some considerable force in what the government says; if they think, they themselves may withdraw. ಕೆಲವು ಸಂದರ್ಭಗಳಲ್ಲಿ ಹೇಳುತ್ತಾರೆ; It is our responsibility to convince you. ಆದ್ದರಿಂದ, ನಾವು ಹೇಳುತ್ತಿದ್ದೇವೆ. We have done all these things in public interest. ದಯವಿಟ್ಟು ಒಂದನ್ನು ಯೋಚನೆ ಮಾಡಬೇಕು. ಎಲ್ಲೋ ಒಂದು ಕಡೆ ಕಾನೂನು ಮಾಡುವ ಸಂದರ್ಭದಲ್ಲಿ 20 ವರ್ಷಗಳ ಹಿಂದೆ ನಡೆದಿರುವ ವಿಚಾರಗಳನ್ನು ಈಗ ಇಟ್ಟುಕೊಂಡು, ಡೆಮಾಲಿಶ್ ಮಾಡಿ ಎಂದು ಹೇಳುವುದು ಬೇಡ.

ಅಧ್ಯಕ್ಷರು :— ಡಿಮಾಂಡ್ಸ್ ಬಗ್ಗೆ ಚರ್ಚೆ ಮುಂದುರಿಸಬೇಕೆಂದು ಇವತ್ತು ಒಂದು ಗಂಟೆ ಮುಂಚಿತವಾಗಿ ಸದನದ ಸಭೆಯನ್ನು ಶುರು ಮಾಡಿದೆ.

ಶ್ರೀ ಕಾಗೋಡು ತಿಮ್ಮಪ್ಪ :— ನೀವು ಮಾನ್ಯ ಶ್ರೀ ಎಂ.ಎಫ್. ಸಾಲ್ಡಾನಾರವರ ಜಡ್ಜ್‌ಮೆಂಟ್‌ನ್ನು ಕೋಟ್ ಮಾಡಿದಿರಿ. ಟು ಟೈಮ್ಸ್ ಆಫ್ ದಿ ಮಾರ್ಕೆಟ್ ವ್ಯಾಲ್ಯೂ ಎಂದು ಹೇಳಿದರು. ಅದಕ್ಕೆ ರೀಜನ್ ಇಲ್ಲ, ಜಡ್ಜ್‌ಮೆಂಟ್ ಇದೆ. ಆಯಿತು, ಅವರು ಜಡ್ಜ್ ಆಗಿ ಏನು ಹೇಳುತ್ತಾರೋ, ಅದೆಲ್ಲಾ ದೇವರಿಂದ ಬಂದ ಹಾಗಾಗುತ್ತದೆ. ಆದರೆ, ನಾವು ಲೆಜಿಸ್ಲೇಟರ್ಸ್. ನಮಗೆ ಲೆಜಿಸ್ಲೇಷನ್ ಮಾಡುವ ಅಧಿಕಾರವಿದೆ. ನಿಮಗೆ ಆ ಸೆನ್ಸ್ ಆಫ್ ಅಂಡರ್ ಸ್ಟ್ಯಾಂಡಿಂಗ್ ಇದೆಯಲ್ಲಾ, ಇಷ್ಟು ಕಟ್ಟಿದ್ದಾರೆ, ಆಗಿ ಹೋಯಿತು, ಒಡೆಯುವುದು ಬೇಡ ಎಂದರೆ ಒಂದು ಕೆಲಸ ಮಾಡಿ, ತಾವು ದಾನಶೂರ ಕರ್ಣರು, ವಿಶಾಲ ಹೃದಯವುಳ್ಳವರು, ಆದ್ದರಿಂದ ಕ್ಲಾಜ್ ಏನಿದೆ, `not less than market value' ಅದನ್ನು ತೆಗೆದು ಹಾಕಿ, `not more than two times the market value'ಉಳಿದಿದ್ದು ತೆಗೆಯಿರಿ. ಮತ್ತೊಂದು ಸಾರಿ ನಿಮ್ಮ ಬಳಿ ಬರುವುದೇಕೆ? It is not in advisable ಇದೆಲ್ಲಾ ಹೇಳಿಕೊಂಡು ತರುವುದೇಕೆ? ಒಬ್ಬ ಅಧಿಕಾರಿ.....

ಶ್ರೀ ಎಂ.ಸಿ. ನಾಣಯ್ಯ :— ಏನು ಮಾಡಬೇಕೆಂದು ಹೇಳುತ್ತೀರಿ?

ಶ್ರೀ ಕಾಗೋಡು ತಿಮ್ಮಪ್ಪ :— ಈಗ ನೀವು ಯಾವುದು ವಯಲೇಷನ್ ಆಗಿದೆ ಅದನ್ನು ರೆಗ್ಯುಲರೈಜ್ ಮಾಡುವುದಕ್ಕೆ ಹೊರಟಿದ್ದೀರಿ. ಎಲ್ಲವನ್ನೂ ಮಾಡಿ. ಪೀಸ್ ಮೀಲ್ ಬೇಡ.

ಶ್ರೀ ಎಂ.ಸಿ. ನಾಣಯ್ಯ :— ನಮಗೂ, ನಿಮಗೂ ಇರುವ ವ್ಯತ್ಯಾಸವಿಷ್ಟೆ. ಇದರಲ್ಲಿ ಆಪ್ಷನ್ ಕೊಡುವ ಸಂದರ್ಭ ಬಂದಾಗ, forfeiture clause ಇಟ್ಟುಕೊಂಡು ಏಕೆ ಕೊಡುತ್ತೀರಿ ಎಂದು. ಆ ಕ್ಲಾಜ್ ಇಲ್ಲದೇ ಹೋದರೆ, ಬರೀ ಆಫ್ಷನ್ ಟೂ ಟೈಮ್ಸ್ ಎಂದು ಇಟ್ಟುಕೊಂಡರೆ if he refuses to do that, then what will happen?

ಶ್ರೀ ಕಾಗೋಡು ತಿಮ್ಮಪ್ಪ :— ಟೂ ಟೈಮ್ಸ್ ಮಾರ್ಕೆಟ್ ವ್ಯಾಲ್ಯು ಕೊಟ್ಟು ಎಲ್ಲವನ್ನೂ ರೆಗ್ಯುಲರೈಜ್ ಮಾಡಿ. ನಿಮ್ಮ ಪಾದಕ್ಕೆ ಅವರೇಕೆ ಬರಬೇಕು?

SRI M.C. NANAIAH :— You did not catch me. ಆ ಕ್ಲಾಜ್ ಅನ್ನು ನಾವು ಇಟ್ಟುಕೊಳ್ಳಬೇಕಾಗುತ್ತದೆ. It is the responsibility of the government to forfeit it. Subsequently we are giving the option to you. I think there is nothing wrong in that particular provision.

ಶ್ರೀ ಕಾಗೋಡು ತಿಮ್ಮಪ್ಪ :— ಅದನ್ನು ಫೋರ್‌ಫೀಟ್ ಮಾಡುವುದಕ್ಕೆ ನಿಮಗೆ ಅವಕಾಶವಿದೆ; ಮಾಡಿಕೊಳ್ಳಿ. ನೀವು ಇಟ್ಟುಕೊಳ್ಳುತ್ತೀರಾ, ಇಲ್ಲ. ಮತ್ತೆ ಪ್ರಾವಿಷನ್ ಮಾಡಿಕೊಂಡಿದ್ದೀರಿ; ಅವನಿಗೆ ವಾಪಸ್ ಕೊಡಬಹುದು ಎಂದು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :— ಅವನಿಗೇ ಅಲ್ಲ. ಯಾರಿಗೆ ಬೇಕಾದರೂ ಕೊಡಬಹುದು.

(ಗೊಂದಲ)

SRI M.C. NANAIAH :— This is an enabling provision. ಸರ್ಕಾರ ಈ ರೀತಿ ಮಾಡಬೇಕಾದರೆ ಏನೇಬ್ಲಿಂಗ್ ಪ್ರಾವಿಜನ್ ಪ್ರತಿಯೊಂದು ಲೆಜಿಸ್ಲೇಷನ್‌ಗೆ ಸರ್ಕಾರ ಈ ರೀತಿ ಬೇಕೇಬೇಕಾಗುತ್ತದೆ. ನಾಳೆದಿವಸ ಹೈಕೋರ್ಟಿಗೆ ಹೋದಾಗ ಏನೇಬ್ಲಿಂಗ್ ಪ್ರಾವಿಜನ್ ಇಲ್ಲದೇ ಇದ್ದರೆ ಅಮೆಂಡ್‌ಮೆಂಟ್ ತರಬೇಕಾಗುತ್ತದೆ. It is an enabling clause now.....

MR. SPEAKER :— You are not agreeable for sending it to the Joint Select Committee.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಅಧ್ಯಕ್ಷರೆ, ಈಗ ಅವರೂ ಕೂಡ ಅಷ್ಟೊಂದು ತರಾತುರಿಯಲ್ಲಿ ಇಲ್ಲ. ಆದ್ದರಿಂದ, ಇದಕ್ಕೆ ಮೈಂಡ್ ಅಪ್ಲೆ ಮಾಡಿ ಒಂದು

ಕಾನೂನನ್ನು ಮಾಡಬೇಕಾದರೆ ಎಲ್ಲರೂ ಕುಳಿತುಕೊಂಡು ವಿಚಾರ ಮಾಡಿ ಇದರ ಮೇಲೆ ಒಂದು ನಿರ್ಣಯ ತೆಗೆದುಕೊಳ್ಳಬೇಕು. ಅದಕ್ಕಾಗಿ, ಇದನ್ನು ಜಂಟಿ ಸದನ ಸಮಿತಿಗೆ ರೆಫರ್ ಮಾಡಿದರೆ ಒಳ್ಳೆಯದು. ಇದರಿಂದ ಏನೂ ತೊಂದರೆಯಾಗುವುದಿಲ್ಲ.

SRI M.C. NANAIAH :— Let us not delay the legislation. We should not delay the legislation.

ಶ್ರೀ ಕಾಗೋಡು ತಿಮ್ಮಪ್ಪ :— ಇದನ್ನು ಜಂಟಿ ಸದನ ಸಮಿತಿಗೆ ರೆಫರ್ ಮಾಡುವುದರಿಂದ ಯಾರೂ ಸಹ ಅಳುವುದಿಲ್ಲ. ಯಾರೂ ಕೂಡ ಉಪವಾಸ ಮಾಡುವುದಿಲ್ಲ ಮತ್ತು ಇದರಿಂದ ಯಾರಿಗೂ ಕೂಡ ತೊಂದರೆಯಾಗುವುದಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ :— ಮಾನ್ಯ ಅಧ್ಯಕ್ಷರೆ, ನಾವು ಬಹಳ ಕಳಕಳಿಯಿಂದ ಆಡಳಿತ ಪಕ್ಷಕ್ಕೆ ಮನಮುಟ್ಟುವಂತೆ ತಿಳಿಸಿದ್ದೇವೆ. ಪ್ರಾಯಶಃ ಮಾನ್ಯ ನಾಣಯ್ಯನವರನ್ನು ಇದಕ್ಕೋಸ್ಕರವೇ ಸಂಪುಟದಲ್ಲಿಟ್ಟುಕೊಂಡಿದ್ದಾರೆ. You will try to convince even the insensible thing. ಇದೊಂದು ಅನಗತ್ಯ, ಅನಪೇಕ್ಷಣೀಯವಾದ ಮಸೂದೆ ಮತ್ತು ಅನಧಿಕೃತ ಕಟ್ಟಡಕ್ಕೆ ಕುಮ್ಮಕ್ಕು ಕೊಡುವಂತಹ ಮಸೂದೆಯಾಗಿದೆ. ಹಾಗೆಯೇ ಆಡಳಿತ ಪಕ್ಷಕ್ಕೆ ಚುನಾವಣೆ ಫಂಡ್‌ಗೆ ದುಡ್ಡು ಸೇರಿಸುವಂಥ ಒಂದು ಮಸೂದೆಯಾಗಿದೆ. ಆದ್ದರಿಂದ, ನಾವೆಲ್ಲಾ ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಬಿ.ಜೆ.ಪಿ.ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

(ಗೊಂದಲ)

ಶ್ರೀ ಎಂ.ಸಿ. ನಾಣಯ್ಯ :— ದೇಶಕ್ಕೆ ಬೆಂಕಿ ಹಾಕಿ ಹಣ ಮಾಡತಕ್ಕಂಥ ಜನ ನೀವು, ನಾವಲ್ಲ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ :— ಈ ಮಸೂದೆಯನ್ನು ನಾನು ವಿರೋಧ ಮಾಡಿ ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಶ್ರೀರಾಮರೆಡ್ಡಿಯವರು ಸಭಾತ್ಯಾಗ ಮಾಡಿದರು)

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಇದನ್ನು ಜಂಟಿ ಸದನ ಸಮಿತಿಗೆ ರೆಫರ್ ಮಾಡಿ. ಏಕೆಂದರೆ, ನಮ್ಮವರೂ ಕೂಡ ಇದರಲ್ಲಿ ಒಳ್ಳೆಯ ಸಲಹೆಗಳಿವೆ ಎಂದು ಒಪ್ಪಿಕೊಂಡಿದ್ದಾರೆ. ಆದ್ದರಿಂದ, ಜಂಟಿ ಸದನ ಸಮಿತಿಗೆ ರೆಫರ್ ಮಾಡುವುದಕ್ಕೆ ಏನು ತೊಂದರೆ? ಭೂಸುಧಾರಣೆ ಮತ್ತು ಅರ್ಬನ್ ಸೀಲಿಂಗ್ ಪ್ರೈವೇಟ್ ಆಸ್ಪತ್ರೆಗಳ ಬಗ್ಗೆ ಅದನ್ನು ನಾವು ಸಮಿತಿಗೆ ರೆಫರ್ ಮಾಡುತ್ತೇವೆ. ಆದ್ದರಿಂದ, ಇದನ್ನು ಏಕೆ ಮಾಡಬಾರದು?

MR. SPEAKER :— They are not agreeable. ನಾನೇನು ಮಾಡುವುದು ನೀವೇ ಹೇಳಿ.

MR. MALLIKARJUNA KHARGE :— The government is not ready to refer it to the Joint Select Committee. They are not ready to discuss it fully. There is no other alternative. We protest and walk out.

(ಈ ಹಂತದಲ್ಲಿ ಕಾಂಗ್ರೆಸ್ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಅಧ್ಯಕ್ಷರು :— ಪ್ರಸ್ತಾಪ ಏನೆಂದರೆ, "ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು."

<u>ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು</u>

<u>ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು</u>

<u>ಖಂಡ-2ಕ್ಕೆ ತಿದ್ದುಪಡಿ</u>

ಶ್ರೀ ಎಂ.ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) :— ಖಂಡ 2ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ನಾನು ಮಂಡಿಸುತ್ತೇನೆ.

"2ನೇ ಖಂಡದಲ್ಲಿ" (ii)ನೇ ಉಪಖಂಡಕ್ಕೆ, ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:-

``(ii) "ಮಂಡಲ ಪಂಚಾಯಿತಿ" ಎಂಬ ಪದಗಳಿಗೆ "ಪಟ್ಟಣ ಪಂಚಾಯಿತಿ ಮತ್ತು ಗ್ರಾಮಪಂಚಾಯಿತಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

ಅಧ್ಯಕ್ಷರು ಪ್ರಸ್ತಾಪ ಏನೆಂದರೆ, ``2ನೇ ಖಂಡದಲ್ಲಿ (ii) ನೇ ಉಪಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು ಎಂದರೆ:- ``(ii)"ಮಂಡಲ ಪಂಚಾಯಿತಿ" ಎಂಬ ಪದಗಳಿಗೆ "ಪಟ್ಟಣ ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿ" ಎಂಬ ಪದಗಳನ್ನು ನಿಯೋಜಿಸತಕ್ಕದ್ದು."

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.</u>

<u>ಖಂಡ-2 ತಿದ್ದುಪಡಿಯಾದ ರೀತಿಯಲ್ಲಿ</u>

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "ಖಂಡ-2 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ"

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ-2 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.</u>

ಖಂಡ-3

ಅಧ್ಯಕ್ಷರು :— ಪ್ರಸ್ತಾಪ ಏನೆಂದರೆ "ಖಂಡ-3 ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ-3 ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ-4 ಕ್ಕೆ ತಿದ್ದುಪಡಿ

ಶ್ರೀ ಎಂ.ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) :— ಖಂಡ 4ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ:-

"4ನೇ ಖಂಡದಲ್ಲಿ ಸೇರಿಸಲು ಉದ್ದೇಶಿಸಲಾದ 14-ಬಿ ಪ್ರಕರಣದಲ್ಲಿ,

(i) (1) ನೇ ಉಪ-ಪ್ರಕರಣದಲ್ಲಿ "ಶೇಕಡಾ ನೂರರಷ್ಟು ಹೆಚ್ಚಿನ ನೆಲ ಪ್ರದೇಶ ಅನುಪಾತವನ್ನು (ಫ್ಲೋರ್ ಏರಿಯಾ ರೇಷಿಯೋ)" ಎಂಬ ಪದಗಳಿಗೆ "ಶೇಕಡಾ ನೂರರಷ್ಟು ಹೆಚ್ಚಿನ ನೆಲ ಪ್ರದೇಶ ಅನುಪಾತವನ್ನು (ಫ್ಲೋರ್ ಏರಿಯಾ ರೇಷಿಯೋ)"ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (2) ನೇ ಉಪ-ಪ್ರಕರಣದಲ್ಲಿ "ವಸತಿಗೃಹಗಳ ತಾರಾಪ್ರವರ್ಗದ" ಎಂಬ ಪದಗಳ ತರುವಾಯ "ಶಿಕ್ಷಣ ಸಂಸ್ಥೆಗಳು, ಹೈಟೆಕ್ ಆಸ್ಪತ್ರೆಗಳು ಮತ್ತು ಬ್ಯಾಂಕಿಂಗ್ ಸಂಸ್ಥೆಗಳು" ಎಂಬ ಪದಗಳನ್ನು ಸೇರಿಸತಕ್ಕದ್ದು.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "4ನೇ ಖಂಡದಲ್ಲಿ ಸೇರಿಸಲು ಉದ್ದೇಶಿಸಲಾದ 14-ಬಿ ಪ್ರಕರಣದಲ್ಲಿ"

(i) (1) ನೇ ಉಪ-ಪ್ರಕರಣದಲ್ಲಿ "ಶೇಕಡಾ ನೂರರಷ್ಟು ಹೆಚ್ಚಿನ ನೆಲಪ್ರದೇಶ ಅನುಪಾತವನ್ನು (ಫ್ಲೋರ್ ಏರಿಯಾ ರೇಷಿಯೋ)" ಎಂಬ ಪದಗಳಿಗೆ ಶೇಕಡಾ ನೂರರಷ್ಟು ಹೆಚ್ಚಿನ ನೆಲಪ್ರದೇಶ ಅನುಪಾತವನ್ನು (ಫ್ಲೋರ್ ಏರಿಯಾ ರೇಷಿಯೋ) ಎಂಬ ಪದಗಳನ್ನು ಪ್ರತಿನಿಯೋಜಿಸತಕ್ಕದ್ದು.

(ii) (2) ನೇ ಉಪ-ಪ್ರಕರಣದಲ್ಲಿ "ವಸತಿ ಗೃಹಗಳ ತಾರಾಪ್ರವರ್ಗದ" ಎಂಬ ಪದಗಳ ತರುವಾಯ "ಶಿಕ್ಷಣ ಸಂಸ್ಥೆಗಳು, ಹೈಟೆಕ್ ಆಸ್ಪತ್ರೆಗಳು ಮತ್ತು ಬ್ಯಾಂಕಿಂಗ್ ಸಂಸ್ಥೆಗಳು"ಎಂಬ ಪದಗಳನ್ನು ಸೇರಿಸತಕ್ಕದ್ದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ-4 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "ಖಂಡ-4 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ-4 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ-5ಕ್ಕೆ ತಿದ್ದುಪಡಿ

ಶ್ರೀ ಎಂ.ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) :— ಖಂಡ 5ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

"5ನೇ ಖಂಡದಲ್ಲಿ (ii)ನೇ ಉಪಖಂಡದಲ್ಲಿ ಸೇರಿಸಲು ಉದ್ದೇಶಿಸಲಾದ (3)ನೇ ಉಪ-ಪ್ರಕರಣದಲ್ಲಿ "ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಯಾವುದೇ ಮಂಡಲಿ, ಪ್ರಾಧಿಕಾರ ಅಥವಾ ನಿಕಾಯಕ್ಕೆ" ಎಂಬ ಪದಗಳ ತರುವಾಯ ಅಥವಾ "ಯಾವುದೇ ಕಂಪನಿ ಅಥವಾ ವ್ಯಕ್ತಿಯು ಪ್ರವರ್ತಿಸಿದ ಅಥವಾ ಕಾರ್ಯಗತಗೊಳಿಸಿದ ಮತ್ತು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರವು ಅನುಮೋದಿಸಿದ ಒಂದು ಮೂಲ ಸೌಲಭ್ಯ ಯೋಜನೆಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, 5ನೇ ಖಂಡದಲ್ಲಿ (ii)ನೇ ಉಪ-ಖಂಡದಲ್ಲಿ ಸೇರಿಸಲು ಉದ್ದೇಶಿಸಲಾದ (3)ನೇ ಉಪ-ಪ್ರಕರಣದಲ್ಲಿ ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಯಾವುದೇ ಮಂಡಲಿ, ಪ್ರಾಧಿಕಾರ ಅಥವಾ ನಿಕಾಯಕ್ಕೆ ಎಂಬ ಪದಗಳ ತರುವಾಯ ಅಥವಾ ಯಾವುದೇ ಕಂಪನಿ ಅಥವಾ ವ್ಯಕ್ತಿಯು ಪ್ರವರ್ತಿಸಿದ ಅಥವಾ ಕಾರ್ಯಗತಗೊಳಿಸಿದ ಮತ್ತು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರವು ಅನುಮೋದಿಸಿದ ಒಂದು ಮೂಲ ಸೌಲಭ್ಯ ಯೋಜನೆಗೆ ಎಂಬ ಪದಗಳನ್ನು ಸೇರಿಸತಕ್ಕದ್ದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ-5 ಕ್ಕೆ ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, ಖಂಡ-5, ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ-5 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು.

ಖಂಡ-6ಕ್ಕೆ ತಿದ್ದುಪಡಿ:

ಶ್ರೀ ಎಂ.ಎಸ್. ಪಾಟೀಲ್ (ನಗರಾಭಿವೃದ್ಧಿ ಸಚಿವರು) :— ಖಂಡ-6ಕ್ಕೆ ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ.

``6ನೇ ಖಂಡದಲ್ಲಿ ಸೇರಿಸಲು ಉದ್ದೇಶಿಸಿರುವ 18-ಎ ಪ್ರಕರಣದಲ್ಲಿ,-

(1) ಶೀರ್ಷಿಕೆಯಲ್ಲಿ "ನಿರ್ಧಿಷ್ಟ ಪ್ರದೇಶಗಳಲ್ಲಿ" ಎಂಬ ಪದಗಳನ್ನು ಬಿಟ್ಟು ಬಿಡತಕ್ಕದ್ದು.

(2) (1)ನೇ ಉಪ-ಪ್ರಕರಣದಲ್ಲಿ "ನಿಯಮಿಸಬಹುದಾದಂತೆ" ಎಂಬ ಪದಗಳ ತರುವಾಯ "ಆದರೆ ಮೇಲಿನ ಎಲ್ಲಾ ವಿಧಿಸುವಿಕೆಗಳು ಸೇರಿದಂತೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(3) (5)ನೇ ಉಪಪ್ರಕರಣದಲ್ಲಿ "ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಮಂಡಳಿ, ಪ್ರಾಧಿಕಾರ ಅಥವಾ ನಿಕಾಯಕ್ಕೆ" ಎಂಬ ಪದಗಳ ತರುವಾಯ "ಅಥವಾ ಯಾವುದೇ ಒಂದು ಕಂಪನಿ ಅಥವಾ ವ್ಯಕ್ತಿಯು ಪ್ರವರ್ತಿಸಿದ ಮತ್ತು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರವು ಅನುಮೋದಿಸಿದ ಒಂದು ಮೂಲ ಸೌಲಭ್ಯ ಯೋಜನೆಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

ಅಧ್ಯಕ್ಷರು :— ಪ್ರಸ್ತಾಪ ಏನೆಂದರೆ, 6ನೇ ಖಂಡದಲ್ಲಿ ಸೇರಿಸಲು ಉದ್ದೇಶಿಸಿರುವ 18-ಎ ಪ್ರಕರಣದಲ್ಲಿ-

(1) ಶೀರ್ಷಿಕೆಯಲ್ಲಿ "ನಿರ್ಧಿಷ್ಟ ಪ್ರದೇಶಗಳಲ್ಲಿ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(2) (1)ನೇ ಉಪ-ಪ್ರಕರಣದಲ್ಲಿ "ನಿಯಮಿಸಬಹುದಾದಂತೆ" ಎಂಬ ಪದಗಳ ತರುವಾಯ "ಆದರೆ ಮೇಲಿನ ಎಲ್ಲಾ ವಿಧಿಸುವಿಕೆಗಳು ಸೇರಿದಂತೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

(3) (5)ನೇ ಉಪ-ಪ್ರಕರಣದಲ್ಲಿ "ರಾಜ್ಯ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ಮಂಡಳಿ, ಪ್ರಾಧಿಕಾರ ಅಥವಾ ನಿಕಾಯಕ್ಕೆ" ಎಂಬ ಪದಗಳ ತರುವಾಯ "ಅಥವಾ ಯಾವುದೇ ಒಂದು ಕಂಪನಿ ಅಥವಾ ವ್ಯಕ್ತಿಯು ಪ್ರವರ್ತಿಸಿದ ಮತ್ತು ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರವು ಅನುಮೋದಿಸಿದ ಒಂದು ಮೂಲ ಸೌಲಭ್ಯ ಯೋಜನೆಗೆ" ಎಂಬ ಪದಗಳನ್ನು ಸೇರಿಸತಕ್ಕದ್ದು.

<u>ಖಂಡ-6 ತಿದ್ದುಪಡಿಯಾದ ರೀತಿಯಲ್ಲಿ ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.</u>

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "ಖಂಡ 6 ತಿದ್ದುಪಡಿಯಾದ ರೀತಿಯಲ್ಲಿ ಈ ವಿಧೇಯಕದ ಅಂಗವಾಗಿರುತ್ತದೆ."

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ಖಂಡ-6 ತಿದ್ದುಪಡಿಯಾದ ರೀತಿಯಲ್ಲಿ ವಿಧೇಯಕಕ್ಕೆ ಸೇರಿಸಲ್ಪಟ್ಟಿತು</u>

<u>ಖಂಡ-7, 8, 9 ಮತ್ತು 10 ಎರಡೂ ಸೇರಿದಂತೆ:</u>

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "ಖಂಡ-7, 8, 9 ಮತ್ತು 10 ಎರಡೂ ವಿಧೇಯಕಕ್ಕೆ ಸೇರಿಸಲ್ಪಟ್ಟಿತು."

<u>ಖಂಡ-1 ಇತ್ಯಾದಿ</u>

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

<u>ಪ್ರಸ್ತಾವದ ಅಂಗೀಕಾರ</u>

ಶ್ರೀ ಎಂ.ಎಸ್. ಪಾಟೀಲ್ (ನಗರಾಭಿವೃದ್ಧಿ ಮಂತ್ರಿಗಳು) :— ಮಾನ್ಯ ಅಧ್ಯಕ್ಷರೆ, ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ, ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ, "ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ 1998ನೇ ಸಾಲಿನ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನೆ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿಯಾದ ರೀತಿಯಲ್ಲಿ ಅಂಗೀಕರಿಸುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಆ) ಕರ್ನಾಟಕ ಸ್ಟಾಂಪು (ಮೂರನೇ ತಿದ್ದುಪಡಿ) ವಿಧೇಯಕ,1999 ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :— ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಸ್ಟಾಂಪು (ಮೂರನೇ ತಿದ್ದುಪಡಿ) ವಿಧೇಯಕವನ್ನು ಈ ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ:

``1999ರ ಕರ್ನಾಟಕ ಸ್ಟಾಂಪು (ಮೂರನೇ ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು.

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :— ಮಾನ್ಯ ಅಧ್ಯಕ್ಷರೆ, 1999ರ ಕರ್ನಾಟಕ ಸ್ಟಾಂಪು (ಮೂರನೇ ತಿದ್ದುಪಡಿ) ವಿಧೇಯಕವನ್ನು ಈ ಸಭೆಯ ಮುಂದೆ ನಾನು ಮಂಡಿಸುತ್ತೇನೆ.

ಅಧ್ಯಕ್ಷರು :— ವಿಧೇಯಕವನ್ನು ಮಂಡಿಸಲಾಗಿದೆ. - ಸಹಬಂಧ 1

(6) ವಿತ್ತೀಯ ಕಾರ್ಯಕಲಾಪಗಳು

(ಅ) 1999-2000ನೇ ಸಾಲಿನ ಪೂರಕ ಅಂದಾಜುಗಳನ್ನು (ಮೊದಲನೆಯ ಕಂತು) ಮಂಡಿಸುವುದು.

ಶ್ರೀ ಸಿದ್ಧರಾಮಯ್ಯ (ಉಪ ಮುಖ್ಯಮಂತ್ರಿಯವರು) :— ಮಾನ್ಯ ಅಧ್ಯಕ್ಷರೆ ಭಾರತದ ಸಂವಿಧಾನದ 2005ನೇ ಒಂದನೇ ಅನುಚ್ಛೇದದ ಮೇರೆಗೆ 1999-2000 ನೇ ಸಾಲಿನ ಪೂರಕ ಅಂದಾಜುಗಳ ಮೇಲಿನ ಮೊದಲನೇ ಕಂತನ್ನು ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ.